ಸೋಮವಾರ, ಏಪ್ರಿಲ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 95 | ಪುಟ 12
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಕೋವಿಡ್ ಸಂದರ್ಭದಲ್ಲಿ ಉದ್ಯೋಗ ನಷ್ಟ ಅನುಭವಿಸಿದವರು ಟ್ರೆಂಡಿಂಗ್ ಕೋರ್ಸ್ ಮಾಡಿಕೊಂಡು ಉದ್ಯೋಗ ಸೃಷ್ಟಿಸಿಕೊಂಡಿದ್ದರು. ಅದರಲ್ಲಿ ಮೆಡಿಕಲ್ ಕೋಡಿಂಗ್ ಕೂಡ ಒಂದು.

ರೇಖಲಗೆರೆ: 15 ಜನರಿಗೆ ಡೆಂಗಿ, ಟೈಫಾಯಿಡ್ 4A
ದೂರಿನಲ್ಲಿರುವ ಆರೋಪಗಳಲ್ಲಿ ಸತ್ಯಾಂಶಗಳಿಲ್ಲ: ಆಯೋಗದ ಪತ್ರ
ಅನುಭವ ಮಂಟಪ
ಕಾವೇರಿ: ವ್ಯವಹಾರ ಮುಂದು, ವಿವಾದ ಹಿಂದು
ಪ್ರಚಾರದಿಂದ ದೂರ ಉಳಿದ ಬಾಲಚಂದ್ರ,ರಮೇಶ 9
ಮಮತಾ ವಿರುದ್ಧ ಆಯೋಗ ಕ್ರಮ? 9

ಸಕ್ಕರೆ ಕಾಯಿಲೆಯ
ಅಡ್ಡ ಪರಿಣಾಮಗಳ ಬಗ್ಗೆ ಚಿಂತೆಯೇ?
ಮಧುಮೇಹ -ಎನ್ (ಮಧುಮೇಹ ನಿವಾರಣ್)
ಸಕ್ಕರೆ ಕಾಯಿಲೆಯ ಅಡ್ಡ ಪರಿಣಾಮಗಳಿಂದ ಸರ್ವಾಂಗಗಳನ್ನು
ಕಾಪಾಡುವ ಆಯುರ್ವೇದಿಕ್ ಔಷಧಿ ಮಧುಮೇಹ -ಎನ್
ಸದಾ ಉಪಯೋಗಿಸಿರಿ ಮತ್ತು ಆರೋಗ್ಯಕರ ಜೀವನ ಸಾಗಿಸಿ
From the house of A & J Health Care, Bangalore
For a Healthy Society
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: Ph: 8762226000, 9243112373. aj_healthcare@yahoo.co.in

ಕೊರೊನಾ ಸೋಂಕು ಹೆಚ್ಚಳ: ಮರಣ ಪ್ರಮಾಣ ತಡೆಗೆ ಪ್ರಧಾನಿ ನಿರ್ದೇಶನ

ಕಠಿಣ ನಿಯಂತ್ರಣ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆರೋಗ್ಯ ರಕ್ಷಣೆಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಹೆಚ್ಚಿಸಿ ಕೋವಿಡ್-19ನಿಂದ ಸಂಭವಿಸುವ ಮರಣ ಪ್ರಮಾಣ ಕಡಿಮೆ



ಮಾಡಬೇಕು ಮತ್ತು ಸೋಂಕು ಹೆಚ್ಚಾಗಿರುವ ಸ್ಥಳಗಳಲ್ಲಿ ಕಠಿಣ ನಿರ್ಬಂಧಗಳನ್ನು ಜಾರಿಗೊಳಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳಿಗೆ ಸೂಚಿಸಿದ್ದಾರೆ.

ದೇಶದಲ್ಲಿ ಕೋವಿಡ್ ಪ್ರಕರಣಗಳು ತೀವ್ರ ಗತಿಯಲ್ಲಿ ಹೆಚ್ಚುತ್ತಿರುವುದರಿಂದ ಭಾನುವಾರ ಉನ್ನತ ಮಟ್ಟದ ಸಭೆ ನಡೆಸಿದ ಅವರು, ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು ಮತ್ತು ಲಸಿಕೆ ಅಭಿಯಾನ ಕುರಿತು ಪರಾಮರ್ಶೆ ನಡೆಸಿದರು.

ವೆಂಟಿಲೇಟರ್‌ಗಳ ಕೊರತೆಯಾಗದಂತೆ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು ಎಂದು ರಾಜ್ಯ ಸರ್ಕಾರಗಳಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

4A ಪುಟ ನೋಡಿ

‘2–3 ವಾರ ಕಾರ್ಯಕ್ರಮ ನಿರ್ಬಂಧಿಸಿ’

ಬೆಂಗಳೂರು: ‘ನಗರದಲ್ಲಿ ಏ.20ರ ಸುಮಾರಿಗೆ ದಿನಕ್ಕೆ 6,500 ಪ್ರಕರಣಗಳು ವರದಿಯಾಗುವ ಸಾಧ್ಯತೆಯಿದೆ. ಅವರಲ್ಲಿ ಶೇ 10 ರಷ್ಟು ಮಂದಿ ಆಸ್ಪತ್ರೆಗೆ ದಾಖಲಾದರೂ ಆರೋಗ್ಯ ವ್ಯವಸ್ಥೆಯಲ್ಲಿ ಏರುಪೇರಾಗಲಿದೆ’ ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಡಾ.ಗಿರಿಧರ್ ಬಾಬು ಎಚ್ಚರಿಸಿದ್ದಾರೆ.

ಈ ಬಗ್ಗೆ ಅವರು ಸರಣಿ ಟ್ವೀಟ್ ಮಾಡಿದ್ದಾರೆ. ‘ನಗರದಲ್ಲಿ ಸದ್ಯ ಪ್ರತಿನಿತ್ಯ ಮೂರು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ಕಳೆದ ಎರಡು ವಾರಗಳಿಂದ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಇದನ್ನು ಆಧರಿಸಿ ಭಾರತೀಯ ವಿಜ್ಞಾನ ಸಂಸ್ಥೆ ಸೇರಿದಂತೆ ವಿವಿಧ ರಾಷ್ಟ್ರ ಮಟ್ಟದ ಸಂಸ್ಥೆಗಳ ವಿಜ್ಞಾನಿಗಳು ಅಧ್ಯಯನ ನಡೆಸಿ, ಪ್ರಕರಣಗಳ ಸಂಖ್ಯೆ ಎಷ್ಟು ತಲುಪಬಹುದು ಎಂಬ ಬಗ್ಗೆ ಊಹೆ ಮಾಡಿದ್ದಾರೆ. ಅವರ ಅನುಸಾರ ಸೋಂಕು ದೃಢ ಪ್ರಮಾಣ ಇದೇ ವೇಗದಲ್ಲಿ ಏರಿಕೆ ಕಂಡಲ್ಲಿ ಮುಂದಿನ 15 ದಿನಗಳ ವೇಳೆಗೆ ಗರಿಷ್ಠ ಸಂಖ್ಯೆ ತಲುಪಲಿದೆ. ಹಾಗಾಗಿ, ಈಗಿನಿಂದಲೇ ಕ್ರಮಕೈಗೊಳ್ಳಬೇಕು. ಇಲ್ಲವಾದಲ್ಲಿ ಮಹಾರಾಷ್ಟ್ರದ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಲಿದೆ’ ಎಂದು ತಿಳಿಸಿದ್ದಾರೆ.

4A ಪುಟ ನೋಡಿ

ನಿಯಂತ್ರಣಕ್ಕೆ ಐದು ಅಂಶಗಳ ಸೂತ್ರ

ಪರೀಕ್ಷೆ, ಸಂಪರ್ಕಿತರ ಪತ್ತೆ, ಚಿಕಿತ್ಸೆ, ಕೋವಿಡ್-19 ನಿಯಂತ್ರಣದ ನಡವಳಿಕೆಗಳು ಮತ್ತು ಲಸಿಕೆ ಹಾಕಿಸಿಕೊಳ್ಳುವ ಸೂತ್ರಗಳನ್ನು ಪಾಲಿಸುವಂತೆ ಪ್ರಧಾನಿ ನರೇಂದ್ರ ಮೋದಿ ಸೂಚಿಸಿದ್ದಾರೆ.

ಈ ಸೂತ್ರಗಳನ್ನು ಗಂಭೀರವಾಗಿ ಮತ್ತು ಬದ್ಧತೆಯಿಂದ ಪಾಲಿಸಿದರೆ ಈ ಸಾಂಕ್ರಾಮಿಕ ಕಾಯಿಲೆ ಹಬ್ಬುವುದನ್ನು ನಿಯಂತ್ರಿಸಬಹುದು. ಈ ಕಾರ್ಯದಲ್ಲಿ ಜನರು ಭಾಗಿಯಾಗಬೇಕು ಮತ್ತು ಜನ ಆಂದೋಲನವಾಗಬೇಕು ಎಂದು ಸಲಹೆ ನೀಡಿದ್ದಾರೆ.

ಜಿಮ್ ತೆರೆಯಲು ಅನುಮತಿ

ಬೆಂಗಳೂರು: ಕೋವಿಡ್ ಮಾರ್ಗಸೂಚಿಗಳನ್ನು ಪುನಃ ಪರಿಷ್ಕರಿಸಿರುವ ರಾಜ್ಯ ಸರ್ಕಾರ, ಸಾಮರ್ಥ್ಯದ ಶೇಕಡ 50ರಷ್ಟು ಜನರಿಗೆ ಅವಕಾಶ ಕಲ್ಪಿಸಿ ಜಿಮ್ ತೆರೆಯಲು ಅನುಮತಿ ನೀಡಿ ಭಾನುವಾರ ಆದೇಶ ಹೊರಡಿಸಿದೆ.

ಶುಕ್ರವಾರ ಹೊಸ ಮಾರ್ಗಸೂಚಿ ಪ್ರಕಟಿಸಿದ್ದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಜಿಮ್‌ಗಳನ್ನು ಬಂದ್ ಮಾಡುವಂತೆ ಆದೇಶಿಸಿದ್ದರು. ಚಿತ್ರಮಂದಿರಗಳಲ್ಲಿ ಶೇ 50ರಷ್ಟು ಸೀಟುಗಳ ಭರ್ತಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಚಿತ್ರರಂಗದ ಪ್ರಮುಖರ ಒತ್ತಡಕ್ಕೆ ಮಣಿದ ಸರ್ಕಾರ, ಮಂಗಳವಾರದವರೆಗೂ (ಏಪ್ರಿಲ್ 7) ಚಿತ್ರಮಂದಿರಗಳಲ್ಲಿ ಪೂರ್ಣ ಪ್ರಮಾಣದ ಸೀಟುಗಳನ್ನು ಭರ್ತಿ ಮಾಡಲು ಅನುಮತಿ ನೀಡಿ ಶನಿವಾರ ರಾತ್ರಿ ಪರಿಷ್ಕೃತ ಆದೇಶ ಹೊರಡಿಸಿತ್ತು.

ಜಿಮ್‌ಗಳನ್ನೂ ತೆರೆಯಲು ಅನುಮತಿ ನೀಡುವಂತೆ ಕೋರಿ ರಾಜ್ಯ ಜಿಮ್ ಮಾಲೀಕರು ಮತ್ತು ತರಬೇತುದಾರರ ನಿಯೋಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿತ್ತು. ಆಗ್ರಹಕ್ಕೆ ಮಣಿದಿರುವ ಮುಖ್ಯಮಂತ್ರಿ, ಜಿಮ್ ತೆರೆಯಲು ಅನುಮತಿ ನೀಡುವಂತೆ ಸೂಚಿಸಿದ್ದರು. ಬಳಿಕ ಮಾರ್ಗಸೂಚಿ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಜಿಮ್‌ನ ಸಾಮರ್ಥ್ಯದ ಅರ್ಧದಷ್ಟು ಮಂದಿಗೆ ಮಾತ್ರ ಅವಕಾಶ ಕಲ್ಪಿಸಬೇಕು. ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಮತ್ತು ಸ್ಯಾನಿಟೈಸರ್ ಬಳಕೆ ಕಡ್ಡಾಯ. ಪ್ರತಿ ವ್ಯಕ್ತಿಯ ಬಳಕೆಯ ಬಳಿಕ ಜಿಮ್ ಸಲಕರಣೆಗಳನ್ನು ಸ್ಯಾನಿಟೈಸ್ ಮಾಡಬೇಕು. ಷರತ್ತುಗಳನ್ನು ಉಲ್ಲಂಘಿಸಿದರೆ ಕೋವಿಡ್ ಸಾಂಕ್ರಾಮಿಕ ಅಂತ್ಯಗೊಳ್ಳುವವರೆಗೂ ಅಂತಹ ಜಿಮ್‌ಗಳನ್ನು ಮುಚ್ಚಲು ಆದೇಶಿಸಲಾಗುವುದು ಎಂದು ಮುಖ್ಯ ಕಾರ್ಯದರ್ಶಿ ಹೊಸ ಮಾರ್ಗಸೂಚಿಯಲ್ಲಿ ತಿಳಿಸಿದ್ದಾರೆ.

ಮಹಾರಾಷ್ಟ್ರ: ವಾರಾಂತ್ಯದ ಲಾಕ್‌ಡೌನ್ ಜಾರಿ

ಮುಂಬೈ: ಕೋವಿಡ್ ಪ್ರಕರಣಗಳ ತೀವ್ರ ಏರಿಕೆ ಹಿನ್ನೆಲೆಯಲ್ಲಿ ನಿಯಂತ್ರಣ ಕ್ರಮವಾಗಿ ಮಹಾರಾಷ್ಟ್ರ ಸರ್ಕಾರ ವಾರಾಂತ್ಯದಲ್ಲಿ ಲಾಕ್‌ಡೌನ್ ಜಾರಿಗೊಳಿಸಲು ನಿರ್ಧರಿಸಿದೆ. 4A

ನಕ್ಸಲರ ಅಟ್ಟಹಾಸ 22 ಯೋಧರು ಹುತಾತ್ಮ

ರಾಯಪುರ, ಛತ್ತೀಸಗಡ (ಪಿಟಿಐ): ಮಾವೋವಾದಿ ನಕ್ಸಲರು ಶನಿವಾರ ಇಲ್ಲಿನ ಅರಣ್ಯ ಪ್ರದೇಶದಲ್ಲಿ ನಡೆಸಿದ ಗುಂಡಿನ ದಾಳಿಯಲ್ಲಿ ಯೋಧರು, ಭದ್ರತಾ ಸಿಬ್ಬಂದಿ ಸೇರಿ ಒಟ್ಟು 22 ಮಂದಿ ಹುತಾತ್ಮರಾಗಿದ್ದಾರೆ. ಕಳೆದ ಒಂದು ವರ್ಷದಲ್ಲಿ ನಡೆದಿರುವ ಭೀಕರ ದಾಳಿ ಇದಾಗಿದೆ. ಕನ್ನಡಿಗ, ‘ಕೋಬ್ರಾ’ ಕಮಾಂಡೊ ಎಲ್ಲಣ್ಣ ಸಮ್ಮೇಶ್ ಸೇರಿದಂತೆ ಗುಂಡಿನ ಚಕಮಕಿಯಲ್ಲಿ ಒಟ್ಟು 31 ಜನರು ಗಾಯಗೊಂಡಿದ್ದಾರೆ.

ಮೃತ 22 ಜನರಲ್ಲಿ ಸಿಆರ್‌ಪಿಎಫ್‌ನ 8 ಮಂದಿ, ‘ಕೋಬ್ರಾ’ (ಕಮಾಂಡೊ ಬೆಟಾಲಿಯನ್ಸ್ ಫಾರ್ ರೆಸಲೂಟ್ ಆ್ಯಕ್ಷನ್)ದ ಏಳು ಕಮಾಂಡೊಗಳು, ಬಸ್ತಾರಿಯಾ ತುಕಡಿಯ ಒಬ್ಬ ಯೋಧ ಸೇರಿದ್ದಾರೆ. ಸಿಆರ್‌ಪಿಎಫ್‌ನ ಒಬ್ಬ ಇನ್‌ಸ್ಪೆಕ್ಟರ್ ನಾಪತ್ತೆಯಾಗಿದ್ದಾರೆ. ಮಾವೋವಾದಿಗಳ ಪ್ರಾಬಲ್ಯವಿರುವ ಗಡಿ ಜಿಲ್ಲೆಯ ಸುಕ್ಮಾದ ಅರಣ್ಯ ಭಾಗದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿದ್ದವರನ್ನು ಸುತ್ತುವರಿದು ನಕ್ಸಲರು ಗುಂಡಿನ ದಾಳಿ ನಡೆಸಿದ್ದರು.

‘ಬಿಜಾಪುರ ಹಾಗೂ ಸುಕ್ಮಾ ಜಿಲ್ಲೆಗಳ ಗಡಿಗೆ ಹೊಂದಿಕೊಂಡ ಅರಣ್ಯದಲ್ಲಿ ಶನಿವಾರ ಗುಂಡಿನ ಚಕಮಕಿ ನಡೆದಿದ್ದು, ಐವರು ಯೋಧರು ಹುತಾತ್ಮರಾಗಿದ್ದರು. ಭಾನುವಾರ ಅದೇ ಸ್ಥಳದಲ್ಲಿ 17 ಯೋಧರ ಶವ ಪತ್ತೆಯಾಗಿದೆ. ಯೋಧರ ಬಳಿಯಿದ್ದ ಶಸ್ತ್ರಾಸ್ತ್ರಗಳು ಕಾಣೆಯಾಗಿವೆ’ ಎಂದು ಛತ್ತೀಸಗಡದ ಡಿಐಜಿ (ನಕ್ಸಲ್ ನಿಗ್ರಹ ಕಾರ್ಯಾಚರಣೆ) ಒ.ಪಿ.ಪಾಲ್ ಅವರು ತಿಳಿಸಿದ್ದಾರೆ.

ಸುಮಾರು 4 ಗಂಟೆ ಗುಂಡಿನ ಚಕಮಕಿ ನಡೆದಿದೆ. ತಂಡವು ತರೆಮ್‌ನಿಂದ ಹೊರಟು ಜೋನಾಗುಡ ಅರಣ್ಯದ ಮೂಲಕ ಹೋಗುವಾಗ ದಾಳಿ ನಡೆದಿದೆ.

4B ಪುಟ ನೋಡಿ

ಬಿಜಾಪುರ ಜಿಲ್ಲೆಯ ಜೋಗ್ದಲ್‌ಪುರದ ಶಿಬಿರದಲ್ಲಿ ಯೋಧರೊಬ್ಬರ ದೇಹವನ್ನು ಹೊತ್ತೊಯ್ಯುತ್ತಿರುವ ಸಿಆರ್‌ಪಿಎಫ್ ಪಡೆಯ ಯೋಧರು

> **ನಮ್ಮ ಯೋಧರು, ಭದ್ರತಾ ಸಿಬ್ಬಂದಿ ಜೀವ ಕಳೆದುಕೊಂಡಿದ್ದಾರೆ. ಛತ್ತೀಸಗಡದಲ್ಲಿ ನಕ್ಸಲರ ದಾಳಿಗೆ ತಕ್ಕ ಪ್ರತ್ಯುತ್ತರವನ್ನು ಸಕಾಲದಲ್ಲಿ ನೀಡಲಿದ್ದೇವೆ**
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಒಳ ಪುಟ

ಮೊಬೈಲ್ ಸೇವಾ ಶುಲ್ಕ: ಸಮೀಕ್ಷೆಗೆ ಟ್ರಾಯ್ ಚಿಂತನೆ 8

ಕಾರ್ಯಕ್ರಮದಲ್ಲಿ ಸಚಿವ ಕೆ. ಎಸ್. ಈಶ್ವರಪ್ಪ ಭಾಷಣಕ್ಕೆ ಹೊರಡುವಾಗ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಮತ್ತು ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಚರ್ಚೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

ಮುಖಾಮುಖಿಯಾದರೂ ಅಂತರ ಕಾಯ್ದುಕೊಂಡ ಸಿ.ಎಂ–ಈಶ್ವರಪ್ಪ

ದಾವಣಗೆರೆ: ಮುಖ್ಯಮಂತ್ರಿ ಯಡಿಯೂರಪ್ಪ ಅವರ ವಿರುದ್ಧವೇ ಪತ್ರ ಬರೆದಿದ್ದ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಆ ಪ್ರಕರಣದ ನಂತರ ಮೊದಲ ಬಾರಿಗೆ ಭಾನುವಾರ ಸಿ.ಎಂ. ಜತೆಗೆ ವೇದಿಕೆ ಹಂಚಿಕೊಂಡರು. ಆದರೆ ಪರಸ್ಪರ ಮುಖ ಕೊಟ್ಟು ಮಾತನಾಡಲಿಲ್ಲ.

ಕಾಗಿನೆಲೆ ಕನಕಪೀಠದ ಹರಿಹರ ಬೆಳ್ಳೂಡಿ ಶಾಖಾ ಮಠದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಇಬ್ಬರೂ ಅಂತರ ಕಾಯ್ದುಕೊಂಡದ್ದು ಎದ್ದುಕಂಡಿತು. ‘ಕನಕ ಜಯಂತಿಗೆ ರಜೆ ನೀಡಿದವರು ಮುಖ್ಯಮಂತ್ರಿ ಯಡಿಯೂರಪ್ಪ’ ಎಂದು ಭಾಷಣ ಮಾಡುವಾಗ ಈಶ್ವರಪ್ಪ ಪ್ರಸ್ತಾಪಿಸಿದರಾದರೂ ಅವರ ನಡುವೆ ಆತ್ಮೀಯತೆ ಕಂಡುಬರಲಿಲ್ಲ.

ಕಾರ್ಯಕ್ರಮಕ್ಕಿಂತ ಮೊದಲು ಸುದ್ದಿಗಾರರ ಜತೆಗೆ ಮಾತನಾಡಲು ಈಶ್ವರಪ್ಪ ನಿರಾಕರಿಸಿದರು. ಯಡಿಯೂರಪ್ಪ ಮಾತನಾಡಿದರಾದರೂ, ಈಶ್ವರಪ್ಪ ಅವರ ಪತ್ರದ ಬಗ್ಗೆ ಕೇಳಿದಾಗ, ‘ಅದೆಲ್ಲ ಯಾಕೆ ಚರ್ಚೆ ಮಾಡುತ್ತೀರಿ’ ಎಂದಷ್ಟೇ ಪ್ರತಿಕ್ರಿಯಿಸಿದರು.

ನ್ಯಾಯಯುತ ತನಿಖೆಗೆ ಆಗ್ರಹಿಸಿ ಪೊಲೀಸ್ ಕಮಿಷನರ್‌ಗೆ ಸಂತ್ರಸ್ತೆ ಪತ್ರ

ಎಸ್‌ಐಟಿಯಿಂದ ಸಾಕ್ಷ್ಯ ನಾಶ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ನ್ಯಾಯಸಮ್ಮತವಾಗಿ ಸಿ.ಡಿ ಪ್ರಕರಣದ ತನಿಖೆ ನಡೆಸುತ್ತಿಲ್ಲ. ಬದಲಾಗಿ ಪ್ರಕರಣದ ಸಾಕ್ಷ್ಯಗಳನ್ನು ನಾಶಪಡಿಸಿದ್ದಾರೆ’ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.

ಈ ಸಂಬಂಧ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಪತ್ರ ಬರೆದಿದ್ದು, ಯಾವುದೇ ಒತ್ತಡಕ್ಕೆ ಮಣಿಯದೇ ಆರೋಪಿಯ ವಿಚಾರಣೆ ನಡೆಸಬೇಕು’ ಎಂದೂ ಮನವಿ ಮಾಡಿದ್ದಾರೆ.

‘ಪ್ರಕರಣದ ಆರೋಪಿಯಾಗಿರುವ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ನೀಡಿರುವ ದೂರಿನಲ್ಲಿ ನನ್ನ ಹೆಸರು ಉಲ್ಲೇಖವಾಗಿಲ್ಲ. ಆದರೂ, ಎಸ್‌ಐಟಿ ಅಧಿಕಾರಿಗಳು ನಾನು ವಾಸವಿದ್ದ ಪಿ.ಜಿ ಮೇಲೆ ದಾಳಿ ಮಾಡಿ ಸಾಕ್ಷ್ಯಗಳನ್ನು ನಾಶ ಮಾಡಿದ್ದಾರೆ. ಈ ಮೂಲಕ ನನ್ನನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಲು ಸರ್ಕಾರದ ಒತ್ತಡಕ್ಕೆ ಎಸ್‌ಐಟಿ ಮಣಿದಿದೆ’ ಎಂದು ಸಂತ್ರಸ್ತ ಯುವತಿ ಪತ್ರದಲ್ಲಿ ಆರೋಪಿಸಿದ್ದಾರೆ.

ನಾನು ಸಂತ್ರಸ್ತೆಯೋ, ಆರೋಪಿಯೋ?: ‘ಪ್ರಕರಣ ಸಂಬಂಧ ಎಸ್‌ಐಟಿ ತಂಡ ನನ್ನ ವಿಚಾರಣೆ ನಡೆಸಿದೆ. ಅಧಿಕಾರಿಗಳ ಮುಂದೆ ಎಲ್ಲ ಮಾಹಿತಿಯನ್ನು ನೀಡಿದ್ದೇನೆ. ವೈದ್ಯಕೀಯ ಪರೀಕ್ಷೆ, ಹೇಳಿಕೆ ದಾಖಲು, ಆರ್‌.ಟಿ.ನಗರದ ಪಿಜಿ ಹಾಗೂ ಕೃತ್ಯ ನಡೆದಿದ್ದ ರಮೇಶ ಜಾರಕಿಹೊಳಿ ಅವರ ‘ಮಂತ್ರಿ ಗ್ರೀನ್’ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸ್ಥಳ ಪಂಚನಾಮೆಯೂ ನಡೆದಿದೆ. ಬಿಡುವಿಲ್ಲದೆ, ನನ್ನ ವಿಚಾರಣೆ ನಡೆಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

4B ಪುಟ ನೋಡಿ

ಒಂದು ರೂಪಾಯಿಯೂ ನೀಡಿಲ್ಲ: ಸುಧಾಕರ್

ಚಿತ್ರದುರ್ಗ: ‘ಮಾಜಿ ಸಚಿವ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಹಗರಣದಲ್ಲಿ ನನ್ನ ಹೆಸರು ತಳುಕು ಹಾಕಿಕೊಂಡಿರುವುದು ಕಂಡು ಆಚ್ಚರಿಯಾಗಿದೆ.

ನನಗೂ, ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ’ ಎಂದು ಮಾಜಿ ಸಚಿವ ಡಿ.ಸುಧಾಕರ್ ತಿಳಿಸಿದ್ದಾರೆ.

ಚಳ್ಳಕೆರೆಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಭಾನುವಾರ ಮಾತನಾಡಿದ ಅವರು, ‘ಸಿ.ಡಿ ಪ್ರಕರಣದಲ್ಲಿರುವ ಯುವತಿಗೆ ಹಣ ವರ್ಗಾವಣೆ ಮಾಡಿದ್ದೇನೆ ಎಂಬುದು ಸುಳ್ಳು. ಯಾರಿಗೂ ಒಂದು ರೂಪಾಯಿಯನ್ನೂ ನೀಡಿಲ್ಲ. ಎಸ್‌ಐಟಿ ತನಿಖೆಗೆ ಕರೆದರೆ ಸಹಕರಿಸುವೆ. ಸತ್ಯ ಹೇಳಲು ನಾನೇಕೆ ಭಯ ಪಡಬೇಕು’ ಎಂದು ಪ್ರತಿಕ್ರಿಯಿಸಿದ್ದಾರೆ.‘ಯುವತಿಯೊಂದಿಗೆ ದೂರವಾಣಿಯಲ್ಲಿ ಹಲವು ಬಾರಿ ಮಾತನಾಡಿರುವುದಾಗಿ ಮಾಧ್ಯಮಗಳು ಬಿತ್ತರಿಸಿವೆ. ಇದು ತಪ್ಪು ಸಂದೇಶಕ್ಕೆ ಎಡೆಮಾಡಿಕೊಡುತ್ತಿದೆ. ಚಿತ್ರದುರ್ಗದ ರಾಜಕಾರಣಿಯೊಬ್ಬರು ಪ್ರಕರಣದಲ್ಲಿದ್ದಾರೆ ಎಂಬ ಮಾತು ಹಲವು ದಿನಗಳಿಂದ ಕೇಳಿ ಬರುತ್ತಿತ್ತು. ಭಯ ಇದ್ದಿದ್ದರೆ ನ್ಯಾಯಾಲಯದ ಮೆಟ್ಟಿಲೇರಿ ಸುದ್ದಿ ಪ್ರಕಟವಾಗದಂತೆ ತಡೆಯಾಜ್ಞೆ ತರುತ್ತಿದ್ದೆ. ಯಾವುದೇ ತಪ್ಪು ಮಾಡದಿರುವುದರಿಂದ ನಿರ್ಭೀತಿಯಿಂದ ಇದ್ದೇನೆ’ ಎಂದರು.‘ಶಾಸಕ, ಸಚಿವನಾಗಿ ಕೆಲಸ ಮಾಡಿರುವುದರಿಂದ ನಿತ್ಯ ನೂರಾರು ಜನರು ದೂರವಾಣಿಯಲ್ಲಿ ಸಂಪರ್ಕಿಸುತ್ತಾರೆ. ಅವರ ಗುರುತು ಇಟ್ಟುಕೊಳ್ಳುವುದು ಕಷ್ಟ. ಆದರೆ, ಸ್ವತಃ ನಾನು ಯಾರೊಬ್ಬರನ್ನೂ ಸಂಪರ್ಕಿಸಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೊಂದಿಗೆ ಆಪ್ತವಾಗಿರುವ ಕಾರಣಕ್ಕೆ ಇಂತಹ ಪ್ರಕರಣದಲ್ಲಿ ಸಿಲುಕಿಸುವುದು ತಪ್ಪು’ ಎಂದರು.

ತನಿಖೆಯ ವೇಳೆ, ಮಾಜಿ ಸಚಿವ ಡಿ.ಸುಧಾಕರ್ ಸಂತ್ರಸ್ತೆಯ ಜೊತೆ ಮೊಬೈಲ್ ಸಂಪರ್ಕ ಹೊಂದಿದ್ದರು. ಹಣದ ವ್ಯವಹಾರವನ್ನೂ ನಡೆಸಿದ್ದರು ಎಂಬುದಕ್ಕೆ ಸಾಕ್ಷ್ಯ ಲಭಿಸಿದೆ ಎಂದು ಕೆಲವು ಮಾಧ್ಯಮಗಳಲ್ಲಿ ಭಾನುವಾರ ವರದಿಯಾಗಿತ್ತು.

ಪರೀಕ್ಷೆ: ಇಂದು ಸಭೆ

ಬೆಂಗಳೂರು: ರಾಜ್ಯದಲ್ಲಿ 1ರಿಂದ 9ನೇ ತರಗತಿಯ ಮಕ್ಕಳಿಗೆ ಪರೀಕ್ಷೆ ನಡೆಸಬೇಕೇ, ಬೇಡವೇ ಎಂಬುದರ ಕುರಿತು ಸೋಮವಾರ (ಏ.5) ಮಹತ್ವದ ಸಭೆ ನಡೆಯಲಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ನೇತೃತ್ವದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಶಿಕ್ಷಣ ತಜ್ಞರು, ಖಾಸಗಿ ಶಾಲಾ ಸಂಘಟನೆಗಳ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

1ರಿಂದ 9ನೇ ತರಗತಿಗಳಿಗೆ ಲಿಖಿತ ಪರೀಕ್ಷೆ ನಡೆಸದಿರುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ ಎನ್ನಲಾಗಿದೆ. ಲಿಖಿತ ಪರೀಕ್ಷೆ ಬದಲು ಮೌಲ್ಯಾಂಕನ ಪರೀಕ್ಷೆ ನಡೆಸಿ ಮುಂದಿನ ತರಗತಿಗೆ ತೇರ್ಗಡೆ ನೀಡುವ ಬಗ್ಗೆ, ಮೌಲ್ಯಾಂಕನ ಯಾವ ರೀತಿ ಮಾಡಬೇಕು? ಒಂದೆರಡು ದಿನ ಮಕ್ಕಳನ್ನು ಶಾಲೆಗೆ ಕರೆಸಿ ಅವರಿಗೆ ಪ್ರಶ್ನೆಗಳನ್ನು ಕೇಳಿ ಅವರ ಕಲಿಕಾ ಸಾಮರ್ಥ್ಯ ಅಳೆಯಬೇಕಾ ಎಂಬ ವಿಚಾರಗಳು ಸಭೆಯಲ್ಲಿ ಚರ್ಚೆಯಾಗಲಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜನರಿಂದ ಭಾರಿ ವಿರೋಧ ವ್ಯಕ್ತವಾದ ಬಳಿಕ ಹೊರೆ ಇಳಿಕೆಗೆ ಸರ್ಕಾರ ಕ್ರಮ

ಅಭಿವೃದ್ಧಿ ಮಂಜೂರಾತಿ– ಸರ್ಚಾರ್ಜ್ ರದ್ದು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಅಥವಾ ಕಟ್ಟಡ ಅಭಿವೃದ್ಧಿಗೆ ಪರವಾನಗಿ ನೀಡುವ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರ ಅಥವಾ ಸ್ಥಳೀಯ ಆಡಳಿತ ಸಂಸ್ಥೆಯು ಸರ್ಚಾರ್ಜ್ ವಿಧಿಸುವ ಪ್ರಸ್ತಾಪವನ್ನು ಸರ್ಕಾರ ಕೈಬಿಡಲು ಮುಂದಾಗಿದೆ.

ಕಟ್ಟಡ, ನಿವೇಶನ ಅಥವಾ ಭೂಮಿಯ ಅಭಿವೃದ್ಧಿ ವೇಳೆ ಮೇಲ್ತೆರಿಗೆ (ಸರ್ಚಾರ್ಜ್) ಅಥವಾ ಅಭಿವೃದ್ಧಿ ಶುಲ್ಕ ವಿಧಿಸುವುದಕ್ಕೆ ಅವಕಾಶ ಕಲ್ಪಿಸಲು ‘2019’ರ ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳಿಗೆ 37 ಸಿ ನಿಯಮವನ್ನು ಸೇರ್ಪಡೆಗೊಳಿಸಲಾಗಿತ್ತು. ಇದರನ್ವಯ ನಿವೇಶನದ ಅಥವಾ ಜಮೀನಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇ 0.2ರಷ್ಟು ಮೇಲ್ತೆರಿಗೆ ಕೂಡಾ ಸಂಗ್ರಹಿಸಲು 2020ರಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಈ ಕುರಿತು ಸರ್ಕಾರ 2020ರ ಫೆ.25ರಂದು ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸಿತ್ತು. ಹಿಂದಿನ 1965ರ ಕರ್ನಾಟಕ ಯೋಜನಾ ಪ್ರಾಧಿಕಾರಗಳ ಅಧಿಸೂಚನೆಯನ್ನು ಮಾರ್ಪಡುಗೊಳಿಸುವ ಸಲುವಾಗಿ ಸರ್ಕಾರ 2021ರ ಮಾ. 10ರಂದು ಕರಡು ಅಧಿಸೂಚನೆ ಪ್ರಕಟಿಸಿದ್ದು, ಸರ್ಚಾರ್ಜ್ ವಿಧಿಸುವ ಪ್ರಸ್ತಾಪ ಕೈಬಿಡುವುದಾಗಿ ಅದರಲ್ಲಿ ಹೇಳಲಾಗಿದೆ. ಈ ಕರಡು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಕುರಿತ ಅಂತಿಮ ಅಧಿಸೂಚನೆ ಪ್ರಕಟವಾದ ಬಳಿಕವಷ್ಟೇ ಇದು ಜಾರಿಯಾಗಲಿದೆ.

ನಿವೇಶನ ಅಥವಾ ಕಟ್ಟಡ ಅಭಿವೃದ್ಧಿಗೆ ಮಂಜೂರಾತಿ ನೀಡುವಾಗ ವಿಧಿಸುವ ಶುಲ್ಕವನ್ನು ಕಡಿತಗೊಳಿಸುವ ಪ್ರಸ್ತಾಪವೂ ಕರಡು ಅಧಿಸೂಚನೆಯಲ್ಲಿದೆ. ಪಾಲಿಕೆಯ ನಗರ ಯೋಜನೆ ವಿಭಾಗವು ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ (ಸಿ.ಸಿ), ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ನೀಡುವಾಗ ಸರ್ಕಾರದ 2015ರ ಸೆ. 4ರ ಸುತ್ತೋಲೆಯನ್ವಯ ಶುಲ್ಕ ಪಡೆಯುತ್ತಿತ್ತು. ಆದರೆ, ಕೇಂದ್ರ ಸರ್ಕಾರದ ಸೂಚನೆ ಪ್ರಕಾರ 1961ರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪರಿಚ್ಛೇದ 18 ಮತ್ತು 18 ಎ ಅನ್ವಯ ರೂಪಿಸಿರುವ ‘ಕರ್ನಾಟಕ ಯೋಜನಾ ಪ್ರಾಧಿಕಾರ ನಿಮಯ 2019’ಕ್ಕೆ ರಾಜ್ಯ ಸರ್ಕಾರ ತಿದ್ದುಪಡಿ ತಂದಿತ್ತು.

ಬೆಂಗಳೂರು ಮಹಾನಗರ ವ್ಯಾಪ್ತಿಯ ಯೋಜನಾ ಪ್ರದೇಶದಲ್ಲಿ ಶುಲ್ಕ ಮಾರ್ಪಾಡಿನ ವಿವರ (ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ)

ಉದ್ದೇಶ	ಹಿಂದಿನ ಶುಲ್ಕ	ಪರಿಷ್ಕೃತ ಶುಲ್ಕ (ಕರಡಿನ ಪ್ರಕಾರ)
ವಸತಿ	ಶೇ 0.5 (ಕನಿಷ್ಠ ಮೊತ್ತ ₹ 25/ ಚ.ಮೀ)	ಶೇ 0.2 (ಕನಿಷ್ಠ ಮೊತ್ತ ₹ 100/ ಚ.ಮೀ)
ಕೈಗಾರಿಕೆ	ಶೇ 1 (ಕನಿಷ್ಠ ಮೊತ್ತ ₹ 37.5/ಚ.ಮೀ)	ಶೇ 0.3(ಕನಿಷ್ಠ ಮೊತ್ತ ₹ 200/ ಚ.ಮೀ)
ವಾಣಿಜ್ಯ	ಶೇ 1.5 (ಕನಿಷ್ಠ ಮೊತ್ತ ₹ 62.5/ಚ.ಮೀ)	ಶೇ 0.5 (ಕನಿಷ್ಠ ಮೊತ್ತ ₹ 350/ ಚ.ಮೀ)
ಇತರೆ	ಶೇ 0.5 (ಕನಿಷ್ಠ ಮೊತ್ತ ₹ 25/ ಚ.ಮೀ)	ಶೇ 0.2 (ಕನಿಷ್ಠ ಮೊತ್ತ ₹ 100/ ಚ.ಮೀ)

ನಿಯಮ 37–ಎ (1) (ಎ) ಮತ್ತು (ಬಿ) ತಿದ್ದುಪಡಿ ಪ್ರಕಾರ ನಿವೇಶನಕ್ಕೆ ಮತ್ತು ಕಟ್ಟಡಕ್ಕೆ ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ಅಭಿವೃದ್ಧಿ ಶುಲ್ಕವನ್ನು ಪರಿಷ್ಕರಿಸಲಾಗಿತ್ತು. ಶುಲ್ಕವನ್ನು ಮಾರುಕಟ್ಟೆ ಮೌಲ್ಯದ ಜೊತೆ ಜೋಡಿಸಲಾಗಿತ್ತು. ನಗರದಲ್ಲಿ ಜಮೀನಿಗೆ ಹೆಚ್ಚು ಮಾರುಕಟ್ಟೆ ಮೌಲ್ಯ ಇರುವ ಕಡೆಗಳಲ್ಲಿ ಕಟ್ಟಡ ನಿರ್ಮಿಸುವವರಿಗೆ ಮತ್ತು ಅಭಿವೃದ್ಧಿಪಡಿಸುವವರಿಗೆ ಈ ತೆರಿಗೆ ಭಾರವಾಗಿ ಪರಿಣಮಿಸಿತ್ತು. 20X30 ಅಡಿ ವಿಸ್ತೀರ್ಣದಲ್ಲಿ ಮನೆ ನಿರ್ಮಿಸುವುದಕ್ಕೂ ₹ 3–4 ಲಕ್ಷಕ್ಕೂ ಅಧಿಕ ಶುಲ್ಕ ಪಾವತಿಸಬೇಕಾದ ಪ್ರಮೇಯ ಸೃಷ್ಟಿಯಾಗಿತ್ತು. ಇದು ತೀರಾ ದುಬಾರಿಯಾಯಿತು. ಶುಲ್ಕ ಇಳಿಸಬೇಕು ಎಂದು ಅನೇಕರು ಒತ್ತಾಯಿಸಿದ್ದರು.

ಕಟ್ಟಡ ಅಭಿವೃದ್ಧಿಗೆ ಮುಂದಾಗಿದ್ದವರು ಸರ್ಚಾರ್ಜ್ ವಿಧಿಸುವಿಕೆ ಹಾಗೂ ಶುಲ್ಕ ಹೆಚ್ಚಳದಿಂದ ಕಂಗಾಲಾಗಿದ್ದರು. ದುಬಾರಿ ಶುಲ್ಕ ಭರಿಸಲಾಗದೇ ಅನೇಕರು ಕಟ್ಟಡ ನಿರ್ಮಿಸುವ ಯೋಜನೆಯನ್ನೇ ಮುಂದೂಡಿದ್ದರು.ಇದರಿಂದ ಬಿಬಿಎಂಪಿ ವರಮಾನಕ್ಕೂ ಏಟು ಬಿದ್ದಿತ್ತು.

ನಗರದ ಬಿಜೆಪಿ ಶಾಸಕರ ಜೊತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೆಲ ತಿಂಗಳ ಹಿಂದೆ ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ಈ ಶುಲ್ಕ ಹೆಚ್ಚಳದ ಬಗ್ಗೆ ಶಾಸಕರು ದೂರಿದ್ದರು. ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಪಕ್ಷಕ್ಕೆ ಭಾರಿ ಹೊಡೆತ ಬೀಳಲಿದೆ ಎಂದೂ ಅನೇಕ ಶಾಸಕರು ಆತಂಕ ತೋಡಿಕೊಂಡಿದ್ದರು. ಬಳಿಕ, ಮುಖ್ಯಮಂತ್ರಿಯವರು ಶುಲ್ಕ ಇಳಿಸುವ ಭರವಸೆ ನೀಡಿದ್ದರು.

ಸರ್ಚಾರ್ಜ್ ಕೈಬಿಟ್ಟಿರುವುದರಿಂದ ಹಾಗೂ ಶುಲ್ಕ ಇಳಿಕೆ ಮಾಡಲು ಸರ್ಕಾರ ಕ್ರಮ ಕೈಗೊಂಡಿರುವುದರಿಂದ ನಗರದಲ್ಲಿ ಮನೆ ನಿರ್ಮಿಸಲು ಮುಂದಾಗಿರುವವರು ನಿಟ್ಟುಸಿರು ಬಿಡುವಂತಾಗಿದೆ.

ಜಿಲೆಟಿನ್ ಸ್ಫೋಟ: ಒಬ್ಬ ಸಾವು

ಹೊಳೆನರಸೀಪುರ: ತಾಲ್ಲೂಕಿನ ಹಳೇಕೋಟೆ ಹೋಬಳಿಯ ಚಾಕೇನಹಳ್ಳಿ ಕಟ್ಟೆ ಗ್ರಾಮದ ಗೋದಾಮಿನಿಂದ ಭಾನುವಾರ ಸ್ಫೋಟಕ ಸಾಮಗ್ರಿ ಸಾಗಿಸುವ ವೇಳೆ ಜಿಲೆಟಿನ್ ಸ್ಫೋಟಗೊಂಡು ಒಬ್ಬರು ಮೃತಪಟ್ಟಿದ್ದಾರೆ. ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ಶ್ರವಣಬೆಳಗೊಳ ಹೋಬಳಿಯ ಬೆಟ್ಟದಹಳ್ಳಿ ಗ್ರಾಮದ ಸಂಪತ್ (27) ಮೃತಪಟ್ಟವರು.

ಗಂಭೀರವಾಗಿ ಗಾಯಗೊಂಡಿರುವ ಚಾಕೇನಹಳ್ಳಿ ಗ್ರಾಮದ ನಟರಾಜ್ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಮತ್ತೊಬ್ಬ ಗಾಯಾಳು ರವಿಕುಮಾರ್ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸಾವು, ಬದುಕಿನ ನಡುವೆ ಹೋರಾಡುತ್ತಿದ್ದಾರೆ.

ಚಾಕೇನಹಳ್ಳಿಕಟ್ಟೆ ಗ್ರಾಮದ ನಾಗೇಶ್ ಎಂಬುವರು ಸ್ಫೋಟಕ ಸಾಮಗ್ರಿಗಳ ಸಂಗ್ರಹ ಮತ್ತು ಮಾರಾಟಕ್ಕೆ ಪರವಾನಗಿ ಪಡೆದಿದ್ದರು. ಇವರ ಬಳಿ ಸ್ಫೋಟಕ ಪಡೆದು ದ್ವಿಚಕ್ರ ವಾಹನದಲ್ಲಿ ಇಟ್ಟುಕೊಳ್ಳುವ ವೇಳೆ ಅವಘಢ ಸಂಭವಿಸಿದೆ.

ಸ್ಫೋಟದ ತೀವ್ರತೆಗೆ ದೇಹಗಳು 300 ಮೀಟರ್ ದೂರದಲ್ಲಿ ಬಿದ್ದಿದ್ದವು. ಎರಡು ಬೈಕ್‌ಗಳು ಸುಟ್ಟು ಹೋಗಿವೆ.

ಪುತ್ರನೊಂದಿಗೆ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಭಾಗಿ

ಕೋರ್ಟ್ ಎಚ್ಚರಿಕೆ ಕಡೆಗಣಿಸಿದ ಎಚ್‌ಡಿಕೆ!

ಪ್ರಜಾವಾಣಿ ವಾರ್ತೆ

ರಾಮನಗರ: ನ್ಯಾಯಾಲಯದ ಎಚ್ಚರಿಕೆ ನಡುವೆಯೂ ಮಾಜಿ ಮುಖ್ಯಮಂತ್ರಿ ಎಚ್‌.ಡಿ.ಕುಮಾರಸ್ವಾಮಿ ಭಾನುವಾರ ರಾತ್ರಿ ನಗರದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಭಾಗಿಯಾದರು.

ಅಕ್ರಮ ಡಿನೋಟಿಫಿಕೇಷನ್ ಪ್ರಕರಣದ ವಿಚಾರಣೆಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಕುಮಾರಸ್ವಾಮಿ ಅವರು ಗುರುವಾರ ಗೈರು ಹಾಜರಾಗಿದ್ದರು.

ತಂದೆ ಎಚ್‌.ಡಿ. ದೇವೇಗೌಡ ಮತ್ತು ತಾಯಿ ಚೆನ್ನಮ್ಮನವರಿಗೆ ಕೊರೊನಾ ಸೋಂಕು ತಗುಲಿದ ಕಾರಣ ಕ್ವಾರಂಟೈನ್‌ನಲ್ಲಿದ್ದು, ವಿಚಾರಣೆಗೆ ಖುದ್ದು ಹಾಜರಾಗುವುದರಿಂದ ವಿನಾಯಿತಿ ನೀಡಬೇಕು ಎಂದು ಕುಮಾರಸ್ವಾಮಿ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಹಾಗಾದರೆ ಕ್ವಾರಂಟೈನ್ ಅವಧಿ ಮುಗಿಯುವವರೆಗೂ (ಏ.17ರವರೆಗೆ) ಸಾರ್ವಜನಿಕವಾಗಿ ಕಾಣಿಸಿಕೊಳ್ಳದಂತೆ ಕುಮಾರಸ್ವಾಮಿ ಅವರಿಗೆ ತಾಕೀತು ಮಾಡಿದ್ದ ನ್ಯಾಯಾಲಯ, ಒಂದು ವೇಳೆ ಕಾಣಿಸಿಕೊಂಡರೆ ಬಂಧನ ವಾರಂಟ್ ಹೊರಡಿಸುವುದಾಗಿ ಎಚ್ಚರಿಕೆ ನೀಡಿತ್ತು.

ರಾಮನಗರದಲ್ಲಿ ಭಾನುವಾರ ರಾತ್ರಿ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದ ಎಚ್‌.ಡಿ.ಕುಮಾರಸ್ವಾಮಿ. ಪುತ್ರ ನಿಖಿಲ್ ಕುಮಾರಸ್ವಾಮಿ ಜತೆಗಿದ್ದರು.

ವಿಶ್ವ ಆರೋಗ್ಯ ದಿನದ ಪ್ರಯುಕ್ತ ಮಣಿಪಾಲ ಆಸ್ಪತ್ರೆಗಳ ಸಮೂಹವು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಕೋವಿಡ್ ಎರಡನೇ ಅಲೆ ಹಾಗೂ ಲಸಿಕೆಯ ಕುರಿತು ಆಯೋಜಿಸಿದ ವಿಚಾರಸಂಕಿರಣದಲ್ಲಿ ಫಖ್ರಿ ಮೆಡಿಕಲ್ ಕಮ್ಯೂನಿಟಿ ಕ್ಲಿನಿಕ್‌ನ ಮುಖ್ಯಸ್ಥ ಜುಜರ್ ಸೈಫುದ್ದೀನ್ ಹರವಾಲಾ, ಮಣಿಪಾಲ್ ಆಸ್ಪತ್ರೆಯ ಶ್ವಾಸಕೋಶಶಾಸ್ತ್ರಜ್ಞ ಡಾ. ಸತ್ಯನಾರಾಯಣ ಮೈಸೂರು, ಬೆಂಗಳೂರು ಅಪಾರ್ಟ್‌ಮೆಂಟ್ಸ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ವಿಕ್ರಮ್ ರೈ, ಇಬ್ಬಲೂರಿನ ಎಂಬೆಸ್ಸಿ ಪ್ರಿಸ್ಟಿನ್ ಅಪಾರ್ಟ್‌ಮೆಂಟ್ ಸಮುಚ್ಚಯದ ವ್ಯವಸ್ಥಾಪನಾ ಸಮಿತಿ ಸದಸ್ಯ ಅನಂತ ಕೆ. ಸುಬ್ರಹ್ಮಣ್ಯಂ, ಬೆಳ್ಳಂದೂರಿನ ಮಂತ್ರಿ ಎಸ್ಪಾನ್ ಅಪಾರ್ಟ್‌ಮೆಂಟ್ಸ್ ಮಾಲೀಕರ ಅಸೋಸಿಯೇಷನ್ ಉಪಾಧ್ಯಕ್ಷ ಸಿಡ್ನಿ ಮುರಳಿ, ಮಣಿಪಾಲ ಹೆಲ್ತ್ ಎಂಟರ್‌ಪ್ರೈಸಸ್ ಪ್ರೈ.ಲಿ.ನ ಪ್ರಾದೇಶಿಕ ಮುಖ್ಯ ಕಾರ್ಯಾಚರಣೆ ಅಧಿಕಾರಿ ದೀಪಕ್ ವೇಣುಗೋಪಾಲನ್, ಮನ್ನತ್ ಫರ್ಟಿಲಿಟಿ ಕ್ಲಿನಿಕ್‌ನ ವೈದ್ಯೆ ಡಾ. ಅರ್ಚನಾ ಅಗರ್ವಾಲ್, ಪೀಣ್ಯದ ಲ್ಯಾಬ್ರೂಟ್ ನ್ಯೂಟ್ರಿಯೆಂಟ್ಸ್ ಪ್ರೈ.ಲಿ. ಸಂಸ್ಥಾಪನಾ ನಿರ್ದೇಶಕಿ ಡಾ. ಪ್ರೀತಿ ಸುಧಾ ಹಾಗೂ ರಾಂಕಾ ಹೈಟ್ಸ್ ಅಪಾರ್ಟ್‌ಮೆಂಟ್ ಸಮುಚ್ಚಯದ ಕೋವಿಡ್ ಕಾರ್ಯಪಡೆಯ ಅಬ್ದುಲ್ ಭಾಗವಹಿಸಿದ್ದರು– ಪ್ರಜಾವಾಣಿ ಚಿತ್ರ

ಜಮೀರ್ ಮನೆಗೆ ಜೆಡಿಎಸ್ ಕಾರ್ಯಕರ್ತರ ಮುತ್ತಿಗೆ

ಬೆಂಗಳೂರು: ಬಸವಕಲ್ಯಾಣ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಯ ಪ್ರಚಾರ ಸಭೆಯಲ್ಲಿ ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಕುರಿತು ಜನಾಂಗೀಯ ನಿಂದನೆ ಮಾಡಿರುವ ಆರೋಪದ ಮೇಲೆ ಜೆಡಿಎಸ್ ಯುವ ಘಟಕದ ಕಾರ್ಯಕರ್ತರು ಭಾನುವಾರ ಕಾಂಗ್ರೆಸ್ ಶಾಸಕ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಜೆಡಿಎಸ್ ಬೆಂಗಳೂರು ಮಹಾನಗರ ಯುವ ಘಟಕದ ಅಧ್ಯಕ್ಷ ಪ್ರವೀಣ್ ಕುಮಾರ್ ನೇತೃತ್ವದಲ್ಲಿ ಶಿವಾಜಿನಗರ ಕಂಟೋನ್ಮೆಂಟ್ ಪ್ರದೇಶದಲ್ಲಿರುವ ಜಮೀರ್ ಅಹಮ್ಮದ್ ಮನೆಯ ಪ್ರವೇಶ ದ್ವಾರದ ಬಳಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ಜಮೀರ್ ವಿರುದ್ಧ ಘೋಷಣೆ ಕೂಗಿದರು.

'ಕುಮಾರಸ್ವಾಮಿ ಅವರ ಮೈ ಬಣ್ಣದ ಕುರಿತು ಚುನಾವಣಾ ಪ್ರಚಾರ ಸಭೆಯಲ್ಲಿ ಜಮೀರ್ ಅಹಮ್ಮದ್ ಕೀಳಾಗಿ ಮಾತನಾಡಿದ್ದಾರೆ. ಅವರ ವಿರುದ್ಧ ಜನಾಂಗೀಯ ನಿಂದನೆ ಆರೋಪದಡಿ ಪ್ರಕರಣ ದಾಖಲಿಸಬೇಕು. ಜಮೀರ್ ಅಹಮ್ಮದ್ ಬಹಿರಂಗವಾಗಿ ಕ್ಷಮೆ ಯಾಚಿಸಬೇಕು' ಎಂದು ಪಟ್ಟು ಹಿಡಿದ ಪ್ರತಿಭಟನಾಕಾರರು, ಜಮೀರ್ ಮನೆಯ ಎದುರು ಧರಣಿ ಮುಂದುವರಿಸಿದರು.

ಲಿಖಿತವಾಗಿ ದೂರು ನೀಡಿದರೆ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಬಳಿಕ ಜೆಡಿಎಸ್ ಕಾರ್ಯಕರ್ತರು ಧರಣಿ ಅಂತ್ಯಗೊಳಿಸಿದರು.

ಸುದ್ದಿ 2 ನಿಮಿಷ

'ಆವಿಷ್ಕಾರ ಮನೋಭಾವ ಬೆಳೆಸುವ ಬಿ–ಕ್ಯಾಂಪ್ ಫೆಸ್ಟ್'

ಬೆಂಗಳೂರು: 'ಆನ್‌ಲೈನ್ ಮೂಲಕ ತಮ್ಮ ಆಯ್ಕೆಯ ವಿಷಯಗಳನ್ನು ಮಕ್ಕಳು ಪರಿಣಾಮಕಾರಿಯಾಗಿ ಕಲಿಯುವ, ಅವರಲ್ಲಿ ಆವಿಷ್ಕಾರ ಮನೋಭಾವ ಬೆಳೆಸುವ ಬಿ–ಕ್ಯಾಂಪ್ ಆ್ಯಂಡ್ ಫೆಸ್ಟ್ ಕಾರ್ಯಕ್ರಮವನ್ನು ರಾಜ್ಯದಲ್ಲಿಯೂ ಅಳವಡಿಸಿಕೊಳ್ಳುವ ಚಿಂತನೆ ಇದೆ' ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ತಿರುವನಂತಪುರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೇರಳದಲ್ಲಿ ಈಗಾಗಲೇ ಬಿ-ಕ್ಯಾಂಪ್ ಆ್ಯಂಡ್ ಫೆಸ್ಟ್ ಹೆಸರುವಾಸಿಯಾಗಿದ್ದು, ರಾಜ್ಯದ ಮಕ್ಕಳಿಗೂ ಇದರ ಉಪಯೋಗ ದೊರೆಯುವಂತೆ ಮಾಡಲಾಗುವುದು' ಎಂದರು.

ಕೇರಳದ ಬ್ಲೂಮ್‌ಬ್ಲೂಮ್ ಎಂಬ ನವೋದ್ಯಮ ಇದನ್ನು ಅಭಿವೃದ್ಧಿಪಡಿಸಿದೆ. ಜಾಗತಿಕವಾಗಿ ಶೈಕ್ಷಣಿಕ ರಂಗದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನದಲ್ಲಿ ಇಟ್ಟುಕೊಂಡು ಇದನ್ನು ರೂಪಿಸಲಾಗಿದ್ದು, 5 ರಿಂದ 15 ವರ್ಷದೊಳಗಿನ ಮಕ್ಕಳಲ್ಲಿ ನಾವೀನ್ಯತೆಯನ್ನು ಬೆಳೆಸುವ ಉದ್ದೇಶ ಇದರದ್ದು.

ಕೇರಳದಲ್ಲಿ 500ಕ್ಕೂ ಹೆಚ್ಚು ಶಿಕ್ಷಣ ತಜ್ಞರ ಮಾರ್ಗದರ್ಶನದಲ್ಲಿ 6,000ಕ್ಕೂ ಹೆಚ್ಚು ಮಕ್ಕಳು ಇದರ ಪ್ರಯೋಜನವನ್ನು ಪಡೆದಿದ್ದಾರೆ ಎಂದು ಬ್ಲೂಮ್‌ಬ್ಲೂಮ್ ಪ್ರತಿನಿಧಿಗಳು ಉಪಮುಖ್ಯಮಂತ್ರಿಯವರಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದ ವಿವರಗಳನ್ನು ತಿರುವಾಂಕೂರು ರಾಜಮನೆತನದ ಮಹಾರಾಣಿ ಪೋಯಂ ತಿರುನಾಳ್ ಗೌರಿಪಾರ್ವತಿ ಬಾಯಿ ಅವರು ಅಶ್ವತ್ಥನಾರಾಯಣ ಅವರಿಗೆ ಹಸ್ತಾಂತರಿಸಿದರು.

'ಊರಿಗೊಂದೇ ಸ್ಮಶಾನ ಇರಲಿ'

ದಾಬಸ್ ಪೇಟೆ: 'ಜಾತಿವಾರು ಸ್ಮಶಾನ ನಿರ್ಮಿಸುವ ಬದಲು, ಊರಿಗೊಂದೇ ಇರಲಿ. ಸಾವಿನಲ್ಲಿ ಭೇದ ಮಾಡುವುದು ಬೇಡ' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಶ್ರೀನಿವಾಸ್ ಹೇಳಿದರು.

ನೆಲಮಂಗಲ ತಾಲ್ಲೂಕು ಸೋಂಪುರ ಹೋಬಳಿಯ ದೇವರಹೊಸಹಳ್ಳಿ ಗ್ರಾಮಕ್ಕೆ ಭಾನುವಾರ ಭೇಟಿ ನೀಡಿದ್ದ ಅವರಿಗೆ, ಎಸ್‌ಸಿ ಸಮುದಾಯಕ್ಕಾಗಿ ಒಂದು ಸ್ಮಶಾನ ನಿರ್ಮಿಸಲು ಜಾಗ ಗುರುತಿಸಿಕೊಡಿ ಎಂದು ಗ್ರಾಮಸ್ಥರು ಮನವಿ ಮಾಡಿದಾಗ, ಈ ರೀತಿ ಪ್ರತಿಕ್ರಿಯಿಸಿದರು.

ಶ್ರೀನಿವಾಸ್ ಅವರೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ. ಚನ್ನಣ್ಣನವರ ಗ್ರಾಮಸ್ಥರ ಕುಂದು–ಕೊರತೆ ಆಲಿಸಿದರು.

ಇದೇ ವೇಳೆ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ವಿತರಿಸಲಾಯಿತು. ಉಪ ತಹಶೀಲ್ದಾರ್ ಕುಮಾರಸ್ವಾಮಿ, ಕಂದಾಯ ಅಧಿಕಾರಿ ಪಂಚಾಕ್ಷರಿ, ಗ್ರಾಮ ಲೆಕ್ಕಿಗ ರೋಹಿತ್ ಹಾಗೂ ಬಾಲಕೃಷ್ಣ ಇದ್ದರು.

ನೆಲಮಂಗಲ ತಹಶೀಲ್ದಾರ್ ಮಂಜುನಾಥ್ ಇದ್ದರು.

ಸಂಕ್ಷಿಪ್ತ ಸುದ್ದಿ

ನ್ಯಾಯಾಧೀಶರ ಕುಟುಂಬವೇ ನಾಶ

ಪೇಶಾವರ (ಎಪಿ): ವಾಯುವ್ಯ ಪಾಕಿಸ್ತಾನದ ಪೇಶಾವರ- ಇಸ್ಲಾಮಾಬಾದ್ ಹೆದ್ದಾರಿಯಲ್ಲಿ ಬಂದೂಕುಧಾರಿ ನಡೆಸಿದ ಗುಂಡಿನ ದಾಳಿಯಲ್ಲಿ ಭಯೋತ್ಪಾದನಾ ನಿಗ್ರಹ ನ್ಯಾಯಾಲಯದ (ಎಟಿಸಿ) ನ್ಯಾಯಾಧೀಶರು, ಅವರ ಪತ್ನಿ ಮತ್ತು ಇಬ್ಬರು ಪುತ್ರರು ಹತ್ಯೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನ್ಯಾಯಾಧೀಶ ಅಫ್ತಾಬ್ ಅಫ್ರಿದಿ ಅವರ ಕುಟುಂಬ ಪ್ರಯಾಣಿಸುತ್ತಿದ್ದ ವಾಹನವನ್ನು ತಡೆದು ನಿಲ್ಲಿಸಿ, ಗುಂಡಿನ ದಾಳಿ ನಡೆಸಲಾಗಿದೆ.

ನಟಿ ಶಶಿಕಲಾ ನಿಧನ

ಶಶಿಕಲಾ

ಮುಂಬೈ(ಪಿಟಿಐ): ಖ್ಯಾತ ನಟಿ ಶಶಿಕಲಾ (88) ಭಾನುವಾರ ನಗರದಲ್ಲಿ ನಿಧನರಾದರು. ಸೊಲ್ಲಾಪುರದಲ್ಲಿ ಜನಿಸಿದ್ದ ಶಶಿಕಲಾ ಜವಾಲ್ಕರ್ ಅವರು, ಐದು ವರ್ಷದವರಿದ್ದಾಗಿನಿಂದಲೇ ತಮ್ಮ ತವರಿನಲ್ಲಿ ನಾಟಕಗಳಲ್ಲಿ ನಟಿಸಿದ್ದರು. ಬಳಿಕ, ಅವರ ತಂದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರಿಂದ ಕುಟುಂಬದೊಂದಿಗೆ ಮುಂಬೈಗೆ ತೆರಳಿ ಚಲನಚಿತ್ರಗಳಲ್ಲಿ ನಟಿಸಲು ಆರಂಭಿಸಿದರು. ಶಶಿಕಲಾ ಎಂದೇ ಜನಪ್ರಿಯರಾಗಿದ್ದ ಅವರು, ಆರು ದಶಕಗಳ ಕಾಲ ನೂರಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿದ್ದರು.

1945ರಲ್ಲಿ 'ಝೀನತ್' ಚಲನಚಿತ್ರದಲ್ಲಿ ಮೊದಲ ಬಾರಿ ಶಶಿಕಲಾ ಕಾಣಿಸಿಕೊಂಡಿದ್ದರು. 1960–70ರ ಅವಧಿಯಲ್ಲಿ 'ಆರತಿ', 'ಛೋಟೆ ಸರ್ಕಾರ' ಮುಂತಾದ ಸಿನಿಮಾಗಳಲ್ಲಿ ನಟಿಸಿದ್ದರು. 2007ರಲ್ಲಿ 'ಪದ್ಮಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಹುಲಿ ದಾಳಿ: ಬಲಿ

ಸಿವನಿ (ಪಿಟಿಐ): ಮಧ್ಯಪ್ರದೇಶದ ಸಿವನಿ ಜಿಲ್ಲೆಯ ಗೋಪಾಲಗಂಜ್ ಅರಣ್ಯದಲ್ಲಿ ಇಪ್ಪೆ (ಮಾಹುವಾ) ಹೂವುಗಳನ್ನು ಸಂಗ್ರಹಿಸುತ್ತಿದ್ದ 15 ವರ್ಷದ ಬಾಲಕಿ ಮೇಲೆ ಹುಲಿ ದಾಳಿ ನಡೆಸಿ ಕೊಂದಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ನಟ ಅಕ್ಷಯ್ ಕುಮಾರ್‌ಗೆ ಕೋವಿಡ್–19 ದೃಢ

ಮುಂಬೈ: ಬಾಲಿವುಡ್ ನಟ ಅಕ್ಷಯ್ ಕುಮಾರ್‌ಗೆ ಕೋವಿಡ್–19 ಸೋಂಕು ದೃಢಪಟ್ಟಿದೆ. ಈ ಕುರಿತು ಭಾನುವಾರ ಬೆಳಿಗ್ಗೆ ಅವರು ಟ್ವೀಟ್ ಮಾಡಿದ್ದಾರೆ.

'ಇಂದು ಬೆಳಿಗ್ಗೆ ನನಗೆ ಕೋವಿಡ್ ಸೋಂಕು ದೃಢಪಟ್ಟಿರುವುದಾಗಿ ಎಲ್ಲರಿಗೂ ಈ ಮೂಲಕ ತಿಳಿಸುತ್ತಿದ್ದೇನೆ. ಕೋವಿಡ್ ಮಾರ್ಗಸೂಚಿ ಪ್ರಕಾರ ತಕ್ಷಣವೇ ಪ್ರತ್ಯೇಕ ವಾಸ ಆರಂಭಿಸಿದ್ದೇನೆ. ಸದ್ಯ ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿ ಇದ್ದು ವೈದ್ಯಕೀಯ ಆರೈಕೆ ಕೋರಿದ್ದೇನೆ. ನನ್ನ ಸಂಪರ್ಕಕ್ಕೆ ಬಂದವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ಮನವಿ ಮಾಡುತ್ತಿದ್ದೇನೆ' ಎಂದಿದ್ದಾರೆ.

'ಶ್ರೀನಿವಾಸಾಚಾರಿ ನೇತೃತ್ವದ ಮಾನವ ಸಂಪನ್ಮೂಲ ವರದಿ ಅನುಷ್ಠಾನ'

ಬೆಂಗಳೂರು: 'ಆರೋಗ್ಯ ಇಲಾಖೆಯ ಗುತ್ತಿಗೆ, ಹೊರಗುತ್ತಿಗೆ ನೌಕರರ ಕುಂದು ಕೊರತೆಗಳ ಬಗ್ಗೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿಯು ಸರ್ಕಾರಕ್ಕೆ ಈಗಾಗಲೇ ವರದಿ ಸಲ್ಲಿಸಿದೆ. ಇದನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಭರವಸೆ ನೀಡಿದರು. ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಸ್ಪಂದನೆ' ಕಾರ್ಯಕ್ರಮದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿ, ಮಾತನಾಡಿದರು.

ಸಂಘದ ಗೌರವಾಧ್ಯಕ್ಷ ಆಯನೂರು ಮಂಜುನಾಥ್ ಅವರು ಕೋವಿಡ್ ಯೋಧರಿಗೆ 'ಆರೋಗ್ಯ ರತ್ನ' ಪ್ರಶಸ್ತಿ ಪ್ರದಾನ ಮಾಡಿ, ಕೋವಿಡ್ ಯೋಧರ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕು' ಎಂದರು.

ಬಿಎಂಎಸ್ ಮುಖಂಡರಾದ ಡಿ.ಕೆ. ಸದಾಶಿವ, ಕೆ.ಎಂ. ಸೂರ್ಯನಾರಾಯಣ ರಾವ್, ಬಾಲಕೃಷ್ಣ ದೇಶಪಾಂಡೆ, ನೀಲಕಂಠ ರೆಡ್ಡಿ, ಪ್ರಕಾಶ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ವಿಶ್ವರಾಧ್ಯ ಎಚ್. ಯಮೋಜಿ ಇದ್ದರು.

ಕೋವಿಡ್ ಲಸಿಕೆ: ವೈದ್ಯರಿಂದ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಕಾಣುತ್ತಿರುವ ಕಾರಣ ಹಿರಿಯ ನಾಗರಿಕರು ಸೇರಿದಂತೆ ಅರ್ಹ ಫಲಾನುಭವಿಗಳು ಆದಷ್ಟು ಬೇಗ ಲಸಿಕೆ ಪಡೆದುಕೊಳ್ಳಬೇಕು ಎಂದು ಇಲ್ಲಿನ ವೈದ್ಯರು ಜಾಗೃತಿ ಮೂಡಿಸಲಾರಂಭಿಸಿದ್ದಾರೆ.

'ಲಸಿಕೆ ಪಡೆಯುವುದರಿಂದ ಕೋವಿಡ್ ಹರಡುವಿಕೆ ತಡೆಯಲು ಸಾಧ್ಯ. ಕಾಯಿಲೆಯಿಂದ ರಕ್ಷಣೆಯನ್ನು ಕೂಡ ಲಸಿಕೆ ಒದಗಿಸಲಿದೆ. ಹಾಗಾಗಿ, ಫಲಾನುಭವಿಗಳು ಆದಷ್ಟು ಬೇಗ ಲಸಿಕೆ ಹಾಕಿಸಿಕೊಳ್ಳಬೇಕು. ಈ ಮೂಲಕ ಕೋವಿಡ್ ವಿರುದ್ಧದ ಹೋರಾಟದಲ್ಲಿ ಕೈಜೋಡಿಸಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

'ಕೋವಿಡ್ ಎರಡನೇ ಅಲೆ ಶುರುವಾಗಿದೆ. ಸೋಂಕು ಹರಡುವಿಕೆ ತಡೆಯಲು ಸರ್ಕಾರವು ಹಲವಾರು ನಿರ್ಬಂಧಗಳನ್ನು ವಿಧಿಸಿದೆ. ಜನದಟ್ಟಣೆ ಇರುವ ಪ್ರದೇಶಗಳಿಗೆ ತೆರಳಬಾರದು. ಮನೆಯಿಂದ ಹೊರಗಡೆ ಹೋಗುವಾಗ ಮುಖಗವಸನ್ನು ಕಡ್ಡಾಯವಾಗಿ ಧರಿಸಬೇಕು. ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಕಳೆದ ವರ್ಷ ಎಂಟು ವಾರಗಳಲ್ಲಿ ವರದಿಯಾದ ಪ್ರಕರಣಗಳು ಈಗ ನಾಲ್ಕು ವಾರಗಳಲ್ಲಿಯೇ ವರದಿಯಾಗಿವೆ. 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲಾಗುತ್ತಿದೆ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಹಾಗೂ ವೈರಾಣು ತಜ್ಞ ಡಾ.ವಿ. ರವಿ ತಿಳಿಸಿದ್ದಾರೆ.

ಕೆ.ಸಿ. ಜನರಲ್ ಆಸ್ಪತ್ರೆಯ ನೋಡಲ್ ಅಧಿಕಾರಿ ಡಾ ಲಕ್ಷ್ಮಿಪತಿ, 'ಕೋವಿಡ್ ಎದುರಿಸಲು ಆಯುಧವಿಲ್ಲ. ಲಸಿಕೆ ಪಡೆದುಕೊಳ್ಳುವುದರಿಂದ ಮಾತ್ರ ಹೋರಾಡಲು ಸಾಧ್ಯ' ಎಂದು ಹೇಳಿದ್ದಾರೆ. 'ಆನ್‌ಲೈನ್‌ನಲ್ಲಿ ಹೆಸರು ನೋಂದಣಿ ಮಾಡಿಕೊಂಡು ಬರುತ್ತಾರೆ. ಆಸ್ಪತ್ರೆಗೆ ನೇರವಾಗಿ ಬಂದು, ಹೆಸರು ನೋಂದಾಯಿಸಿಕೊಂಡವರಿಗೂ ಲಸಿಕೆ ನೀಡಲಾಗುತ್ತಿದೆ. ಫಲಾನುಭವಿಗಳು ಲಸಿಕೆ ಪಡೆದುಕೊಳ್ಳಬೇಕು' ಎಂದು ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಬಿ.ಆರ್. ವೆಂಕಟೇಶಯ್ಯ ಸಲಹೆ ನೀಡಿದ್ದಾರೆ.

ಬೈಕ್, ಮೊಬೈಲ್ ಕಳ್ಳರ ಬಂಧನ

ಬೆಂಗಳೂರು: ದ್ವಿಚಕ್ರ ವಾಹನಗಳು ಹಾಗೂ ಮೊಬೈಲ್‌ಗಳನ್ನು ಕದ್ದು ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

ಇಲಿಯಾಸ್ ನಗರದ ಸೈಫಾನ್ ಪಾಷಾ (20) ಹಾಗೂ ವಿ.ವಿ ಪುರದ ಇರ್ಷಾದ್ ಪಾಷಾ (19) ಬಂಧಿತರು.

ಆರೋಪಿಗಳು ಕಲಾಸಿಪಾಳ್ಯ ಠಾಣಾ ವ್ಯಾಪ್ತಿಯ ಎ.ಎಂ.ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಹಾಗೂ ಮೊಬೈಲ್‌ಗಳನ್ನು ಮಾರಾಟ ಮಾಡುತ್ತಿದ್ದರು. ಈ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ. 'ಆರೋಪಿಗಳು ಸಾರ್ವಜನಿಕರಿಂದ ಮೊಬೈಲ್ ಹಾಗೂ ಬೈಕ್ ಕದಿಯುತ್ತಿದ್ದರು. ಅವರನ್ನು ವಶಕ್ಕೆ ಪಡೆದು, ₹1.70 ಲಕ್ಷ ಬೆಲೆಬಾಳುವ ಎರಡು ದ್ವಿಚಕ್ರ ವಾಹನ ಹಾಗೂ 15 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ	13.15 ಕೋಟಿ ▲	1.250ಕೋಟಿ ▲	10,15,155 ಒಟ್ಟು ಸೋಂಕಿತರು ▲
ಸಕ್ರಿಯ ಪ್ರಕರಣ	2.27ಕೋಟಿ ▲	6.99ಲಕ್ಷ ▲	39,092 ▲
ಗುಣಮುಖ	10.59ಕೋಟಿ ▲	1.16 ಕೋಟಿ	9,63,419 ▲
ಸಾವು	28.61 ಲಕ್ಷ ▲	1.64ಲಕ್ಷ	12,625 ▲
ದಿನದ ಏರಿಕೆ: ಹೊಸ ಪ್ರಕರಣ	6.07 ಲಕ್ಷ ▼	92,994 ▲	4,553 ▲
ದಿನದ ಏರಿಕೆ: ಗುಣಮುಖ	4.24 ಲಕ್ಷ ▲	60,059 ▲	2,060 ▼
ದಿನದ ಏರಿಕೆ: ಸಾವು	10,444 ▲	514 ▼	15 ▼

331 ಐಸಿಯುನಲ್ಲಿ ಇರುವವರು ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 66,154 ಅಮೆರಿಕ ▼ | 41,218 ಬ್ರೆಜಿಲ್ ▲ | 21,251 ಇಟಲಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 69.19 ಅಮೆರಿಕ ▼ | 43.56 ಫ್ರಾನ್ಸ್ ▲ | 13.17 ಬ್ರೆಜಿಲ್ ▲

ಎಲ್ಲಿ ಹೆಚ್ಚು ಸಾವು: ▲55,816 ಮಹಾರಾಷ್ಟ್ರ | ▲12,778 ತಮಿಳುನಾಡು | ▲11,070 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 29.83 ಮಹಾರಾಷ್ಟ್ರ ▲ | 11.35 ಕೇರಳ ▲ | 9.07 ಆಂಧ್ರಪ್ರದೇಶ ▲

ಪ್ರಜಾವಾಣಿ ಗ್ರಾಫಿಕ್ಸ್

ನಗರದ ಕೋವಿಡ್ ಪ್ರಕರಣಗಳು

4,47,031 ಒಟ್ಟು ಸೋಂಕಿತರು

4,14,283 ಗುಣಮುಖರಾದವರು | 28,098 ಸಕ್ರಿಯ ಪ್ರಕರಣ | 4,649 ಸಾವು

ಭಾನುವಾರದ ಏರಿಕೆ

2,787 ದೃಢಪಟ್ಟ ಪ್ರಕರಣ | 1,225 ಗುಣಮುಖ | 8 ಸಾವು

ರಾಷ್ಟ್ರೀಯ ಪುರಸ್ಕಾರಕ್ಕೆ ಆಯ್ಕೆಯಾದ ರಾಜ್ಯದ ಏಕೈಕ ಪಂಚಾಯಿತಿ

ಮುನುಗನಹಳ್ಳಿ: 'ಮಕ್ಕಳ ಸ್ನೇಹಿ' ಪಂಚಾಯಿತಿ

• ಎಂ.ರಾಮಕೃಷ್ಣಪ್ಪ

ಚಿಂತಾಮಣಿ: ತಾಲ್ಲೂಕಿನ ಮುನುಗನಹಳ್ಳಿ ಗ್ರಾಮ ಪಂಚಾಯಿತಿ 2020-21ನೇ ಸಾಲಿನ 'ರಾಷ್ಟ್ರೀಯ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ' ರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನವಾಗಿದೆ.

ಕೇಂದ್ರ ಪಂಚಾಯತ್ ರಾಜ್ ಸಚಿವಾಲಯದ ಈ ಪ್ರಶಸ್ತಿಗೆ ಆಯ್ಕೆಯಾಗಿರುವ ರಾಜ್ಯದ ಏಕೈಕ ಗ್ರಾಮ ಪಂಚಾಯಿತಿ ಎಂಬ ಹೆಗ್ಗಳಿಕೆಗೆ ಮುನುಗನಹಳ್ಳಿ ಪಾತ್ರವಾಗಿದೆ.

ಪ್ರಶಸ್ತಿ ಪತ್ರ ಮತ್ತು ₹ 5 ಲಕ್ಷ ನಗದು ಬಹುಮಾನ ಒಳಗೊಂಡಿರುವ ಪುರಸ್ಕಾರವನ್ನು ಏ.24ರಂದು ನಡೆಯುವ ಪಂಚಾಯತ್ ರಾಜ್ ದಿವಸ್ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು.

ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ಕೇತುಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ರಾಜಾನುಕುಂಟೆ ಮತ್ತು ಚಿಂತಾಮಣಿಯ ಮುನುಗನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಪ್ರಶಸ್ತಿಗಾಗಿ ರಾಜ್ಯ ಸರ್ಕಾರ ಶಿಫಾರಸು ಮಾಡಿತ್ತು.

'ಸ್ಥಳೀಯ ಸಂಸ್ಥೆಗಳು ಮತ್ತು ದಾನಿಗಳ ಸಹಕಾರದಿಂದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಮೂಲ ಸೌಲಭ್ಯ ಒದಗಿಸಿರುವುದನ್ನು ಪ್ರಶಸ್ತಿಗೆ ಪ್ರಮುಖವಾಗಿ ಪರಿಗಣಿಸಲಾಗಿದೆ.

ಮುನುಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುರುಟಹಳ್ಳಿಯ ಮಾದರಿ ಅಂಗನವಾಡಿ ಕೇಂದ್ರ

> **ರಾಷ್ಟ್ರೀಯ ಪ್ರಶಸ್ತಿ ಸಂತೋಷ ತಂದಿದೆ. ಪ್ರಶಸ್ತಿ ಗ್ರಾಮಕ್ಕೆ ಮಾತ್ರವಲ್ಲ ರಾಜ್ಯಕ್ಕೆ ಸಂದ ಗೌರವ. ಕೆಲಸ ಮಾಡುವ ಜವಾಬ್ದಾರಿ ಹೆಚ್ಚಿಸಿದೆ**
> **ಕವಿತಾ, ಮುನುಗನಹಳ್ಳಿ**
> ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ

ಮಾದರಿ ಹೇಗೆ?

ಮುನುಗನಹಳ್ಳಿ ಗ್ರಾ.ಪಂ ವ್ಯಾಪ್ತಿಯಲ್ಲಿ ಒಟ್ಟು 12 ಶಾಲೆ ಹಾಗೂ 11 ಅಂಗನವಾಡಿ ಕೇಂದ್ರಗಳಿದ್ದು, ಮೂರು ಮಾದರಿ ಅಂಗನವಾಡಿಗಳಿವೆ. ಐದು ಶಾಲೆಗಳಿಗೆ ಶಾಲಾವರಣ ನಿರ್ಮಾಣ ಮಾಡಲಾಗಿದೆ. ಆರು ಶಾಲೆಗಳಲ್ಲಿ ಮಳೆನೀರು ಸಂಗ್ರಹ ವ್ಯವಸ್ಥೆ ಮಾಡಲಾಗಿದೆ. ಎರಡು ಶಾಲೆಗಳಲ್ಲಿ ಕೈ ತೋಟಗಳಿವೆ.

ಹಳೆ ಶಾಲಾ ಕಟ್ಟಡಗಳ ದುರಸ್ತಿ, ಅಂಗವಿಕಲ ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಾಣ, ಗ್ರಂಥಾಲಯ, ಮಾಹಿತಿ ಕೇಂದ್ರ ಸ್ಥಾಪನೆ ಮಾಡಲಾಗಿದೆ. ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚುವ ಸ್ಥಿತಿಯಲ್ಲಿದ್ದ ಬ್ರಾಹ್ಮಣರದಿನ್ನೆ ಗ್ರಾಮದ ಶಾಲೆಯಲ್ಲಿ 25 ಮಕ್ಕಳು ದಾಖಲಾಗಿದ್ದಾರೆ.

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Agents Wanted

WANTED PROMOTERS Dealers Marketing Staff for Unique Healthy Consumer Products Contact: 9448041257

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

General

GOLDEN INVESTMENT Opportunity; Invest Rs.1-Lacs in our Water & Food products business & get Rs.365/- for 365 days. (Including your Principle+ Profit Share). Returns paid on daily basis from the next day of investment. Interested parties Call; 9739979946.

PERSONAL

Change of Name

I, SHILPA BETAGERI residing at Sai Sumukha Serenity, Flat No. 102, A1 Block, Survey No. 110/4, Near GKW Layout, Peenya 2nd Stage, Shambhavi Nagar, Bengaluru-560058, have changed my name to SUNIDHI S. KULKARNI vide affidavit dated 31/03/2021 before notary L. Puttaraju, Bengaluru.

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

House

4 BED ROOM north east facing independent house for rent at BSK 3rd stage near kamakya. Contact 9790039509

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

REAL ESTATE SELLING

Sites

Kengeri

30X40 WEST face site for sale No.36, Kengeri, Ramasandra village, Sudharsan layout. Contact- 9916291229

JOB OPPORTUNITIES

Teachers/ Professors

WANTED Teachers for Higher Primary & High School Mathematics & Physics. MSc/BSc, B.Ed.Maths, Physics. Yeshwanthpur, Divanarapalya, Bangalore. Contact No. 9379191544

240 ಕೋಟಿ ಲೀಟರ್ ಬೆಂಗಳೂರಿನ ದಿನದ ನೀರಿನ ಬೇಡಿಕೆ	**145** ಕೋಟಿ ಲೀಟರ್ ಕಾವೇರಿಯಿಂದ ಪೂರೈಕೆಯಾಗುವ ನೀರು	ಶೇ **35** ನೀರು ಸೋರಿಕೆ ಪ್ರಮಾಣ	**14.2** ಕೋಟಿ ಲೀಟರ್ ದಿನಕ್ಕೆ ಕಾವೇರಿ ಒಂದನೇ ಹಂತದಿಂದ ಸರಬರಾಜಾಗುವ ನೀರಿನ ಪ್ರಮಾಣ	**13.9** ಕೋಟಿ ಲೀಟರ್ ಕಾವೇರಿ ಎರಡನೇ ಹಂತ	**32.9** ಕೋಟಿ ಲೀಟರ್ ಕಾವೇರಿ ಮೂರನೇ ಹಂತ	**53.9** ಕೋಟಿ ಲೀಟರ್ ಕಾವೇರಿ ನಾಲ್ಕನೇ ಹಂತದ 2ನೇ ಘಟ್ಟ	**30.1** ಕೋಟಿ ಲೀಟರ್ ಕಾವೇರಿ 4ನೇ ಹಂತದ 1ನೇ ಘಟ್ಟ

ನಗರದ ಹೊರವಲಯಗಳಲ್ಲಿ ತೀವ್ರ ಸಮಸ್ಯೆ • ಹೆಚ್ಚುತ್ತಿರುವ ಖಾಸಗಿ ಟ್ಯಾಂಕರ್ ಮಾಫಿಯಾ

ಬೇಸಿಗೆ ಶುರು: ಬಿಗಡಾಯಿಸಿದ ನೀರಿನ ಸಮಸ್ಯೆ

• ಗುರು ಪಿ.ಎಸ್.

ಬೆಂಗಳೂರು: ತಂತ್ರಜ್ಞಾನ ಕ್ಷೇತ್ರದಲ್ಲಿ ಜಗದ್ವಿಖ್ಯಾತವಾಗಿರುವ ಬೆಂಗಳೂರು ಕುಡಿಯುವ ನೀರಿನ ನಿರ್ವಹಣೆಯಲ್ಲಿ ಎಡವುತ್ತಲೇ ಇದೆ. ಪ್ರತಿ ವರ್ಷದಂತೆ ಈ ವರ್ಷವೂ ಬಿಸಿಲಿನ ಧಗೆ ಏರುತ್ತಿದ್ದಂತೆಯೇ ಇಲ್ಲಿ ನೀರಿನ ಸಮಸ್ಯೆಯೂ ಬಿಗಡಾಯಿಸಿದೆ. ಏಪ್ರಿಲ್ ಆರಂಭದಲ್ಲೇ ಟ್ಯಾಂಕರ್ ನೀರನ್ನು ಅವಲಂಬಿಸಬೇಕಾದ ಸ್ಥಿತಿ ಹಲವೆಡೆ ಸೃಷ್ಟಿಯಾಗಿದೆ.

ಕುಡಿಯುವ ನೀರಿಗಾಗಿ 100 ಕಿ.ಮೀ. ದೂರದ ಕಾವೇರಿ ನದಿಯನ್ನೇ ನಂಬಿರುವ ರಾಜಧಾನಿಯಲ್ಲಿ ಬೇಸಿಗೆ ಬಂದರೆ ಈ ಸಮಸ್ಯೆ ಸಾಮಾನ್ಯ ಎನ್ನುವಂತಾಗಿದೆ. ನಗರದ ಕೇಂದ್ರ ಭಾಗದಲ್ಲಿರುವ ಕೆಲವು ಪ್ರದೇಶಗಳಲ್ಲಿ ದಿನ ಬಿಟ್ಟು ದಿನ ನೀರು ಪೂರೈಕೆಯಾಗುತ್ತಿದ್ದರೆ, ಕಾವೇರಿ ನೀರಿನ ಸಂಪರ್ಕವಿಲ್ಲದ ಹೊರವಲಯದ ಪ್ರದೇಶಗಳು ನೀರಿಲ್ಲದೆ ಸಂಕಷ್ಟದಲ್ಲಿವೆ. ಕುಡಿಯುವ ನೀರಿನ ಬವಣೆ ಈ ನಗರದ ಜನಜೀವನದ ಮೇಲೆ ಮಾತ್ರವಲ್ಲ, ಇಲ್ಲಿನ ಬ್ರ್ಯಾಂಡ್ ಮೌಲ್ಯದ ಮೇಲೂ ಪರಿಣಾಮ ಬೀರುತ್ತಿದೆ.

ಬಿಸಿಲಿನ ತಾಪಕ್ಕೆ ಹಲವು ಕೊಳವೆಬಾವಿಗಳು ಬರಿದಾಗುತ್ತಿವೆ. ಅಂತರ್ಜಲ ಮಟ್ಟವೂ ಕಡಿಮೆಯಾಗುತ್ತಿದೆ. ಜಲಮಂಡಳಿಯು ತನ್ನ 60 ಟ್ಯಾಂಕರ್‌ಗಳ ಮೂಲಕ ಕೆಲವು ಪ್ರದೇಶಗಳಿಗೆ ನೀರು ಪೂರೈಸುತ್ತಿದೆಯಾದರೂ, ಅದು ಏನಕ್ಕೂ ಸಾಲುವುದಿಲ್ಲ. ಕಾವೇರಿ ನೀರು ಪೂರೈಕೆಯ ‘ರಭಸ’ ಕೂಡ ಪವಾಡವೇನೋ ಎಂಬಂತೆ ತಗ್ಗಿ ಬಿಡುತ್ತದೆ. ಆಗ ಪ್ರತ್ಯಕ್ಷವಾಗುವುದು ಖಾಸಗಿ ಟ್ಯಾಂಕರ್‌ಗಳು. ತಮ್ಮ ‘ಸೀಸನ್’ ಶುರುವಾಯಿತೇನೋ ಎಂಬಂತೆ ಟ್ಯಾಂಕರ್‌ಗಳ ‘ಮೆರವಣಿಗೆ’ ಈ ಪ್ರದೇಶಗಳಲ್ಲಿ ಪ್ರಾರಂಭವಾಗುತ್ತದೆ.

ಬಡ–ಮಧ್ಯಮ ವರ್ಗಕ್ಕೆ ಸಂಕಷ್ಟ: ದುಡ್ಡಿದ್ದವರು ವಾರಕ್ಕೆ ಎರಡು ಬಾರಿಯಾದರೂ ಟ್ಯಾಂಕರ್ ನೀರು ಹಾಕಿಸಿಕೊಳ್ಳುತ್ತಿದ್ದಾರೆ. ಆದರೆ, ಬಡ–ಮಧ್ಯಮ ವರ್ಗಕ್ಕೆ ನೀರಿನ ಶುಲ್ಕ ಪಾವತಿಸುವುದೇ ಹೊರೆಯಾಗಿದೆ. ಜಲಮಂಡಳಿಯಿಂದ ಪೂರೈಸುತ್ತಿರುವ ನೀರಿನ ಪ್ರಮಾಣ ಕಡಿಮೆಯಾದರೂ, ಶುಲ್ಕ ಮಾತ್ರ ಮೊದಲಿನಷ್ಟೇ ಬರುತ್ತಿದೆ.

ನೀರು ಹಿಡಿಯಲು ಕಾಯಬೇಕಾಗಿರುವುದರಿಂದ ಕೆಲಸಕ್ಕೆ ಹೋಗಲಾಗದೆ ಅನಿವಾರ್ಯವಾಗಿ ರಜೆಯನ್ನೂ ಹಾಕಬೇಕಾಗಿದೆ. ರಜೆ ಹಾಕಿದರೆ ಒಂದು ದಿನದ ದುಡಿಮೆ ಹೋಗುತ್ತದೆ, ಹಾಕದಿದ್ದರೆ ನೀರು ಸಿಗುವುದಿಲ್ಲ ಎಂಬ ಸಂದಿಗ್ಧದಲ್ಲಿ ಅನೇಕರಿದ್ದಾರೆ.

ಅಸಮರ್ಪಕ ನಿರ್ವಹಣೆ: ‘ಕೊಳವೆ ಬಾವಿ ಮತ್ತು ಇತರೆ ಜಲಮೂಲಗಳ ನಿರ್ವಹಣೆಯಲ್ಲಿ ಬಿಬಿಎಂಪಿ ಮತ್ತು ಜಲಮಂಡಳಿ ವಿಫಲವಾಗಿವೆ.’ ಎಂದು ಸಾರ್ವಜನಿಕರು ದೂರುತ್ತಾರೆ.

ಜಲಮಂಡಳಿಯು ಸಾವಿರಾರು ಕೊಳವೆಬಾವಿಗಳನ್ನು ನಿರ್ವಹಿಸುತ್ತಿದೆ. ಆದರೆ, ಬೇಸಿಗೆಯಲ್ಲಿ ಮಾತ್ರ ಇವುಗಳ ಅಗತ್ಯ ಮಂಡಳಿಗೆ ಕಾಣುತ್ತದೆ. ಉಳಿದ ಸಮಯದಲ್ಲಿ ಇವುಗಳತ್ತ ಗಮನವೇ ಇರುವುದಿಲ್ಲ. ಆಗಿಂದಾಗ್ಗೆ ಇವುಗಳನ್ನು ಪರೀಕ್ಷಿಸುವ, ದುರಸ್ತಿಗೊಳಿಸುವ ಕಾರ್ಯ ನಡೆಯುತ್ತಿಲ್ಲ. ಪ್ರತಿ ಪ್ರದೇಶದಲ್ಲಿಯೂ ಕೊಳವೆ ಬಾವಿ ಕೊರೆಯಲು ಬಿಬಿಎಂಪಿ ಅನುಮತಿ ನೀಡುತ್ತಿದೆ. ಪ್ರಭಾವಿ ಜನಪ್ರತಿನಿಧಿಗಳು ಮತ್ತು ಶ್ರೀಮಂತರು ಇರುವ ಕಡೆಗೆ ಅಗತ್ಯಕ್ಕಿಂತ ಹೆಚ್ಚಾಗಿ ಕೊಳವೆ ಬಾವಿಗಳನ್ನು ಕೊರೆಯಲಾಗುತ್ತಿದೆ. ಹಿಂದುಳಿದ ಪ್ರದೇಶಗಳಲ್ಲಿ ನೀರು ಬರುವುದಿಲ್ಲ ಎಂದು ಗೊತ್ತಿದ್ದರೂ ‘ಲೆಕ್ಕ’ ತೋರಿಸಲು ಬೋರ್‌ವೆಲ್‌ಗಳನ್ನು ಕೊರೆಯಲಾಗಿರುತ್ತದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

ಎರಡು ವರ್ಷ ಸಮಸ್ಯೆ: ನಗರದ ಜನಸಂಖ್ಯೆ ಆಧರಿಸಿ ಪ್ರತಿ ಹತ್ತು ವರ್ಷಗಳಿಗೊಮ್ಮೆ ಒಂದೊಂದು ಹಂತದಲ್ಲಿ ನೀರು ಪೂರೈಸುವ ಕಾರ್ಯವನ್ನು ಜಲಮಂಡಳಿಯು ಮಾಡುತ್ತಿದೆ. ಸದ್ಯ ಕಾವೇರಿ ನಾಲ್ಕು ಹಂತದಲ್ಲಿ ನೀರು ಪೂರೈಕೆ ಮಾಡಲಾಗುತ್ತಿದ್ದು, ಐದನೇ ಹಂತದ ಯೋಜನೆ ಪ್ರಗತಿಯಲ್ಲಿದೆ. 2020ರ ಜನವರಿಯಿಂದ ಪ್ರಾರಂಭವಾಗಿರುವ ಈ ಕಾಮಗಾರಿ 2023ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿದೆ. ಅಲ್ಲಿಯವರೆಗೂ ಈ 110 ಹಳ್ಳಿಗಳಲ್ಲಿ ಇದೇ ಸಮಸ್ಯೆ ಮುಂದುವರಿಯುವುದು ನಿಶ್ಚಿತ.

ಮರುಪೂರಣ, ಮಳೆ ನೀರು ಸಂಗ್ರಹ ಅವಶ್ಯ: ಕಾವೇರಿ ನದಿಯಿಂದ ಪೂರೈಕೆಯಾಗುತ್ತಿರುವ ನೀರು ನಗರದ ಒಟ್ಟು ಬೇಡಿಕೆಯ ಅರ್ಧದಷ್ಟಿದ್ದರೂ, ಬಹುತೇಕರು ಬಳಕೆಗೆ ಕೊಳವೆಬಾವಿಗಳ ನೀರನ್ನು ಹೆಚ್ಚು ಉಪಯೋಗಿಸುತ್ತಿರುವುದರಿಂದ ಸಮಸ್ಯೆ ಅಷ್ಟಾಗಿ ಕಾಣುತ್ತಿಲ್ಲ. ಆದರೆ, ತಾಪಮಾನ ಹೆಚ್ಚಿದ ಸಂದರ್ಭದಲ್ಲಿ ಬರಿದಾಗುವ ಈ ಕೊಳವೆಬಾವಿಗಳ ಮರುಪೂರಣ ಕಾರ್ಯ ಆಗಬೇಕಾಗಿದೆ. ಬಿಬಿಎಂಪಿ ಮತ್ತು ಜಲಮಂಡಳಿ ಈ ನಿಟ್ಟಿನಲ್ಲಿ ಹೆಚ್ಚು ಕಾರ್ಯಪ್ರವೃತ್ತವಾಗಬೇಕಾಗಿದೆ.

ವಸತಿ ಸಮುಚ್ಚಯಗಳಲ್ಲಿ ಮಳೆ ನೀರು ಸಂಗ್ರಹ ಮಾಡದವರಿಗೆ ಜಲಮಂಡಳಿ ದಂಡ ವಿಧಿಸಬೇಕು ಮತ್ತು ಇಷ್ಟಕ್ಕೇ ಕೈ ತೊಳೆದುಕೊಳ್ಳದೇ ತ್ಯಾಜ್ಯ ನೀರು ನಿರ್ವಹಣೆ, ಮಳೆ ನೀರು ಸಂಗ್ರಹದ ಮಹತ್ವದ ಬಗ್ಗೆ ಜನರಲ್ಲಿ ಹೆಚ್ಚು ಅರಿವು ಮೂಡಿಸಬೇಕಾದ ಅಗತ್ಯವಿದೆ ಎಂಬುದು ನೀರಿನ ಜತನ ಬಳಕೆಗಾಗಿ ಒತ್ತಾಯಿಸುತ್ತಿರುವ ಜಲ ಸಂರಕ್ಷಣಾ ಕಾರ್ಯಕರ್ತರ ಅಂಬೋಣ.

ಕೆ.ಆರ್‌.ಪುರದಲ್ಲಿ ಶಾಂತಾ ಕೃಷ್ಣಮೂರ್ತಿ ಫೌಂಡೇಷನ್ ವತಿಯಿಂದ ಜನರಿಗೆ ಉಚಿತವಾಗಿ ನೀರು ಪೂರೈಸಲಾಗುತ್ತಿದೆ – ಪ್ರಜಾವಾಣಿ ಚಿತ್ರ /ಅನೂಪ್ ರಾಘ್ ಟಿ.

‘ಬೇಡಿಕೆಯ ಅರ್ಧದಷ್ಟು ಮಾತ್ರ ನೀರು ಲಭ್ಯ’

‘ಬೆಂಗಳೂರು ನಗರದ ನೀರಿನ ಬೇಡಿಕೆಯನ್ನು ಪರಿಗಣಿಸಿದರೆ ಕಾವೇರಿಯಿಂದ ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆ ಇದೆ. ಶೇ 35ರಷ್ಟು ಸೋರಿಕೆ ಪ್ರಮಾಣ ತೆಗೆದರೆ, ಬೇಡಿಕೆಯ ಅರ್ಧದಷ್ಟು ಮಾತ್ರ ನೀರು ಲಭ್ಯವಿದೆ. ಈ ಕಾರಣದಿಂದ ಸ್ವಲ್ಪ ತೊಂದರೆಯಾಗುತ್ತಿದೆ’ ಎಂದು ಜಲಮಂಡಳಿ ಅಧ್ಯಕ್ಷ ಎನ್. ಜಯರಾಮ್ ಹೇಳಿದರು.

ಎನ್‌. ಜಯರಾಮ್

‘ಮೂಲ ಬೆಂಗಳೂರು ಪ್ರದೇಶಗಳಲ್ಲಿ ಸಮರ್ಪಕವಾಗಿ ನೀರು ಪೂರೈಸಲಾಗುತ್ತಿದೆ. ನಗರದ ಹೊರವಲಯದ 110 ಹಳ್ಳಿಗಳಲ್ಲಿ ಕಾವೇರಿ ನೀರು ಸಂಪರ್ಕ ಇಲ್ಲದಿರುವುದರಿಂದ ಅಲ್ಲಿ ಸಮಸ್ಯೆಯಾಗಿದೆ. ಆದರೂ, ಈ ಪ್ರದೇಶಗಳಿಗೆ ಮಂಡಳಿಯಿಂದ ಕಡಿಮೆ ವೆಚ್ಚದಲ್ಲಿ (6500 ಲೀಟರ್‌ಗೆ ₹540) ಟ್ಯಾಂಕರ್ ನೀರು ಪೂರೈಸಲಾಗುತ್ತಿದೆ’ ಎಂದು ತಿಳಿಸಿದರು.

‘ಬೇಸಿಗೆ ವೇಳೆ ಕೆಲವು ಕೊಳವೆಬಾವಿಗಳು ಬರಿದಾಗುತ್ತಿವೆ. ಅವುಗಳನ್ನು ಮರುಪೂರಣಗೊಳಿಸುವ, ದುರಸ್ತಿ ಮಾಡಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಬಹುತೇಕ ಮನೆಗಳಲ್ಲಿ ಕೊಳವೆ ಬಾವಿ ಇವೆ. ಜೊತೆಗೆ, 9 ಸಾವಿರ ಕೊಳವೆಬಾವಿಗಳನ್ನು ಮಂಡಳಿಯೂ ನಿರ್ವಹಿಸುತ್ತಿದೆ. ಈ ಕಾರಣದಿಂದ ನೀರಿನ ಬೇಡಿಕೆ ಈಡೇರಿಸಲು ಸಾಧ್ಯವಾಗಿದೆ’ ಎಂದೂ ಹೇಳಿದರು.

ನೀರಿನ ಕೃತಕ ಅಭಾವ ಸೃಷ್ಟಿ

ಬೇಸಿಗೆಯ ನೆಪದಲ್ಲಿ ನೀರಿನ ಕೃತಕ ಅಭಾವ ಸೃಷ್ಟಿಸುವ ಕಾರ್ಯವೂ ನಡೆಯುತ್ತಿದೆ. ಕೆಲವು ಕಡೆ ಕಾವೇರಿ ನೀರಿನ ಪೂರೈಕೆಯ ‘ರಭಸ’ ಕಡಿಮೆ ಮಾಡಲಾಗುತ್ತಿದೆ. ಸಾರ್ವಜನಿಕರು ಅನಿವಾರ್ಯವಾಗಿ ಖಾಸಗಿ ಟ್ಯಾಂಕರ್ ನೀರು ಮೊರೆ ಹೋಗುವಂತೆ ಮಾಡಲಾಗುತ್ತಿದೆ. ‘ವಾಟರ್‌ಮನ್’ಗಳ ಸಹಕಾರದೊಂದಿಗೆ ಟ್ಯಾಂಕರ್ ಮಾಫಿಯಾ ಈ ಕೆಲಸ ಮಾಡಿಸುತ್ತಿದೆ ಎಂದು ನಾಗರಿಕರು ದೂರುತ್ತಾರೆ.

ವಿಶೇಷ ನಿಗಾ ತಂಡ ರಚನೆ

‘ಬೇಸಿಗೆ ಸಂದರ್ಭದಲ್ಲಿ ಕೊಳವೆಬಾವಿಗಳು ಬರಿದಾಗುವುದು ಸಹಜ. ಕಾವೇರಿ ನೀರು ಪೂರೈಕೆಯ ರಭಸ ಕಡಿಮೆಯಾಗುತ್ತಿದೆ ಎಂಬ ದೂರುಗಳು ಬಂದಿವೆ. ಕೆಳಹಂತದಲ್ಲಿ ಕೆಲವು ಸಿಬ್ಬಂದಿ ಇದಕ್ಕೆ ಕೈ ಜೋಡಿಸಿರಬಹುದು. ಆದರೆ, ಅನೇಕ ಸಿಬ್ಬಂದಿ ಹಗಲು–ರಾತ್ರಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ನೀರಿನ ಕೊರತೆ ತಲೆದೋರದಂತೆ ಶ್ರಮಿಸುತ್ತಿದ್ದಾರೆ’ ಎಂದು ಜಯರಾಮ್ ಹೇಳಿದ್ದಾರೆ.

‘ಖಾಸಗಿ ಟ್ಯಾಂಕರ್ ಮಾಫಿಯಾ ತಡೆಗಟ್ಟುವ ನಿಟ್ಟಿನಲ್ಲಿ ಮಂಡಳಿಯಿಂದ ವಿಶೇಷ ನಿಗಾ ತಂಡ (ವಿಜಿಲೆನ್ಸ್ ಟೀಂ) ರಚಿಸಲಾಗಿದೆ. ಈ ಸಂಬಂಧ ದೂರುಗಳನ್ನು ತಂಡ ಪರಿಶೀಲಿಸಲಿದೆ’ ಎಂದರು.

‘ನೀರಿನ ಕೊರತೆ ಬಗ್ಗೆ ದೂರು ಬರುವ ಸ್ಥಳಗಳಲ್ಲಿ ಪ್ರತಿದಿನ ಬೆಳಿಗ್ಗೆ 7ಕ್ಕೆ ಮುಖ್ಯ ಎಂಜಿನಿಯರ್ ಸೇರಿದಂತೆ ಎಲ್ಲ ಹಿರಿಯ ಅಧಿಕಾರಿಗಳು ಭೇಟಿ ನೀಡುವಂತೆ ಸೂಚಿಸಲಾಗಿದೆ. ಕೆಳಹಂತದ ಸಿಬ್ಬಂದಿ ಟ್ಯಾಂಕರ್ ಮಾಫಿಯಾ ಜೊತೆಗೆ ಕೈಜೋಡಿಸಿದ್ದರೂ, ಈ ಅಧಿಕಾರಿಗಳು ಅವರ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ. ಅಲ್ಲದೆ, ಸಾರ್ವಜನಿಕರ ಅಹವಾಲುಗಳನ್ನು ಆಲಿಸಲಿದ್ದಾರೆ’ ಎಂದು ಹೇಳಿದರು.

ಬೇಸಿಗೆ ಶುರು: ಬಿಗಡಾಯಿಸಿದ ನೀರಿನ ಸಮಸ್ಯೆ
ವೀಕ್ಷಿಸಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಾರ್ವಜನಿಕರು ಏನಂತಾರೆ ?

3ಂಗಳಿಗೆ ₹ 3 ಸಾವಿರ ಬೇಕು!

20 ವರ್ಷಗಳಿಂದ ನೀರಿನ ಸಮಸ್ಯೆ ಇರಲಿಲ್ಲ. ಒಂದು ತಿಂಗಳಿಂದ ತುಂಬಾ ಸಮಸ್ಯೆಯಾಗಿದೆ. ಕಾವೇರಿ ನೀರಿನ ‘ಫೋರ್ಸ್’ ತುಂಬಾ ಕಡಿಮೆಯಾಗಿದೆ. ಮೂರು ಮನೆಯಿಂದ ಒಮ್ಮೆಗೆ ಟ್ಯಾಂಕರ್ ನೀರಿಗೆ ₹400ರಿಂದ ₹500 ಕೊಡಬೇಕು. ತಿಂಗಳಿಗೆ ಮೂರು ಬಾರಿ ಟ್ಯಾಂಕರ್ ತರಿಸಿದರೆ ₹1,500 ಬೇಕು. ಆದರೆ, ಜಲಮಂಡಳಿಯಿಂದ ನೀರಿನ ಬಿಲ್ ಮಾತ್ರ ಮೊದಲಿನಷ್ಟೇ ಬರುತ್ತಿದೆ.

ರೇಖಾ, ಹಳೆಯ ಮಂಜುನಾಥ ಬಡಾವಣೆ

ನೀರಿಗಾಗಿ ಹೆಚ್ಚು ದುಡಿಯಬೇಕು!

ನಮ್ಮ ಬಡಾವಣೆ ಪೂರ್ತಿ ಕುಡಿಯುವ ನೀರಿಗಾಗಿ ಖಾಸಗಿ ಟ್ಯಾಂಕರ್‌ಗಳನ್ನೇ ಅವಲಂಬಿಸಬೇಕಾಗಿದೆ. ಒಂದು ಲೋಡ್‌ಗೆ ₹450ರಿಂದ ₹600ವರೆಗೆ ಕೇಳುತ್ತಾರೆ. ನಾನು ಆಟೊ ಚಾಲಕ. ಟ್ಯಾಂಕರ್‌ನವರಿಗೆ ಕೊಡಲೆಂದೇ ಹೆಚ್ಚು ದುಡಿಯುವ ಅನಿವಾರ್ಯ ಎದುರಾಗಿದೆ.

ಸತೀಶ್, ಶಾಂತಿ ಬಡಾವಣೆ

ಬೇಸಿಗೆಯಲ್ಲಿ ಹೆಚ್ಚು ದುಡ್ಡು

ಮೊದಲು 15 ದಿನಕ್ಕೊಮ್ಮೆ ಒಂದು ಟ್ಯಾಂಕರ್ ನೀರು ತರಿಸಿಕೊಳ್ಳುತ್ತಿದ್ದೆವು. ಈಗ ವಾರಕ್ಕೊಮ್ಮೆ ನೀರು ಹಾಕಿಸಿಕೊಳ್ಳಬೇಕಾಗಿದೆ. ಅದೂ ಸಾಕಾಗುತ್ತಿಲ್ಲ. ಬೇಸಿಗೆ ಬಂದ ಕೂಡಲೇ ಟ್ಯಾಂಕರ್‌ನವರು ಹೆಚ್ಚು ಹಣ ಕೇಳುತ್ತಾರೆ.

ಕಾರ್ತಿಕ್, ರಾಮಮೂರ್ತಿ ನಗರ

ಅಗತ್ಯವಿದ್ದಲ್ಲಿ ಕೊಳವೆಬಾವಿ ಹಾಕಿ

ನೀರಿಗಾಗಿ ಜಗಳವಾಗುವುದು ಸಾಮಾನ್ಯವಾಗಿದೆ. ಮನವಿ ಮಾಡಿದ ತಕ್ಷಣ ಎಲ್ಲೆಂದರಲ್ಲಿ ಬೋರ್‌ವೆಲ್ ಹಾಕುತ್ತಾರೆ. ಆದರೆ, ಅಲ್ಲಿ ‘ಪಾಯಿಂಟ್’ ಇರುವುದೇ ಇಲ್ಲ. ಕೇವಲ ಲೆಕ್ಕ ತೋರಿಸಲು ಕೊಳವೆ ಬಾವಿ ಕೊರೆಯಲಾಗುತ್ತಿದೆ.

ರಾಜೇಶ್, ಕಲ್ಕೆರೆ

ಮರುಪೂರಣ ಕಾರ್ಯವಾಗಲಿ

ಪಾಲಿಕೆಯಿಂದ ನಮಗೆ ನೀರು ಪೂರೈಕೆಯಾಗುತ್ತಿರುವುದು ಕೊಳವೆ ಬಾವಿ ಮೂಲಕ ಮಾತ್ರ. ಉಳಿದಂತೆ ನಾವು ಖಾಸಗಿ ಟ್ಯಾಂಕರ್‌ಗಳಿಗೆ ಮೊರೆ ಹೋಗಬೇಕಾಗಿದೆ. 6,500 ಲೀಟರ್ ನೀರಿಗೆ ₹750 ಕೊಡಬೇಕಾಗಿದೆ.

ಜಗದೀಶ ರೆಡ್ಡಿ, ವರ್ತೂರು

ಸಂಘ–ಸಂಸ್ಥೆಗಳಿಂದ ಉಚಿತ ನೀರು

ಕೆ.ಆರ್. ಪುರ ಭಾಗದಲ್ಲಿ ಶಾಂತಾ ಕೃಷ್ಣಮೂರ್ತಿ ಪ್ರತಿಷ್ಠಾನ ಸೇರಿದಂತೆ ಕೆಲವು ಸಂಸ್ಥೆಗಳು ಉಚಿತವಾಗಿ ನೀರು ಪೂರೈಸುತ್ತಿರುವುದರಿಂದ ಅನುಕೂಲವಾಗಿದೆ. ದುಡ್ಡು ಕೊಟ್ಟು ಟ್ಯಾಂಕರ್ ನೀರು ತರಿಸಿಕೊಳ್ಳುವ ಶಕ್ತಿ ನಮ್ಮಲ್ಲಿಲ್ಲ.

ಚಿನ್ನಪ್ಪ, ಕೆ.ಆರ್‌. ಪುರ

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ

“ ರಾಷ್ಟ್ರದ ಆರ್ಥಿಕತೆಯ ಬೆಳವಣಿಗೆಯು ಒಂದು ರೀತಿಯಲ್ಲಿ ಕೃಷಿಯ ಬೆಳವಣಿಗೆಯೇ ಆಗಿದೆ ”
- ಡಾ. ಬಾಬು ಜಗಜೀವನ ರಾಂ

ದೇಶದ 'ಹಸಿರುಕ್ರಾಂತಿಯ ಹರಿಕಾರ' ಎಂದೇ ಗುರುತಿಸಿಕೊಂಡ ಡಾ. ಬಾಬು ಜಗಜೀವನ ರಾಂ ಅವರು ತಮ್ಮ ಸೇವೆಯನ್ನು ಮಿತಿಗೊಳಿಸಿಕೊಳ್ಳದೆ ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ರಾಷ್ಟ್ರಕ್ಕೆ ಅನನ್ಯ ಕೊಡುಗೆ ನೀಡಿದ್ದರು. ಭಾರತದ ಉಪ ಪ್ರಧಾನಮಂತ್ರಿಗಳಾಗಿದ್ದ ಡಾ. ಜಗಜೀವನ ರಾಂ ಅವರು ತುಳಿತಕ್ಕೆ ಒಳಗಾಗಿದ್ದ ಜನಾಂಗಗಳ ಆಶಾಕಿರಣವಾಗಿದ್ದರು. 114ನೇ ಜನ್ಮ ವರ್ಷಾಚರಣೆಯ ಈ ಸುಸಂದರ್ಭದಲ್ಲಿ ನಾಡಿನ ಜನತೆ ಅವರನ್ನು ಸ್ಮರಿಸುತ್ತದೆ.

ಡಾ. ಬಾಬು ಜಗಜೀವನ ರಾಂ ಅವರ
114ನೇ ಜನ್ಮ ವರ್ಷಾಚರಣೆಯ ಪ್ರಯುಕ್ತ
ಅವರ ಪ್ರತಿಮೆಗೆ ಮಾಲಾರ್ಪಣೆ

ದಿನಾಂಕ: 05-04-2021 । ಸೋಮವಾರ, ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ವಿಧಾನ ಸೌಧದ ಪಶ್ಚಿಮ ದ್ವಾರ, ಬೆಂಗಳೂರು

ಡಾ॥ ರವಿ ಕುಮಾರ್ ಸುರಪುರ, ಭಾ.ಆ.ಸೇ., ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ
ಡಾ॥ ಎನ್. ನಾಗಾಂಬಿಕಾದೇವಿ, ಭಾ.ಆ.ಸೇ., ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ

ಕೋವಿಡ್ ಲಸಿಕೆ ಪಡೆಯೋಣ, ಸೋಂಕು ಮುಕ್ತ ಸಮಾಜ ನಿರ್ಮಿಸೋಣ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

“ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು”.
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ನಿಧನ ವಾರ್ತೆ

ಸಿತಾರ್ ವಾದಕ ಶಿವಾನಂದ ತರ್ಲಗಟ್ಟಿ

ಧಾರವಾಡ: ಸಿತಾರ್ ವಾದಕ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮತ್ತು ಲಲಿತಕಲಾ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪಂ. ಶಿವಾನಂದ ತರ್ಲಗಟ್ಟಿ (94) ಶನಿವಾರ ರಾತ್ರಿ ನಿಧನರಾದರು.

ಅವರಿಗೆ ಪುತ್ರ, ಮೂವರು ಪುತ್ರಿಯರು ಇದ್ದಾರೆ.

ಹುಬ್ಬಳ್ಳಿ ತಾಲ್ಲೂಕಿನ ಅದರಗುಂಚಿ ಗ್ರಾಮದಲ್ಲಿ 1927ರಲ್ಲಿ ಜನಿಸಿದ ತರ್ಲಗಟ್ಟಿ ಅವರು ಆರಂಭದಲ್ಲಿ ಕೊಳಲಿನಲ್ಲಿ ಶಾಸ್ತ್ರೀಯ ಸಂಗೀತ ನುಡಿಸುತ್ತ ನಂತರ ಆರ್. ವಿ. ಗುಡಿಯಾಳ್ ಅವರ ಬಳಿ ಸಿತಾರ್ ತರಬೇತಿ ಪಡೆದರು.

ಕೆಲ ಕಾಲ ಮುಂಬೈನ ಉಸ್ತಾದ್ ಜಿಯಾ ಮೊಹಿಯುದ್ದೀನ್ ಡಾಗರ್ ಅವರ ಬಳಿ ತರಬೇತಿ ಪಡೆದರು. ಪಂ. ಮಲ್ಲಿಕಾರ್ಜುನ ಮನ್ಸೂರ್ ಅವರಿಂದ ರಾಗ-ರಾಗಿಣಿ ಕಲಿತು ಸಿತಾರ್ ವಾದನದಲ್ಲಿ ಜೈಪುರ್ ಅತ್ರೋಳಿ ಘರಾಣಾ ಬೆಳೆಸುವ ಪ್ರೇರಣೆ ಪಡೆದರು. ತಮ್ಮ ಬದುಕನ್ನು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಮುಡಿಪಾಗಿಟ್ಟರು. ಫ್ರಾನ್ಸ್‌ನಲ್ಲಿ 1986ರಲ್ಲಿ ಕಲಾವಿಸ್ತಾರ್ ಸಂಸ್ಥೆಯ ಆಧಾರಸ್ತಂಭವಾಗಿ, ಪಾಶ್ಚಾತ್ಯ ಶ್ರೋತೃಗಳಲ್ಲಿ ಹಿಂದೂಸ್ತಾನಿ ಸಂಗೀತದ ಅರಿವು ಮೂಡಿಸಲು ನೆರವಾದರು.

ಫ್ರಾನ್ಸ್ ದೇಶದ ಸಂಸ್ಕೃತಿ ಮತ್ತು ಶಿಕ್ಷಣ ಸಚಿವಾಲಯಗಳಿಂದ ಫ್ರೆಂಚ್ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಾಸ್ತ್ರೀಯ ಸಂಗೀತವನ್ನು ಪರಿಚಯಿಸಲು ಆಹ್ವಾನಿತರಾಗಿ 1987ರಿಂದ ಕಾರ್ಯಕ್ರಮಗಳನ್ನು ನೀಡಿದರು. ಇಂಗ್ಲೆಂಡ್, ಟ್ಯುನೀಷಿಯಾ, ಸ್ವಿಡ್ಜರ್ಲೆಂಡ್, ದಕ್ಷಿಣ ಅಮೆರಿಕದ ದೇಶಗಳಲ್ಲಿ ಅವರು ಸಿತಾರ್ ಕುರಿತ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ.

1998 ರಲ್ಲಿ ಸಂಗೀತ ನಾಟಕ ಅಕಾಡೆಮಿಯಿಂದ ಕಲಾಶ್ರೀ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೂ ಅವರು ಭಾಜನರಾಗಿದ್ದಾರೆ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ
ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.1
ಕಡೂರು 577548 ಚಿಕ್ಕಮಗಳೂರು(ಜಿ)

Email:eeubpdvn1@gmail.com
Phone-08267-295207

ಸಂಖ್ಯೆ:ಕಾಇಂ/ವಿಜನಿನಿ/ಭಮೇಯೋ/ವಿ.ನಂ–1/ಕಡೂರು/ಟೆ–5/ಕೆರೆ/2020–21/903 ದಿನಾಂಕ:31/03/2021

ಅಲ್ಪಾವಧಿ ಟೆಂಡರ್ ಪ್ರಕಟಣೆ :(ದ್ವಿಲಕೋಟೆ ಪದ್ದತಿ) (ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕೆರೆ ತುಂಬಿಸುವ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ "Construction of Lift scheme for " Lifting of Water From UBP Intake canal from Ch:10+765 Km (before Shanthipura pump house) and delivering to Ch:11+044 Km (Lift-1) and Conveying Water through UBP Main Canal and further lifting water from UBP main canal at Ch:25+700 (Lift-2) upto delivery chamber near Doddaghatta village (RL 835.00) including providing auxiliary lift-1 For filling tanks in Tarikere Taluk and construction of gravity feeders from delivery chamber-1 to Devankere tank. Improvements to Devanakere tank and gravity feeder-2 for initial reach towards Tangali Tank including Operation and Maintenance for 5years after the date of completion of work" ಕಾಮಗಾರಿಗೆ ದ್ವಿಲಕೋಟೆ ಪದ್ದತಿ ಮೂಲಕ ಕನೀನಿನಿ/ವಿಜನಿನಿ ಕೆಟಗೇರಿ–1 ಗುತ್ತಿಗೆದಾರರಿಂದ ಶೇಕಡಾವಾರು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 05.04.2021 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ:05.05.2021ರ 16.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ / ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ:17.04.2021 ರ 13.30 ಗಂಟೆಯವರೆಗೆ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 06.05.2021 ರಂದು 16.30 ಗಂಟೆಯ ನಂತರ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.1 ಕಡೂರು ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ವಿ.ಸೂ: ಇ.ಪಿ.ಎಫ್ ನೋಂದಣೆ ಕಡ್ಡಾಯವಾಗಿದ್ದು, ಇ.ಪಿ.ಎಫ್ ನೋಂದಣೆ ಇಲ್ಲದ ಗುತ್ತಿಗೆದಾರರ ಟೆಂಡರ್ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್,

ತಾಲ್ಲೂಕು ಪಂಚಾಯಿತಿಗಳಿಗೆ ನೋಟಿಸ್
ಪಿಡಿಒಗಳ ಮೇಲೆ ಮತ್ತೆ ಲೋಕಾಯುಕ್ತ ತೂಗುಗತ್ತಿ

• ಇ.ಎಸ್. ಸುಧೀಂದ್ರ ಪ್ರಸಾದ್

ಮುಖ್ಯಾಂಶಗಳು
- 2013ರಲ್ಲಿ ನಡೆಸಿದ ಸಿಎಜಿ ವರದಿ ಆಧರಿಸಿ ತನಿಖೆ
- 2014ರಲ್ಲಿ ಲೋಕಾಯುಕ್ತ ತನಿಖೆಗೆ ಆದೇಶಿಸಿದ್ದ ಸರ್ಕಾರ
- ಮೂರನೇ ನೋಟಿಸ್ ಜಾರಿ ಮಾಡಿದ ಲೋಕಾಯುಕ್ತ ಪೊಲೀಸ್

ಧಾರವಾಡ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 2007ರಿಂದ 2013ರವರೆಗೆ ನಡೆದಿದೆ ಎನ್ನಲಾದ ಅವ್ಯವಹಾರ ಕುರಿತು ಲೋಕಾಯುಕ್ತ ಪೊಲೀಸ್ ಮೂರನೇ ಬಾರಿ ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳಿಗೆ ನೋಟಿಸ್ ಜಾರಿ ಮಾಡಿದೆ.

2013ರಲ್ಲಿ ಪ್ರಾಯೋಗಿಕವಾಗಿ ಎಂಟು ಜಿಲ್ಲೆಗಳಲ್ಲಿ ಲೆಕ್ಕ ಪರಿಶೋಧನೆ ನಡೆಸಿದ ಮಹಾ ಲೇಖಪಾಲ(ಸಿಎಜಿ), ಇಲಾಖೆಯಲ್ಲಿ ಬಹಳಷ್ಟು ಅವ್ಯವಹಾರ ಮತ್ತು ಹಣ ದುರುಪಯೋಗ ನಡೆದಿರುವ ಕುರಿತು ತನ್ನ ವರದಿಯಲ್ಲಿ ಹೇಳಿತ್ತು.

ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಕಾರರ ಹೆಸರಿನಲ್ಲಿ ಹಣ ತೆಗೆದಿರುವ, ನರೇಗಾ ಹಣ ದುರುಪಯೋಗ ಮಾಡಿಕೊಂಡಿರುವ, ಯಂತ್ರಗಳನ್ನು ಉಪಯೋಗಿಸಿ ನಡೆಸಿದ ಕಾಮಗಾರಿಗಳಿಗೆ ಉದ್ಯೋಗ ಖಾತ್ರಿ ಮೂಲಕ ಬಿಲ್ ಪಾವತಿಸಿರುವ ಹಾಗೂ 60:40ರ ಅನುಪಾತದಲ್ಲಿ ಕಾಮಗಾರಿ ನಡೆಸದಿರುವ ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಅಂದಿನ ಸರ್ಕಾರ, 2014ರಲ್ಲಿ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಿತ್ತು.

ಇಡೀ ರಾಜ್ಯದಲ್ಲಿ ಇಂಥ ಪ್ರಕರಣಗಳು ನಡೆದಿರುವ ಸಾಧ್ಯತೆ ಇದ್ದು, ಸಮಗ್ರ ತನಿಖೆ ಕೈಗೊಳ್ಳುವಂತೆ ಸೂಚಿಸಿತ್ತು. ಕೂಡಲೇ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದ್ದ ಲೋಕಾಯುಕ್ತ ಪೊಲೀಸ್, ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಪಿಡಿಒಗಳಿಂದ ಮಾಹಿತಿ ಸಂಗ್ರಹಿಸಿ ನೀಡುವಂತೆ ಸೂಚಿಸಿತ್ತು.

ಆದರೆ ನಂತರ ತನಿಖೆಯಲ್ಲಿ ಯಾವುದೇ ಪ್ರಗತಿ ಕಂಡುಬಂದಿರಲಿಲ್ಲ. 2020ರ ಡಿಸೆಂಬರ್‌ನಲ್ಲಿ ಲೋಕಾಯುಕ್ತ ಹೆಚ್ಚುವರಿ ಮಹಾನಿರ್ದೇಶಕರ ಸೂಚನೆ ಮೇರೆಗೆ ಮತ್ತೆ ನೋಟಿಸ್ ಜಾರಿ ಮಾಡಲಾಗಿತ್ತು. ಆಗಲೂ ಈ ಕುರಿತಂತೆ ಯಾವುದೇ ವರದಿಗಳನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಲ್ಲಿಸಿರಲಿಲ್ಲ. ಇದೀಗ ಮೂರನೇ ನೋಟಿಸ್ ಅನ್ನು ಲೋಕಾಯುಕ್ತ ಪೊಲೀಸರು ಜಾರಿ ಮಾಡಿದ್ದಾರೆ. ಮುಂದಿನ ಆಗುಹೋಗುಗಳಿಗೆ ಪಿಡಿಒಗಳೇ ಜವಾಬ್ದಾರರು ಎಂದು ಎಚ್ಚರಿಸಿದ್ದಾರೆ.

2007ರಿಂದ ನರೇಗಾ ಯೋಜನೆಯಡಿ ಕೈಗೊಂಡ ಸಂಪೂರ್ಣ ಕಾಮಗಾರಿಗಳ ದಾಖಲಾತಿ ಸಲ್ಲಿಸಬೇಕು. ಯಾವುದೇ ವರ್ಷದ ದಾಖಲಾತಿ ಲಭ್ಯವಿಲ್ಲದಿದ್ದರೆ ಅದಕ್ಕೆ ಸೂಕ್ತ ಕಾರಣಗಳೊಂದಿಗೆ ಮಾಹಿತಿ ನೀಡಬೇಕು. ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ ಕಾರ್ಯದರ್ಶಿ, ಪಿಡಿಒಗಳ ಹೆಸರು, ಮೊಬೈಲ್ ಸಂಖ್ಯೆ, ಸದ್ಯ ಇರುವ ವಿವರ, ನಿವೃತ್ತರಾಗಿದ್ದರೆ ಮನೆ ವಿಳಾಸವನ್ನು ನೀಡಬೇಕು. ಕಾಮಗಾರಿ ಉದ್ಘಾಟನೆ ಮಾಡುವ ಕಾಲಕ್ಕೆ ತೆಗೆದ ಚಿತ್ರಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸಬೇಕು ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ಕೆಲ ತಿಂಗಳ ಹಿಂದೆ ನಡೆದ ಪಿಡಿಒಗಳ ಸಮಾವೇಶದಲ್ಲಿ, ಲೋಕಾಯುಕ್ತ ಪ್ರಕರಣವನ್ನು ರದ್ದುಪಡಿಸಲು ಸರ್ಕಾರ ಆದೇಶಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೆ ಪಿಡಿಒ ಸಂಘಟನೆಯ ವತಿಯಿಂದ ಮನವಿಯನ್ನು ಸಲ್ಲಿಸಲಾಗಿತ್ತು. ಇದಾದ ಬೆನ್ನಲ್ಲೇ ಲೋಕಾಯುಕ್ತ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಸುದ್ದಿ 2 ನಿಮಿಷ

‘ಸೋಂಕು ಚಿತ್ರಮಂದಿರಕ್ಕಷ್ಟೇ ಅಂಟಿಕೊಳ್ಳುತ್ತದೆಯೇ?’

ಹುಬ್ಬಳ್ಳಿ: ‘ಕೋವಿಡ್ ಸೋಂಕು ಬಹಳ ಚಾಣಾಕ್ಷ; ಜಿಮ್ ಹಾಗೂ ಚಿತ್ರಮಂದಿರಗಳಿಗೆ ಬರುವ ಜನರಿಗೆ ಮಾತ್ರ ಅಂಟಿಕೊಳ್ಳುತ್ತದೆ. ರಾಜಕೀಯ ಕಾರ್ಯಕ್ರಮಗಳು ಹಾಗೂ ಧಾರ್ಮಿಕ ಸಮಾರಂಭಗಳತ್ತ ಸೋಂಕು ಸುಳಿಯುವುದಿಲ್ಲ’ ಎಂದು ನಟ ದುನಿಯಾ ವಿಜಯ್ ಲೇವಡಿ ಮಾಡಿದರು.

ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ‘ಚಿತ್ರ ಮಂದಿರಗಳಲ್ಲಿ ಏ. 7ರ ತನಕ ಮಾತ್ರ ಶೇ 100ರಷ್ಟು ಜನರಿಗೆ ಅವಕಾಶ ನೀಡಲಾಗುವುದು ಎಂದು ಹೇಳಿರುವ ಸರ್ಕಾರದ ನಿರ್ಧಾರದಿಂದ ಆಘಾತವಾಗಿದೆ.

ಸರ್ಕಾರದಿಂದ ಆದ ಈ ಅನ್ಯಾಯವನ್ನು ಸರ್ಕಾರವೇ ಸರಿಪಡಿಸಬೇಕು’ ಎಂದು ಆಗ್ರಹಿಸಿದರು.

‘ಸರ್ಕಾರದ ಲೆಕ್ಕಾಚಾರದ ಹಿಂದೆ ಯಾವುದೇ ತರ್ಕವಿಲ್ಲ. ಶೇ 100ರಷ್ಟು ಸೀಟುಗಳ ಭರ್ತಿಗೆ ಅವಕಾಶ ಕೊಟ್ಟರೆ ಒಂದೂವರೆ ವರ್ಷದಿಂದ ಸಂಕಷ್ಟಕ್ಕೆ ಸಿಲುಕಿರುವ ಸಿನಿಮಾ ರಂಗ ಹಾಗೂ ಕಲಾವಿದರು ಬದುಕಿಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿಯೇ ಸರ್ಕಾರ ನಿರ್ಬಂಧ ಹೇರುವುದು ಸರಿಯೇ?’ ಎಂದು ಪ್ರಶ್ನಿಸಿದರು.

’ಸಲಗ’ ಸಿನಿಮಾದ ನಿರ್ಮಾಪಕ ಕೆ.ಪಿ. ಶ್ರೀಕಾಂತ್ ಮಾತನಾಡಿ ‘ಸಿನಿಮಾದ ಚಿತ್ರೀಕರಣ ಹಾಗೂ ಉಳಿದ ಕೆಲಸಗಳು ಪೂರ್ಣಗೊಂಡು ವರ್ಷ ಕಳೆದಿದೆ. ಆದರೆ, ಸರ್ಕಾರದ ಆದೇಶದಿಂದ ಸಿನಿಮಾ ಬಿಡುಗಡೆಗೆ ಹಿಂದೇಟು ಹಾಕಲಾಗುತ್ತಿದ್ದು, ಶೇ 100ರಷ್ಟು ಸೀಟುಗಳ ಭರ್ತಿಗೆ ಅವಕಾಶ ಕೊಟ್ಟರಷ್ಟೇ ‘ಸಲಗ’ ಬಿಡುಗಡೆ ಮಾಡಲಾಗುವುದು’ ಎಂದ ಸ್ಪಷ್ಟಪಡಿಸಿದರು.

ಕಾರ್ಯಕರ್ತರೊಂದಿಗೆ ನಾಳೆ ಪ್ರಧಾನಿ ಮೋದಿ ಚರ್ಚೆ

ಬೆಂಗಳೂರು:ಬಿಜೆಪಿಯ ಸ್ಥಾಪನಾ ದಿನವಾದ ಏ.6 ರಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಕ್ಷದ ಕಾರ್ಯಕರ್ತರೊಂದಿಗೆ ವಿಡಿಯೊ ಸಂವಾದದಲ್ಲಿ ಮಾತನಾಡಲಿದ್ದಾರೆ.

ಅಂದು ಬೆಳಿಗ್ಗೆ 10.30 ಕ್ಕೆ ಈ ಕಾರ್ಯಕ್ರಮ ನಡೆಯಲಿದೆ. ಪಕ್ಷದ ಎಲ್ಲ ಕಾರ್ಯಕರ್ತರು,ಪದಾಧಿಕಾರಿಗಳುತಪ್ಪದೇವಿಡಿಯೊಸಂವಾದದಲ್ಲಿಭಾಗವಹಿಸಬೇಕು ಎಂದು ಬಿಜೆಪಿಯ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ತಿಳಿಸಿದ್ದಾರೆ.

ಈ ಕಾರ್ಯಕ್ರಮ www.bjplive.org, twitter.com/BJP4India ಮತ್ತಿತರ ಸಾಮಾಜಿಕ ಜಾಲತಾಣಗಳಲ್ಲಿ ನೇರ ಪ್ರಸಾರ ಮಾಡಲಾಗುವುದು. ಅದೇ ದಿನ ಸ್ವಚ್ಛತಾ ಕಾರ್ಯಕ್ರಮ, ಏಕ ಬಳಕೆಯ ಪ್ಲಾಸ್ಟಿಕ್ ಉಪಯೋಗ ತೊರೆಯುವ ಸಂಕಲ್ಪ, ಹಿರಿಯ ನಾಗರಿಕರಿಗೆ ಸನ್ಮಾನ ಹಾಗೂ ಸಾಧಕ ವಿದ್ಯಾರ್ಥಿಗಳಿಗೆ ಗೌರವಾರ್ಪಣೆ ಮುಂತಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪಕ್ಷದ ವಿಕಾಸದ ಹಾದಿ ಮತ್ತು ಮುಂದಿನ ನಡೆಗಳ ಬಗ್ಗೆ ಸಂವಾದದಲ್ಲಿ ಚರ್ಚಿಸಲಾಗುವುದು ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91–80–26560722 (Dir), 26094000 ಫ್ಯಾಕ್ಸ್: 080–26560723

No.: KMIO/SME(1)/Tender/CW/OT/181/2020-21 Date: 03.04.2021

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Particulars
1.	No. KMIO/SME(1)/Tender/CW/OT/181/ 2020-21 dated : 03.04.2021 (2nd Call)	Conversion of 5 No's of Operation Theatres with ICU into Modular O.T's including Up-grading the existing AC system to VRF based AC system along with Laminar Flow, and provision for Electrical Re-wiring. Medical Grade Vinyl Flooring. False roofing to OT 3 to 5. ICU, Carridor upto the Rest Rooms and Sensor doors. UPS system for OT and ICU. LED fixtures etc., First floor of Jindal Block.
2	No. KMIO/SME(1)/Tender/Scrap/235/ 2021-22 dated: 03.04.2021 (1st Call)	Lifting of Scrap and unused Metal Scrap at KMIO.
3	No. KMIO/SME(1)/Tender/Reagents RC/ 236/2021-22 dated: 03.04.2021 (1st Call)	Procurement of Haematology Analyser Reagents on Rate Contract.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **06.04.2021 ರಿಂದ 15.04.2021**ರವರೆಗೆ. ಬಿಡ್ ದಾಖಲೆಗಳನ್ನು ಬಿಡ್ಡರ್‌ಗಳು ವೆಬ್‌ಸೈಟ್ **https://eproc.karnataka.gov.in** ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪೋರ್ಟಲ್ ಶುಲ್ಕ ರೂ. 500/–ನ್ನು ಪಾವತಿಸಿ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **25.04.2021 ರಂದು ಮಧ್ಯಾಹ್ನ 3:00 ಗಂಟೆ**ಯವರೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು

DIPR/DDU/026/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹರಿಹರ ಬೆಳ್ಳೂಡಿ ಶಾಖಾ ಮಠದಲ್ಲಿ ಮುಖ್ಯಮಂತ್ರಿ
ಮೀಸಲಾತಿ: ‘ಸುಪ್ರೀಂ’ಗೆ ಅಫಿಡವಿಟ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಈಗಿರುವ ಶೇ 50 ಮೀಸಲಾತಿ ಮಿತಿ ಸಡಿಲಿಸಿ, ಹೆಚ್ಚಿಸಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಲಾಗಿದೆ. ಕೋರ್ಟ್‌ನಲ್ಲಿ ಚರ್ಚೆ ಆರಂಭಗೊಂಡಿದೆ. ನಮ್ಮ ವಾದ ಮಂಡಿಸಿದ್ದೇವೆ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿಗೆ ಮುಖ್ಯಮಂತ್ರಿ ಕೈಮುಗಿದು ಕುಶಲೋಪರಿ ವಿಚಾರಿಸಿದರೆ, ಈಶ್ವರಪ್ಪ ದೇವರಿಗೆ ಕೈ ಮುಗಿಯುತ್ತಾ ನಿಂತರು

ಕಾಗಿನೆಲೆ ಕನಕಪೀಠದ ಹರಿಹರ ಬೆಳ್ಳೂಡಿ ಶಾಖಾ ಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಹಾಲುಮತದ ಕುಲಶಾಸ್ತ್ರ ಅಧ್ಯಯನ ನಡೆಯುತ್ತಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಮೀಸಲಾತಿಗೆ ಸಂಬಂಧಿಸಿ ಸಮಿತಿ ರಚಿಸಲಾಗಿದೆ. ಸಮಿತಿ ವರದಿಯ ನಿರೀಕ್ಷೆಯಲ್ಲಿದ್ದೇವೆ. ಯಾವ ಭೇದಭಾವ ಮಾಡದೇ ನಿಮ್ಮ ಬೇಡಿಕೆಗಳನ್ನು ಈಡೇರಿಸುತ್ತೇವೆ’ ಎಂದು ಭರವಸೆ ನೀಡಿದರು.

ಹೊಸದುರ್ಗ ಶಾಖಾಮಠದಲ್ಲಿ ನಿರ್ಮಾಣಗೊಳ್ಳುತ್ತಿರುವ 32 ಅಡಿಯ ಏಕಶಿಲಾ ಕನಕ ಮೂರ್ತಿ ನಿಲ್ಲಿಸಲು ಅನುದಾನ ನೀಡಬೇಕು. ಸಂಗೊಳ್ಳಿ ರಾಯಣ್ಣ ಪ್ರಾಧಿಕಾರಕ್ಕೆ ಬರಬೇಕಿರುವ ಬಾಕಿ ಅನುದಾನ ಒದಗಿಸಬೇಕು ಎಂದು ಕಾಗಿನೆಲೆ ನಿರಂಜನಾನಂದ ಸ್ವಾಮೀಜಿ ಬೇಡಿಕೆ ಇಟ್ಟರು. ‘ಏಕಶಿಲಾಮೂರ್ತಿಗೆ ₹ 5 ಕೋಟಿ ಅನುದಾನ ಬಿಡುಗಡೆ ಮಾಡುತ್ತೇನೆ’ ಎಂದು ಘೋಷಣೆ ಮಾಡಿದ ಯಡಿಯೂರಪ್ಪ, ‘ಪ್ರಾಧಿಕಾರಕ್ಕೆ ನೀಡಲು ಬಾಕಿ ಇರುವ ₹ 30 ಕೋಟಿ ಒದಗಿಸಲು ಪ್ರಯತ್ನಿಸಲಾಗುವುದು’ ಎಂದು ಆಶ್ವಾಸನೆ ನೀಡಿದರು.

ಕಾರ್ಯಕ್ರಮಕ್ಕೆ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ, ‘ಈವರೆಗೆ ನಡೆದ ಎಲ್ಲ ಉಪ ಚುನಾವಣೆಗಳನ್ನು ಗೆದ್ದಿದ್ದೇವೆ. ಮಸ್ಕಿಯಲ್ಲಿ ಕೂಡ ಗೆಲ್ಲುತ್ತೇವೆ’ ಎಂದು ತಿಳಿಸಿದರು.

ಸಿಡಿ ಪ್ರಕರಣ ಒಳಗೊಂಡಂತೆ ಕೆಲವು ಪ್ರಶ್ನೆಗಳಿಗೆ ಉತ್ತರಿಸದೇ ಮುಂದೆ ಸಾಗಿದರು.

‘ಬಿಎಸ್‌ವೈ ತಂಗಿ ಮಗನ ಜಮೀನಿಗೆ ಅನುಕೂಲ ಮಾಡಿಕೊಡಲು ಅನುದಾನ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಹುಣಸೂರು ತಾಲ್ಲೂಕಿನ ಕಟ್ಟೆಮಳಲವಾಡಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟೆ ದುರಸ್ತಿಗೆ ತುರ್ತಾಗಿ ಅನುದಾನ ಬಿಡುಗಡೆ ಮಾಡಿ ಎಂದು ಗೋಗರೆದರೂ ನಯಾಪೈಸೆ ನೀಡದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ತಮ್ಮ ತಂಗಿ ಮಗನ ಜಮೀನಿಗೆ ಅನುಕೂಲ ಮಾಡಿಕೊಡಲು ₹ 3.26 ಕೋಟಿ ಬಿಡುಗಡೆ ಮಾಡಿದ್ದಾರೆ’ ಎಂದು ಹುಣಸೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಪಿ.ಮಂಜುನಾಥ್ ಭಾನುವಾರ ಇಲ್ಲಿ ಆರೋಪಿಸಿದರು.

ಸಚಿವರೇ ಮರ್ಮಾಘಾತದಲ್ಲಿದ್ದಾರೆ. ಬಿಜೆಪಿ ಶಾಸಕರಿಗೆ ಅನುದಾನ ಕೊಡ್ತಿಲ್ಲ. ಕುಟುಂಬಕ್ಕಷ್ಟೇ ಯಡಿಯೂರಪ್ಪ ಸೀಮಿತವಾಗಿದ್ದಾರೆ.

ಎಚ್.ಪಿ.ಮಂಜುನಾಥ್, ಹುಣಸೂರು ಶಾಸಕ

‘ಮೈಮುಲ್‌ನ ನಾಮನಿರ್ದೇಶಿತ ಸದಸ್ಯ, ತಮ್ಮ ಸಹೋದರಿ ಪುತ್ರ ಎಸ್.ಸಿ.ಅಶೋಕ್ ಧರ್ಮಪುರ ಬಳಿಯ ದೈತ್ಯನ ಕೆರೆ ಸನಿಹ ಹೊಂದಿರುವ 16 ಎಕರೆ ಒತ್ತುವರಿ ಜಮೀನಿಗೆ ತಡೆಗೋಡೆ ನಿರ್ಮಿಸಲು, ದಾರಿ ಮಾಡಿಕೊಡಲು ಕೆರೆ ಅಭಿವೃದ್ಧಿ ಹೆಸರಿನಲ್ಲಿ ಅನುದಾನ ಬಿಡುಗಡೆ ಮಾಡಿದ್ದಾರೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಬಳಿ ಸಂಸದ ಪ್ರತಾಪಸಿಂಹ ಏಳು ತಿಂಗಳ ಹಿಂದೆ ₹ 5 ಕೋಟಿ ಅನುದಾನ ಬಿಡುಗಡೆ ಮಾಡಿಸಿಕೊಂಡು ಬಂದು, ಕಾಮಗಾರಿ ನಡೆಸುವಂತೆ ಬಿಜೆಪಿ ಕಾರ್ಯಕರ್ತರಿಗೆ ಸೂಚಿಸಿದ್ದರು. ಆದರೆ, ಈ ಅನುದಾನವನ್ನು ಮುಖ್ಯಮಂತ್ರಿ ತಡೆ ಹಿಡಿದಿದ್ದಾರೆ. ಹುಣಸೂರಿಗೆ ಅನುದಾನ ಕೊಡಬೇಕೆಂದರೆ ಮುಖ್ಯಮಂತ್ರಿ ಸಂಬಂಧಿಕರು ಅಥವಾ ಕುಟುಂಬಸ್ಥರು ಇರಬೇಕೇ?’ ಎಂದು ಪ್ರಶ್ನಿಸಿದರು.

₹ 42 ಕೋಟಿ ಮಂಜೂರು: ‘ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಅನುದಾನವನ್ನೇ ನೀಡುತ್ತಿಲ್ಲ. ಪುತ್ರ ವಿಜಯೇಂದ್ರ ಶಿಫಾರಸಿನಂತೆ ₹ 42 ಕೋಟಿ ಮಂಜೂರು ಮಾಡಲಾಗಿತ್ತು. ಬೇಡದ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂಬ ಆಕ್ಷೇಪ ವ್ಯಕ್ತಪಡಿಸಿ ಪತ್ರ ಬರೆದೆ.’ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ದೂರಿದರು.

ಪ್ರಜಾವಾಣಿ ಸಂವಾದ

facebook LIVE

ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ

ಮುಖ್ಯಮಂತ್ರಿಯ ಪರಮಾಧಿಕಾರ ಎಂದರೇನು?

ಸಂವಾದದಲ್ಲಿ ಪಾಲ್ಗೊಳ್ಳುವವರು



ಕೆ.ಆರ್.ರಮೇಶ್ ಕುಮಾರ್
ವಿಧಾನಸಭಾ ಸದಸ್ಯರು, ಕಾಂಗ್ರೆಸ್



ಆಯನೂರು ಮಂಜುನಾಥ್
ವಿಧಾನ ಪರಿಷತ್ ಸದಸ್ಯರು, ಬಿಜೆಪಿ

ವೈ.ಎಸ್.ವಿ.ದತ್ತ
ಜೆಡಿಎಸ್ ಮುಖಂಡರು

ನೀವೂ ಪಾಲ್ಗೊಳ್ಳಿ

ಇಂದು ಸಂಜೆ 5 ರಿಂದ 6 ರವರೆಗೆ
fb.com/prajavani.net

ಈಜಲು ಹೋಗಿದ್ದ ಬಾಲಕರು ಸಾವು

ಅಕ್ಕಿಆಲೂರ(ಹಾವೇರಿ): ಹಾನಗಲ್ ತಾಲ್ಲೂಕಿನ ಮಂತಗಿ ಗ್ರಾಮದಲ್ಲಿ ಭಾನುವಾರ ಈಜಲು ಹೋಗಿದ್ದ ಮೂವರು ಬಾಲಕರು ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಮಹ್ಮದ್ ಸಾಹಿಲ್ ಮಕ್ಬೂಲ್‌ಸಾಬ ಡೊಂಗ್ರಿ (17), ಅಹ್ಮದ್ ರಝಾ ಜಾಫರ್‌ಸಾಬ ಅಂಚಿ (16) ಮತ್ತು ಅಕ್ತರ್ ರಝಾಖಾನ್ ಹಜರತಖಾನ್ ಯಳವಟ್ಟಿ (16) ಮೃತರು.

ಹಾನಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಲಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
1	ತ್ಯಾನೀನಿ–ಹೆಚ್.ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ)ಹೆಚ್/ಪಿಬಿ–3 1501/2020–21 ದಿನಾಂಕ: 26.03.2021	ರೂ. 49.447 ಲಕ್ಷಗಳು / ರೂ. 99,000/–	19.04.2021ರ ಸಂಜೆ 5.30 ಗಂಟೆಯವರೆಗೆ	21.04.2021ರ ಅಪರಾಹ್ನ 12.00 ಗಂಟೆಗೆ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಹೆಚ್.ವ್ಯಾಲಿ)
2	ತ್ಯಾನೀನಿ–ಸಿ–ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ)–(ಸಿವಿ)/ಪಿಬಿ 1818/2020–21 ದಿನಾಂಕ: 25.03.2021	ರೂ. 44.85 ಲಕ್ಷಗಳು / ರೂ. 0.90 ಲಕ್ಷ	12.04.2021ರ ಸಂಜೆ 4.00 ಗಂಟೆಯವರೆಗೆ	15.04.2021ರ ಬೆಳಿಗ್ಗೆ 11.00 ಗಂಟೆಗೆ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಸಿ.ವ್ಯಾಲಿ)
3	ಎಸ್‌ಟಿಪಿ–ಎ.ವ್ಯಾಲಿ	ಬೆಂಜಮಂ/ಇಎಸ್‌ಎಟಿಇ/ತಾಂಅ/720/ 2020–21 ದಿನಾಂಕ: 30.03.2021	ರೂ. 12,49,362/– / ರೂ. 31,250/–	12.04.2021ರ ಸಂಜೆ 5.30 ಗಂಟೆಯವರೆಗೆ	14.04.2021ರ ಬೆಳಿಗ್ಗೆ 11.00 ಗಂಟೆಯನಂತರ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ–ಅರ್ಕಾವತಿ ವ್ಯಾಲಿ)
4	ಎಸ್‌ಟಿಪಿ–ಹೆಚ್.ವ್ಯಾಲಿ	ಬೆಂಜಮಂ/ಇಎಸ್‌ಹೆಚ್/ಪಿಬಿ/1461/ 2020–21 ದಿನಾಂಕ: 26.03.2021	ರೂ. 34,90,000/– / ರೂ. 69,800/–	19.04.2021ರ ಸಂಜೆ 5.00 ಗಂಟೆಯವರೆಗೆ	20.04.2021ರ ಸಂಜೆ 5.00 ಗಂಟೆಗೆ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ–ಹೆಚ್.ವ್ಯಾಲಿ)
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
5	ಕೇಂದ್ರ	ಬೆಂಜಮಂ/ಕಾನಿಅ(ಕೇಂದ್ರ)/ಪಿಬಿ/2407/ 2020–21 ದಿನಾಂಕ: 31.03.2021	ರೂ. 5,55,773/– / ರೂ. 13,900/–	19.04.2021ರ ಸಂಜೆ 5.00 ಗಂಟೆಯವರೆಗೆ	20.04.2021ರ ಸಂಜೆ 5.01 ಗಂಟೆಯನಂತರ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕೇಂದ್ರ)
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
6	(ಆಗ್ನೇಯ)–1	ಬೆಂಜಮಂ/ಕಾನಿಅ(ಆಗ್ನೇಯ)–1/ಪಿಬಿ/ 3438/2020–21 ದಿನಾಂಕ: 30.03.2021	ರೂ. 9,21,971/– / ರೂ. 23,100/–	19.04.2021ರ ಸಂಜೆ 4.00 ಗಂಟೆಯವರೆಗೆ	20.04.2021ರ ಸಂಜೆ 5.00 ಗಂಟೆಯನಂತರ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಆಗ್ನೇಯ)–1
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.					
7	ಎಂಐಎಸ್	ಬೆಂಜಮಂ/ಇಎಂಎಸ್/ಟಿಇ/ಎಂಎಸ್1/ ಸಅ/02/2021–22/4ನೇ ಕರೆ ದಿನಾಂಕ: 03.04.2021	ರೂ. 61.08 ಲಕ್ಷಗಳು / ರೂ. 1.22 ಲಕ್ಷಗಳು	12.04.2021ರ ಸಂಜೆ 4.00 ಗಂಟೆಯವರೆಗೆ	15.04.2021ರ ಸಂಜೆ 4.00 ಗಂಟೆಗೆ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಎಂಐಎಸ್)
8	ಆರ್‌ಬಿ–ಐಟಿ	ಬೆಂಜಮಂ/ಇಆರ್‌ಬಿ/06/2021–22/ ದಿನಾಂಕ: 03.04.2021	ಇಎಂಡಿ : ರೂ. 83,000/–	15.04.2021ರ ಸಂಜೆ 5.00 ಗಂಟೆಯವರೆಗೆ	16.04.2021ರ ಸಂಜೆ 5.30 ಗಂಟೆಗೆ
					ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಆರ್‌ಬಿ–ಐಟಿ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/DDU/Zen/R.O:022/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಒಳನೋಟ
ಕ್ಯಾಂಟೀನ್‌ಗೆ ಕಂಟಕ

ಬೆಂಗಳೂರು:‘ಅಗ್ಗದ ಆಹಾರಕ್ಕೆ ಅನುದಾನ ಬರ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಏ.4) ಪ್ರಕಟವಾದ ‘ಒಳನೋಟ’ ವರದಿಗೆ ಓದುಗರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಹಸಿವಿನಲ್ಲೂ ರಾಜಕೀಯ ಬೇಡ

ಶ್ರಮಿಕ ವರ್ಗಕ್ಕೆ ಅಗ್ಗದ ದರದಲ್ಲಿ ಆಹಾರ ಪೂರೈಸುವ ಇಂದಿರಾ ಕ್ಯಾಂಟೀನ್ ಯೋಜನೆ ಉಪಯುಕ್ತವಾಗಿದೆ. ಇದರಿಂದ ನಗರ ಪ್ರದೇಶದಲ್ಲಿನ ಬಡ ಜನರಿಗೆ ಹೆಚ್ಚು ಅನುಕೂಲವಾಗಿದೆ. ಜನಪರವಾಗಿರುವ ಇಂತಹ ಯೋಜನೆಗಳನ್ನು ರಾಜಕೀಯ ಕಾರಣಕ್ಕಾಗಿ ಸ್ಥಗಿತಗೊಳಿಸುವುದು ಸರಿಯಲ್ಲ. ಇದನ್ನು ಎಂದಿನಂತೆ ಮುಂದುವರೆಸಿಕೊಂಡು ಹೋಗುವುದು ಹಾಗೂ ಯೋಜನೆಯ ಲೋಪದೋಷಗಳನ್ನು ಸರಿಪಡಿಸುವುದು ಸರ್ಕಾರದ ಜವಾಬ್ದಾರಿ.

ಕೆ.ಪಿ.ಲಕ್ಷ್ಮೀಕಾಂತ ರಾಜೇ ಅರಸ್, ತುಮಕೂರು

ತುತ್ತಿಗೂ ಆಪತ್ತು ಸರಿಯೇ?

ನಮ್ಮದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ ಎನ್ನುವುದು ಎಷ್ಟು ಸತ್ಯವೋ, ಹಸಿವಿನಿಂದ ಇಂದಿಗೂ ಜನ ನರಳುತ್ತಿರುವುದೂ ಅಷ್ಟೇ ಸತ್ಯ. ದುಡಿಯುವ ವರ್ಗಕ್ಕೂ ಸರಿಯಾದ ಆಹಾರ ದೇಶದಲ್ಲಿ ಸಿಗುತ್ತಿಲ್ಲ. ಈಗಾಗಲೇ ಹಲವು ಯೋಜನೆಗಳಲ್ಲಿನ ಹಣ ನುಂಗಿದ್ದಾರೆ. ಈಗ ಹಸಿವು ನೀಗಿಸುವ ಯೋಜನೆ ಮೇಲೂ ರಾಜಕೀಯದ ಕರಿನೆರಳು ಏಕೆ?

ಪ್ರವೀಣ್ ಗಿರಿ, ಕಿತ್ತೂರು

ಯೋಜನೆ ಮುಂದುವರಿಸಿ

ಯಾವುದೇ ಸರ್ಕಾರ ಬಂದರೂ ಹಸಿದವರ ಹೊಟ್ಟೆ ತುಂಬಿಸುವ ಜವಾಬ್ದಾರಿ ಹೊರಬೇಕು. ಇದಕ್ಕಾಗಿ ಜಾರಿಯಾಗಿರುವ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಮುಂದುವರಿಸಬೇಕು. ದುಡಿಯುವ ಮಧ್ಯಮ ವರ್ಗಕ್ಕೆ ಇಂದಿರಾ ಕ್ಯಾಂಟೀನ್ ಅನ್ನದಾತ. ಮೂರು ಹೊತ್ತಿನ ಹಸಿವನ್ನು ನೀಗಿಸಿಕೊಂಡು, ದುಡಿದ ಹಣವನ್ನು ಒಂದೆಡೆ ಕೂಡಿಡುತ್ತಾರೆ. ಈಗಿರುವ ಸರ್ಕಾರ ಈ ಯೋಜನೆಯನ್ನು ಮುಂದುವರಿಸಬೇಕು.

ಗಾಯತ್ರಿ, ಧಾರವಾಡ

ಅನುದಾನ ಮೀಸಲಿಡಿ

ಬಡವರಿಗೆ, ನಿರ್ಗತಿಕರಿಗೆ ತುತ್ತು ನೀಡುವ ವಿಚಾರದಲ್ಲಿ ಪ್ರತಿಷ್ಠೆಯ ರಾಜಕಾರಣ ಸಮಂಜಸವಲ್ಲ. ಕಡಿಮೆ ದರಕ್ಕೆ ಲಕ್ಷಾಂತರ ಜನರ ಹಸಿವಿನ ದಾಹವನ್ನು ನೀಗಿಸುವಲ್ಲಿ ಇಂದಿರಾ ಕ್ಯಾಂಟೀನ್ ಯಶಸ್ವಿಯಾಗಿದೆ. ಯೋಜನೆಯನ್ನು ಮತ್ತಷ್ಟು ಬಲಪಡಿಸಬೇಕು. ಇದಕ್ಕಾಗಿ ವಿಶೇಷ ಅನುದಾನ ಮೀಸಲಿಡಿ.

ನಾಗರಾಜ್, ದಾವಣಗೆರೆ

ಹಸಿವಿನ ಬಳುವಳಿ ಕೊಡಬೇಡಿ

‘ತಂದೆ-ತಾಯಿ ಜಗಳದಲ್ಲಿ ಕೂಸು ಬಡವಾಯ್ತು’ ಎಂಬಂತೆ ರಾಜಕೀಯದ ಆಟದಲ್ಲಿ ಬಡವರ ಪಂಚತಾರಾ ಹೋಟೆಲ್ (ಇಂದಿರಾ ಕ್ಯಾಂಟೀನ್) ನಲುಗುತ್ತಿದೆ. ಹಸಿವಿನಿಂದ ಬಳಲುವ ಜನರ ಹೊಟ್ಟೆ ಮೇಲೆ ಸರ್ಕಾರ ಹೊಡೆಯಬಾರದು. ಕ್ಯಾಂಟೀನ್ ನಂಬಿಯೇ ಹಲವರು ಜೀವನ ನಡೆಸುತ್ತಿದ್ದಾರೆ. ಸರ್ಕಾರ ಬದಲಾಯಿತೆಂದು, ಬಡವರಿಗೆ ಹಸಿವನ್ನು ಕರುಣಿಸಬೇಡಿ.

ವೀರೇಶ್, ವಿಜಯನಗರ

ಹಸಿವು ಮುಕ್ತ ರಾಜ್ಯವಾಗಲಿ

ಹಿಂದಿನ ಸರ್ಕಾರ ಜಾರಿ ಮಾಡಿದ್ದ ಯೋಜನೆಯನ್ನು ಈಗಿನ ಸರ್ಕಾರ ನಿರ್ಲಕ್ಷ್ಯ ತೋರಿಸಿರುವುದು ವಿಷಾದಕರ ಸಂಗತಿ. ಹಸಿವು ನರಕಕ್ಕಿಂತ ಕೆಟ್ಟದ್ದು ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಇದನ್ನು ಗುತ್ತಿಗೆದಾರರಿಗೆ ನೀಡುವ ಬದಲು ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಿ, ನಿರ್ವಹಣೆ ಮಾಡಬೇಕು. ಆಗಲೇ ಹಸಿವು ಮುಕ್ತ ಕರ್ನಾಟಕವನ್ನು ಕಾಣಲು ಸಾಧ್ಯ.

ನಿಲೇಶ್ ಜಾಧವ್, ಬೆಳಗಾವಿ

ಗಾಯದ ಮೇಲೆ ಬರೆ ಎಳೆಯದಿರಿ

ಬಡವರ ಹಸಿವಿಗೆ ಮಿಡಿದಿದ್ದ ಹಿಂದಿನ ಕಾಂಗ್ರೆಸ್ ಸರ್ಕಾರ, ದೂರದೃಷ್ಟಿಯಿಂದ ಇಂದಿರಾ ಕ್ಯಾಂಟೀನ್ ಆರಂಭಿಸಿತ್ತು. ಬಡವರು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳಿಗೆ ಇದುವೇ ಅಕ್ಷಯ ಪಾತ್ರೆಯಾಗಿತ್ತು. ಲಾಕ್‌ಡೌನ್‌ನಿಂದ ಬಡವರು ಬೀದಿಗೆ ಬಂದು ಹಸಿವಿನಿಂದ ತತ್ತರಿಸಿದರು. ಈಗ ಈ ಯೋಜನೆ ನಿಲ್ಲಿಸಿದರೆ, ಗಾಯದ ಮೇಲೆ ಬರೆ ಎಳೆದಂತೆ.

ಪ್ರವೀಣ್, ಕೊಳ್ಳೇಗಾಲ

‘ಕರುನಾಡ ಕ್ಯಾಂಟೀನ್’ ಆಗಲಿ

ಅಗ್ಗದ ದರಕ್ಕೆ ಹೊಟ್ಟೆ ತುಂಬಿಸುವ ಈ ಯೋಜನೆಗೆ ‘ಕರುನಾಡ ಕ್ಯಾಂಟೀನ್’ ಎಂದು ನಾಮಕಾರಣ ಮಾಡಬೇಕು. ಇದರಿಂದ ಈ ಹೆಸರು ಜನರ ಮನಸಿನಲ್ಲಿ ಸದಾ ಉಳಿಯುತ್ತದೆ. ಅನ್ನದಾಸೋಹ ನಮ್ಮ ನೆಲದ ಪರಂಪರೆಯ ಸಂಕೇತ. ಕ್ಯಾಂಟೀನ್‌ನಲ್ಲಿ ಇನ್ನೂ ಉತ್ತಮವಾದ ಆಹಾರ ಪೂರೈಕೆಯಾಗುವಂತೆ ಸರ್ಕಾರ ಕ್ರಮ ಜರುಗಿಸಬೇಕು.

ನೇತ್ರಾವತಿ, ಉತ್ತರ ಕನ್ನಡ

ತಾಂತ್ರಿಕ ಸಮಿತಿ ಶಿಫಾರಸು: ಆರೋಗ್ಯ ಸಚಿವ ಡಾ. ಕೆ. ಸುಧಾಕರ್

‘ಎಚ್ಚೆತ್ತುಕೊಳ್ಳದಿದ್ದರೆ ಸಂಕಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕು ನಿಯಂತ್ರಣಕ್ಕೆ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ಈ ಸಂಬಂಧ ಆರೋಗ್ಯ ಇಲಾಖೆ ಹಾಗೂ ಕೋವಿಡ್ ನಿಯಂತ್ರಣ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸುಗಳನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಕಳುಹಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.



ಭಾನುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ರಾಜ್ಯದ ಕೆಲವು ಕಡೆಗಳಲ್ಲಿ ಕೋವಿಡ್ ಸೋಂಕಿನ ಪ್ರಕರಣಗಳು ಏರುತ್ತಿವೆ. ಆರೋಗ್ಯ ಇಲಾಖೆ ಮತ್ತು ತಾಂತ್ರಿಕ ಸಲಹಾ ಸಮಿತಿಯ ಶಿಫಾರಸುಗಳನ್ನು ಆಧರಿಸಿ ನಾವು ಈಗಲೇ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳದಿದ್ದರೆ ಮುಂದಿನ ದಿನಗಳು ಕಷ್ಟಕರವಾಗಿರಲಿವೆ’ ಎಂದರು.

‘ಈ ವಿಚಾರದಲ್ಲಿ ಯಾರನ್ನೋ ಮೆಚ್ಚಿಸುವುದಕ್ಕಾಗಿ ತೀರ್ಮಾನ ಕೈಗೊಳ್ಳುವುದು ಸಾಧ್ಯವಿಲ್ಲ. ಕೆಲವು ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಂಡು, ಅನುಷ್ಠಾನಕ್ಕೆ ತರಲೇಬೇಕಿದೆ. ಕೆಲವರು ನನ್ನನ್ನು ಟೀಕಿಸುತ್ತಿದ್ದಾರೆ. ಅಂತಹ ಟೀಕೆಗಳಿಗೆ ಅಂಜುವುದಿಲ್ಲ. ಆರೋಗ್ಯ ಸಚಿವನಾಗಿ ರಾಜ್ಯದ ಜನರ ಆರೋಗ್ಯವನ್ನು ಕಾಪಾಡುವುದು ನನ್ನ ಮೊದಲ ಕರ್ತವ್ಯ’ ಎಂದು ಪ್ರತಿಕ್ರಿಯಿಸಿದರು.

ಜೀವನ ಮತ್ತು ಜೀವನೋಪಾಯ ಎರಡನ್ನೂ ಸರಿದೂಗಿಸಿಕೊಂಡು ಹೋಗಬೇಕಾದ ಕಠಿಣ ಸವಾಲು ರಾಜ್ಯ ಸರ್ಕಾರದ ಮುಂದಿದೆ. ಅದನ್ನು ಅರಿತು ಮುಖ್ಯಮಂತ್ರಿಯವರು ಕೆಲವರಿಗೆ ವಿನಾಯಿತಿಗಳನ್ನು ನೀಡಿದ್ದಾರೆ. ಆ ಬಗ್ಗೆ ವ್ಯಾಖ್ಯಾನ ಮಾಡಲು ತಾವು ಬಯಸುವುದಿಲ್ಲ ಎಂದರು.

ಜನರ ಆರೋಗ್ಯದ ಹಿತದೃಷ್ಟಿಯಿಂದ ಕಳುಹಿಸಬೇಕಾದ ಎಲ್ಲ ವರದಿಗಳನ್ನೂ ಮುಖ್ಯಮಂತ್ರಿಯವರಿಗೆ ಕಳುಹಿಸಲಾಗಿದೆ. ಮಾಸ್ಕ್ ವಿಚಾರದಲ್ಲಿ ಮತ್ತಷ್ಟು ಒತ್ತು ನೀಡಬೇಕಿದೆ. ಮಾಸ್ಕ್ ಧರಿಸದೇ ಇರುವವರಿಗೆ ದಂಡ ವಿಧಿಸುವ ಹಾಗೂ ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡಬೇಕಿದೆ ಎಂದರು.

ಆರೋಗ್ಯ ಸಚಿವನಾಗಿ ಇತಿಮಿತಿಯಲ್ಲಿ ಕೆಲಸ ಮಾಡಬೇಕಿದೆ. ಸರ್ಕಾರ ಎಂಬುದು ಒಂದು ದೊಡ್ಡ ವ್ಯವಸ್ಥೆ. ಮಾರ್ಗಸೂಚಿ ವಿಚಾರದಲ್ಲಿ ತಮಗೂ ಹಲವು ರೀತಿಯ ಒತ್ತಡಗಳು ಬಂದಿದ್ದವು. ಶಿಕ್ಷಣ ಸಂಸ್ಥೆಗಳು, ಚಿತ್ರನಟರ ಅಭಿಮಾನಿಗಳು, ಜಿಮ್ ಮಾಲೀಕರು, ಮದುವೆ ಸಮಾರಂಭಗಳ ಆಯೋಜಕರಿಂದಲೂ ಒತ್ತಡ ಬಂದಿದೆ. ಅವರು ಹೇಳುವುದರಲ್ಲಿ ತಪ್ಪಿಲ್ಲ. ಆದರೆ, ರಾಜ್ಯದ ಜನರ ಜೀವ ಉಳಿಸುವುದಕ್ಕೆ ಪ್ರಥಮ ಆದ್ಯತೆ ಎಂದರು.

‘ಕಠಿಣ ನಿಯಮಗಳಿಂದ ಕೆಲವರಿಗೆ ಬೇಸರ ಆಗಬಹುದು. ನನ್ನ ವಿರುದ್ಧ ಮಾತನಾಡಬಹುದು. ಆದರೆ, ತಜ್ಞರನ್ನು ಒಳಗೊಂಡ ತಾಂತ್ರಿಕ ಸಲಹಾ ಸಮಿತಿಯ ವರದಿಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುವುದು ನನ್ನ ಕೆಲಸ. ಯಾರು ಏನಾದರೂ ಟೀಕೆ ಮಾಡಿಕೊಳ್ಳಲಿ. ನನ್ನ ಕೆಲಸವನ್ನು ನಾನು ಮಾಡುತ್ತೇನೆ’ ಎಂದು ಹೇಳಿದರು.

ಬಸ್‌ಗಳಲ್ಲಿ ನಿಯಮ ಪಾಲನೆ ಆಗದಿರುವುದು ಗಮನಕ್ಕೆ ಬಂದಿದೆ. ಈ ವಿಚಾರ ಆರೋಗ್ಯ ಇಲಾಖೆಯ ವ್ಯಾಪ್ತಿಗೆ ಸೇರಿಲ್ಲ. ಮಾರ್ಗಸೂಚಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಯಾ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಮನವಿ ಮಾಡಲಾಗಿದೆ ಎಂದರು.

ಸಕ್ರಿಯ ಪ್ರಕರಣ 39 ಸಾವಿರಕ್ಕೆ ಏರಿಕೆ

ರಾಜ್ಯದಲ್ಲಿ ಸತತ ಐದನೇ ದಿನ ಕೂಡ ನಾಲ್ಕು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ 4,553 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 39,092ಕ್ಕೆ ತಲುಪಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, 7 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ. ಬೆಂಗಳೂರಿನಲ್ಲಿ ಮತ್ತೆ 2,787 ಮಂದಿ ಸೋಂಕಿತರಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 4.47 ಲಕ್ಷ ದಾಟಿದೆ. ಮೈಸೂರು (260), ಕಲಬುರ್ಗಿ (170), ಬೆಂಗಳೂರು ಗ್ರಾಮಾಂತರ (155), ಬೀದರ್ (147), ತುಮಕೂರು (107), ಹಾಸನ (104), ಧಾರವಾಡ (100) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

ಕೋವಿಡ್ ಪೀಡಿತರಲ್ಲಿ ಮತ್ತೆ 15 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲಿ 8 ಮಂದಿ, ಕಲಬುರ್ಗಿಯಲ್ಲಿ 3 ಮಂದಿ, ಧಾರವಾಡದಲ್ಲಿ ಇಬ್ಬರು, ತುಮಕೂರು ಮತ್ತು ಹಾಸನದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಈವರೆಗೆ ಮೃತಪಟ್ಟವರ ಸಂಖ್ಯೆ 12,625ಕ್ಕೆ ತಲುಪಿದೆ. ಸದ್ಯ ಸೋಂಕು ದೃಢ ಪ್ರಮಾಣ ಶೇ 3.79 ರಷ್ಟಿದೆ. 331 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಕೂಡ ಏರಿಕೆ ಕಂಡಿದೆ.

ಒಂದು ದಿನದ ಅವಧಿಯಲ್ಲಿ 1.19 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಕೊರೊನಾ ಸೋಂಕಿತರಲ್ಲಿ 2,060 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.63 ಲಕ್ಷ ದಾಟಿದೆ.

ರಾಜ್ಯಕ್ಕೆ ಇಂದು 15.25 ಲಕ್ಷ ಡೋಸ್ ಲಸಿಕೆ

ಡಾ.ಕೆ. ಸುಧಾಕರ್

ರಾಜ್ಯಕ್ಕೆ ಸೋಮವಾರ 15.25 ಲಕ್ಷ ಡೋಸ್ ಕೋವಿಡ್ ಲಸಿಕೆ ಪೂರೈಕೆಯಾಗಲಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಇದುವರೆಗೆ 45 ಲಕ್ಷ ಜನರಿಗೆ ಕೋವಿಡ್ ಲಸಿಕೆ ನೀಡಲಾಗಿದೆ. ಶನಿವಾರ ಒಂದೇ ದಿನ 2.09 ಲಕ್ಷ ಜನರಿಗೆ ಲಸಿಕೆ ಹಾಕಲಾಗಿದೆ. ಸದ್ಯ ರಾಜ್ಯದಲ್ಲಿ 8 ಲಕ್ಷ ಡೋಸ್ ಲಸಿಕೆಯ ದಾಸ್ತಾನು ಇದೆ. ಹೆಚ್ಚುವರಿಯಾಗಿ 25 ಲಕ್ಷ ಡೋಸ್‌ನಷ್ಟು ಲಸಿಕೆಯನ್ನು ತಕ್ಷಣ ಪೂರೈಸುವಂತೆ ಕೇಂದ್ರ ಆರೋಗ್ಯ ಸಚಿವರು ಮತ್ತು ಆರೋಗ್ಯ ಇಲಾಖೆಯ ಕಾರ್ಯದರ್ಶಿಗೆ ಬೇಡಿಕೆ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸೋಮವಾರ 5.25 ಲಕ್ಷ ಡೋಸ್ ಲಸಿಕೆ ರಸ್ತೆ ಮಾರ್ಗವಾಗಿ ಬೆಳಗಾವಿಗೆ ತಲುಪಲಿದೆ. 10 ಲಕ್ಷ ಡೋಸ್ ಲಸಿಕೆ ವಿಮಾನದ ಮೂಲಕ ಬೆಂಗಳೂರಿಗೆ ಬರಲಿದೆ. ಇನ್ನೂ 10 ಲಕ್ಷ ಡೋಸ್ ಲಸಿಕೆ ವಾರಾಂತ್ಯದೊಳಗೆ ಪೂರೈಕೆಯಾಗಲಿದೆ ಎಂದು ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಜಾಗರೂಕತೆ ವಹಿಸಲು ನಿರಾಣಿ ಮನವಿ

ಬೆಂಗಳೂರು: ಸ್ಫೋಟಕಗಳನ್ನು ದಾಸ್ತಾನು ಮಾಡುವಾಗ, ಸಾಗಣೆ ಮತ್ತು ಬಳಕೆ ಮಾಡುವಾಗ ಜಾಗರೂಕತೆ ವಹಿಸುವಂತೆ ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಮನವಿ ಮಾಡಿದ್ದಾರೆ.

ಹಾಸನ ತಾಲ್ಲೂಕಿನ ಚಾಕೇನಹಳ್ಳಿಯ ಗೋದಾಮಿನಲ್ಲಿ ಸಂಭವಿಸಿದ ದುರಂತದಲ್ಲಿ ಮೃತಪಟ್ಟ ಸಂಪತ್ ಕುಟುಂಬಕ್ಕೆ ಸಾಂತ್ವಾನ ಹೇಳಿರುವ ಅವರು, ಈ ಘಟನೆಯಲ್ಲಿ ಗಾಯಗೊಂಡವರಿಗೆ ಅಗತ್ಯ ಚಿಕಿತ್ಸೆ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಮಹಾರಾಷ್ಟ್ರ: ವಾರಾಂತ್ಯದ ಲಾಕ್‌ಡೌನ್ ಜಾರಿ

ಮುಂಬೈ(ಪಿಟಿಐ): ಕೋವಿಡ್ ಸೋಂಕು ಪ್ರಕರಣಗಳ ತೀವ್ರ ಏರಿಕೆ ಹಿನ್ನೆಲೆಯಲ್ಲಿ ನಿಯಂತ್ರಣ ಕ್ರಮವಾಗಿ ಮಹಾರಾಷ್ಟ್ರ ಸರ್ಕಾರ ವಾರಾಂತ್ಯದಲ್ಲಿ ಲಾಕ್‌ಡೌನ್ ಜಾರಿಗೊಳಿಸಲು ನಿರ್ಧರಿಸಿದೆ. ಶುಕ್ರವಾರ ರಾತ್ರಿ 8 ಗಂಟೆಯಿಂದ ಸೋಮವಾರ ಬೆಳಿಗ್ಗೆ 7 ಗಂಟೆಯವರೆಗೂ ಲಾಕ್‌ಡೌನ್ ಜಾರಿಯಲ್ಲಿ ಇರಲಿದೆ.

ವಾರಾಂತ್ಯದ ಲಾಕ್‌ಡೌನ್ ಕ್ರಮವನ್ನು ಹೊರತುಪಡಿಸಿ ಸೋಮವಾರ ರಾತ್ರಿ 8 ಗಂಟೆಯಿಂದ ಜಾರಿಗೆ ಬರುವಂತೆ ಹಲವು ನಿರ್ಬಂಧಗಳನ್ನು ಹೇರಲಾಗಿದೆ ಎಂದು ಅಲ್ಪಸಂಖ್ಯಾತರ ಖಾತೆ ಸಚಿವ ನವಾಬ್ ಮಲ್ಲಿಕ್ ಶನಿವಾರ ಭಾನುವಾರ ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

ವಾರದ ದಿನಗಳಲ್ಲಿ ಹಗಲು ಹೊತ್ತಿನಲ್ಲಿ ಸೆಕ್ಷನ್ 144ರ ಅನ್ವಯ ನಿಷೇಧಾಜ್ಞೆ ಮತ್ತು ರಾತ್ರಿ ಕರ್ಫ್ಯೂ ಜಾರಿಯಲ್ಲಿ ಇರಲಿದೆ. ಅಗತ್ಯ ವಸ್ತುಗಳ ಸೇವೆಗೆ ರಾತ್ರಿ ಕರ್ಫ್ಯೂನಿಂದ ವಿನಾಯಿತಿ ಇರುತ್ತದೆ. ಸೋಮವಾರದಿಂದಲೇ ಅನ್ವಯ ಆಗುವಂತೆ ಕಟ್ಟುನಿಟ್ಟಿನ ಕ್ರಮಗಳು ಜಾರಿಗೆ ಬರಲಿವೆ. ಶಾಪಿಂಗ್ ಮಾಲ್‌ಗಳು, ಬಾರ್‌ಗಳು, ರೆಸ್ಟೊರಂಟ್‌ಗಳಲ್ಲಿ ಪಾರ್ಸಲ್ ಒಯ್ಯಲಷ್ಟೇ ಅವಕಾಶವಿದೆ. ಸರ್ಕಾರಿ ಕಚೇರಿಗಳಲ್ಲಿ ಶೇ 50ರಷ್ಟು ಹಾಜರಿಗೆ ಅವಕಾಶವಿದೆ ಎಂದರು.

ಉದ್ಯಮಗಳು ಮತ್ತು ಉತ್ಪಾದನಾ ವಲಯ, ತರಕಾರಿ ಮಾರುಕಟ್ಟೆಗಳಲ್ಲಿ ಸಾಮಾನ್ಯ ನಿರ್ವಹಣಾ ಕ್ರಮಗಳು, ಮಾರ್ಗಸೂಚಿಗಳನ್ನು ಅನುಸರಿಸುವುದು ಕಡ್ಡಾಯ. ಕಾರ್ಮಿಕರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿದ್ದರೆ ಮಾತ್ರ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಅವಕಾಶವನ್ನು ಕಲ್ಪಿಸಲಾಗುವುದು ಎಂದು ತಿಳಿಸಿದರು.

ಚಿತ್ರಮಂದಿರಗಳು, ರಂಗಶಾಲೆಗಳನ್ನು ಮುಚ್ಚಲಾಗುತ್ತದೆ.

ಧಾರ್ಮಿಕ ಸ್ಥಳಗಳು ತೆರೆದಿರುತ್ತವೆ. ಆದರೆ, ಮಾರ್ಗಸೂಚಿ ನಿಯಮಗಳ ಪಾಲನೆ ಕಡ್ಡಾಯಗೊಳಿಸಲಾಗಿದೆ ಎಂದು ಸಚಿವ ಅಸ್ಲಂ ಶೇಖ್ ಅವರು ತಿಳಿಸಿದರು.

ಕಠಿಣ ನಿಯಂತ್ರಣ ಕ್ರಮಕ್ಕೆ ಸೂಚನೆ

ಒಂದನೇ ಪುಟದಿಂದ...

'ಸೋಂಕು ತೀವ್ರಗತಿಯಲ್ಲಿ ಹಬ್ಬುತ್ತಿರುವ ಸ್ಥಳಗಳಲ್ಲಿ ನಿರ್ಬಂಧಗಳನ್ನು ಜಾರಿಗೊಳಿಸುವುದು ಸೇರಿದಂತೆ ಅಗತ್ಯವಿರುವ ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಹತ್ತು ರಾಜ್ಯಗಳಲ್ಲೇ ಶೇಕಡ 91ರಷ್ಟು ಸೋಂಕು ಮತ್ತು ಸಾವಿನ ಪ್ರಕರಣಗಳು ಪತ್ತೆಯಾಗಿವೆ. ಅದರಲ್ಲೂ ಮಹಾರಾಷ್ಟ್ರ, ಪಂಜಾಬ್ ಮತ್ತು ಛತ್ತೀಸಗಡದಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. ದೇಶದಲ್ಲಿ ಭಾನುವಾರ ಒಂದೇ ದಿನ 93 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಮತ್ತು 500ಕ್ಕೂ ಹೆಚ್ಚು ಸಾವು ಸಂಭವಿಸಿರುವ ಬಗ್ಗೆ ಅಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

ಅತಿ ಹೆಚ್ಚು ಸೋಂಕು ಪ್ರಕರಣಗಳು ಪತ್ತೆಯಾಗಿರುವ ಮಹಾರಾಷ್ಟ್ರ, ಪಂಜಾಬ್ ಮತ್ತು ಛತ್ತೀಸಗಡಕ್ಕೆ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ತಜ್ಞರ ತಂಡವನ್ನು ಕಳಹಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಸೋಂಕು ಹೆಚ್ಚಲು ಕಾರಣವಾದ ವಿಷಯಗಳ ಬಗ್ಗೆ ಈ ತಜ್ಞರು ಪರಿಶೀಲಿಸಲಿದ್ದಾರೆ.

ಮಾಸ್ಕ್ ಧರಿಸಲು ಮತ್ತು ಸುರಕ್ಷಿತ ಅಂತರ ಕಾಪಾಡಿಕೊಳ್ಳಲು ಜನರು ನಿರ್ಲಕ್ಷ್ಯ ತೋರುತ್ತಿದ್ದಾರೆ. ಜತೆಗೆ, ಸೋಂಕು ಹೆಚ್ಚಿರುವ ಪ್ರದೇಶಗಳನ್ನು ಕಂಟೈನ್ಮೆಂಟ್ ವಲಯಗಳೆಂದು ಘೋಷಿಸಲು ಕ್ರಮಕೈಗೊಳ್ಳದಿರುವುದರಿಂದ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿವೆ ಎಂದು ಸಭೆ ಬಳಿಕ ಪ್ರಧಾನಿ ಕಚೇರಿ ಹೊರಡಿಸಿದ ಪ್ರಕಟಣೆ ತಿಳಿಸಿದೆ.

ಜಾಗೃತಿ ಅಭಿಯಾನ: ಕೋವಿಡ್–19 ನಿಯಂತ್ರಿಸುವ ಕುರಿತು ಏಪ್ರಿಲ್ 6 ರಿಂದ ಒಂದು ವಾರ ಕಾಲ ವಿಶೇಷ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಪ್ರತಿಯೊಬ್ಬರು ಮಾಸ್ಕ್ ಧರಿಸುವಂತೆ ಮತ್ತು ವೈಯಕ್ತಿಕ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಹಾಗೂ ಸುರಕ್ಷಿತ ಅಂತರ ಕಾಪಾಡಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುವುದು ಈ ಅಭಿಯಾನದ ಉದ್ದೇಶವಾಗಿದೆ.

ದೇಶದಲ್ಲಿ ಕಳೆದ ಎರಡು ವಾರಗಳಲ್ಲಿ ಪತ್ತೆಯಾದ ಒಟ್ಟು ಸೋಂಕು ಪ್ರಕರಣಗಳಲ್ಲಿ ಮಹಾರಾಷ್ಟ್ರದಲ್ಲಿ ಶೇಕಡ 57ರಷ್ಟು ಇವೆ. ಅಲ್ಲದೆ ಶೇಕಡ 47ರಷ್ಟು ಸಾವಿನ ಪ್ರಕರಣಗಳು ವರದಿಯಾಗಿವೆ. ಹೊಸ ಪ್ರಕರಣಗಳು 47,913 ಪತ್ತೆಯಾಗಿದ್ದು, ಇದು ಕಳೆದ ವರ್ಷ ದಾಖಲಾದ ಪ್ರಕರಣಗಳಿಗಿಂತಲೂ ದುಪ್ಪಟ್ಟು.

ಕಳೆದ 14 ದಿನಗಳಲ್ಲಿನ ಒಟ್ಟು ಪ್ರಕರಣಗಳಲ್ಲಿ ಪಂಜಾಬ್‌ನಲ್ಲಿ ಶೇಕಡ 4.5ರಷ್ಟು ಪತ್ತೆಯಾಗಿವೆ ಮತ್ತು ಶೇಕಡ 16.3ರಷ್ಟು ಸಾವಿನ ಪ್ರಕರಣಗಳು ಸಂಭವಿಸಿವೆ. ಛತ್ತೀಸಗಡನಲ್ಲಿ ಶೇಕಡ 4.3ರಷ್ಟು ಪ್ರಕರಣಗಳು ಪತ್ತೆಯಾಗಿವೆ ಎಂಬುದನ್ನು ಸಭೆಯಲ್ಲಿ ವಿವರಿಸಲಾಯಿತು.

ಲಸಿಕೆಯ ಸಂಶೋಧನೆ ಮತ್ತು ಅಭಿವೃದ್ಧಿ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ದೇಶದಲ್ಲಿ ಲಸಿಕೆ ಕೊರತೆಯಾಗದಂತೆ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜತೆಗೆ, ‘ವಸುದೈವ ಕುಟುಂಬಕಂ’ ತತ್ವದ ಆಧಾರದಲ್ಲಿ ಇತರ ದೇಶಗಳಿಗೂ ಅಗತ್ಯವಿರುವ ಲಸಿಕೆ ಕಳುಹಿಸಲು ಯೋಜನೆ ರೂಪಿಸಲಾಗಿದೆ. ಲಸಿಕೆ ತಯಾರಕರು ಸಹ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿದ್ದಾರೆ. ಇದಕ್ಕಾಗಿ ದೇಶಿಯ ಮತ್ತು ವಿದೇಶದಲ್ಲಿನ ಕಂಪನಿಗಳ ಜತೆ ಚರ್ಚೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

‘2–3 ವಾರ ಕಾರ್ಯಕ್ರಮ ನಿರ್ಬಂಧಿಸಿ’

ಒಂದನೇ ಪುಟದಿಂದ...

‘ಲಾಕ್‌ಡೌನ್ ಜಾರಿ ಪರಿಹಾರವಲ್ಲ. ಬದಲಾಗಿ ನಾಲ್ಕು ಗೋಡೆಗಳ ಮಧ್ಯೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವುದನ್ನು ತಡೆಯಬೇಕು. ನಿಯಮಗಳು ಕಟ್ಟುನಿಟ್ಟಾಗಿ ಜಾರಿಯಾಗುವಂತೆ ನೋಡಿಕೊಳ್ಳಬೇಕು. ಸಿನಿಮಾ ಮಂದಿರ, ವಿವಾಹ ಸಭಾಂಗಣ, ಜಿಮ್, ಶಾಲಾ–ಕಾಲೇಜು ಸೇರಿದಂತೆ ವಿವಿಧೆಡೆ ನಾಲ್ಕು ಗೋಡೆಗಳ ಮಧ್ಯ ಸೋಂಕು ಹರಡುವ ಸಾಧ್ಯತೆ ಇರುತ್ತದೆ. ಮುಂದಿನ ಎರಡು ಮೂರು ವಾರ ಕಾರ್ಯಕ್ರಮಗಳನ್ನು ನಿರ್ಬಂಧಿಸಿ, ಕೆಲವೊಂದನ್ನು ಸ್ಥಗಿತ ಮಾಡಬೇಕು. ಆಗ ಸೋಂಕು ಹರಡುವಿಕೆ ತಡೆಯಬಹುದು’ ಎಂದು ಹೇಳಿದ್ದಾರೆ.

ಹಾಸಿಗೆ ಸಮಸ್ಯೆ: ‘ಶೇ 10ರಷ್ಟು ಮಂದಿಗೆ ಸೋಂಕಿನ ಲಕ್ಷಣಗಳು ಬಹಿರಂಗವಾಗಿ ಗೋಚರಿಸಿ, ಅವರು ಆಸ್ಪತ್ರೆಗೆ ದಾಖಲಾದಲ್ಲಿ ಸಮಸ್ಯೆಯಾಗುತ್ತದೆ. ಪ್ರತಿನಿತ್ಯ 6 ಸಾವಿರ ಪ್ರಕರಣಗಳು ವರದಿಯಾಗಿ, 500ರಿಂದ 600 ಮಂದಿ ಆಸ್ಪತ್ರೆ ಸೇರಿದಲ್ಲಿ ಹಾಸಿಗೆ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳಲಿದೆ. ಒಂದು ವಾರದಲ್ಲಿ ಆರೋಗ್ಯ ವ್ಯವಸ್ಥೆ ಸಂಪೂರ್ಣ ತಲೆಕೆಳಗಾಗಲಿದೆ. ಈಗ ಕಚೇರಿಗೆ ಹೋಗುತ್ತಿರುವವರು, ಶಾಲಾ–ಕಾಲೇಜುಗಳಿಗೆ ಹೋಗುತ್ತಿರುವವರು, ಸಾರ್ವಜನಿಕ ಸ್ಥಳದಲ್ಲಿ ಓಡಾಡುತ್ತಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುತ್ತಿದ್ದಾರೆ. ಇವರಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇದ್ದವರಿಗೆ ಸಮಸ್ಯೆಯಾಗುತ್ತದೆ. ಅದೇ ರೀತಿ, ಅವರಿಂದ ಮನೆಯ ಹಿರಿಯರು ಕೂಡ ಸೋಂಕಿತರಾಗುವ ಸಾಧ್ಯತೆ ಇರುತ್ತದೆ’ ಎಂದರು.

‘ಎಲ್ಲರೂ ಕೋವಿಡ್ ಲಸಿಕೆ ಪಡೆದುಕೊಳ್ಳಬೇಕು. ಎರಡು ಡೋಸ್ ಪಡೆದ ಬಳಿಕ ಸಾವು ಸಂಭವಿಸುವುದಿಲ್ಲ ಎಂಬ ದಾಖಲೆಗಳಿವೆ. ಆದರೆ, ಸೋಂಕು ತಗುಲಲ್ಲ ಎಂದು ಹೇಳಲು ಸಾಧ್ಯವಿಲ್ಲ. ಕೋವಿಡ್ ಪೀಡಿತರಾದರೂ ರೋಗದ ತೀವ್ರತೆ ಕಡಿಮೆ ಇರುತ್ತದೆ. ಮುಖಗವಸು ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ ಸೇರಿದಂತೆ ವಿವಿಧ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಗ್ರಾಮದಲ್ಲಿ ಸ್ವಚ್ಛತೆ ಕೊರತೆಯಿಂದ ಸೊಳ್ಳೆಗಳ ಹಾವಳಿ

ರೇಖಲಗೆರೆ: 15 ಜನರಿಗೆ ಡೆಂಗಿ, ಟೈಫಾಯಿಡ್

ಪ್ರಜಾವಾಣಿ ವಾರ್ತೆ

ರೇಖಲಗೆರೆ (ನಾಯಕನಹಟ್ಟಿ, ಚಿತ್ರದುರ್ಗ ಜಿ.): ಹೋಬಳಿಯ ರೇಖಲಗೆರೆ ಗ್ರಾಮದಲ್ಲಿ ಸ್ವಚ್ಛತೆ ಕೊರತೆಯಿಂದಾಗಿ ಸೊಳ್ಳೆಗಳ ಹಾವಳಿ ಹೆಚ್ಚಿದ್ದು, 10 ದಿನಗಳಿಂದ 15 ಜನರು ಡೆಂಗಿ ಮತ್ತು ಟೈಫಾಯಿಡ್ ಜ್ವರದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ.

‘ಗ್ರಾಮದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ಎಲ್ಲೆಂದರಲ್ಲಿ ಕಸದರಾಶಿ ಬಿದ್ದಿದೆ. ಚರಂಡಿಗಳು ಕಟ್ಟಿಕೊಂಡಿವೆ. ಸಮರ್ಪಕವಾಗಿ ಕಸದ ವಿಲೇವಾರಿ ಆಗುತ್ತಿಲ್ಲ. ಗ್ರಾಮದ ಮಧ್ಯ ಭಾಗದಲ್ಲಿರುವ ನೀರಿನ ಟ್ಯಾಂಕ್‌ನಿಂದ ವ್ಯರ್ಥವಾಗಿ ಹೊರಬರುವ ನೀರು ಮತ್ತು ಗ್ರಾಮದ ಚರಂಡಿ ನೀರು ದೊಡ್ಡ ಮೋರಿಯಲ್ಲಿ ಸರಾಗವಾಗಿ ಹರಿಯದೇ ಒಂದೇ ಕಡೆ ಸಂಗ್ರಹವಾಗಿ ರಾಡಿಯಾಗಿದೆ. ಇದರಿಂದ ಸಂಜೆಯಾಗುತ್ತಲೇ ಸೊಳ್ಳೆಗಳ ಹಾವಳಿ ಹೆಚ್ಚಿದೆ. ದೊಡ್ಡಮೋರಿ ಸ್ವಚ್ಛಗೊಳಿಸುವಂತೆ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಹಲವು ಸಲ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ’ ಎಂದು ಗ್ರಾಮಸ್ಥರು ದೂರಿದ್ದಾರೆ.

> **ಜ್ವರಪೀಡಿತ ವ್ಯಕ್ತಿಗಳ ರಕ್ತದ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗಾಗಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಪರಿಸರ ಸ್ವಚ್ಛತೆಗೆ ಜಾಗೃತಿ ಮೂಡಿಸಲಾಗುವುದು.**
>
> **ಡಾ.ಬಿ.ಜಬೀವುಲ್ಲಾ**, ಆರೋಗ್ಯ ವೈದ್ಯಾಧಿಕಾರಿ, ಮುಸ್ಟಲಗುಮ್ಮಿ

‘ಗ್ರಾಮದಲ್ಲಿ 10 ದಿನಗಳಿಂದ ಪ್ರತಿ ಮನೆಯಲ್ಲೂ ಜ್ವರಕ್ಕೆ ತುತ್ತಾಗಿ ಜನರು ನರಳುತ್ತಿದ್ದಾರೆ. ನಾಯಕನಹಟ್ಟಿ, ಚಳ್ಳಕೆರೆ ಮತ್ತು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಜನರು ಅಲೆದಾಡುತ್ತಿದ್ದಾರೆ’ ಎಂದು ಗ್ರಾಮಸ್ಥರಾದ ಅಶೋಕ, ಪ್ರಕಾಶ ತಿಳಿಸಿದ್ದಾರೆ.

‘ಗ್ರಾಮಕ್ಕೆ ಸರಬರಾಜು ಆಗುತ್ತಿರುವ ನೀರಿನ ಮಾದರಿಯನ್ನು ಕೂಡಲೇ ಪರೀಕ್ಷೆಗೆ ಒಳಪಡಿಸಬೇಕು. ಸ್ವಚ್ಛತೆಗೆ ಅಧಿಕಾರಿಗಳು ಆದ್ಯತೆ ನೀಡಬೇಕು. ರಾತ್ರಿ ವೇಳೆಯಲ್ಲಿ ಗ್ರಾಮದ ತುಂಬೆಲ್ಲಾ ಧೂಮೀಕರಣ ವ್ಯವಸ್ಥೆ ಮಾಡಬೇಕು. ಗ್ರಾಮದ ಆಶಾ ಮತ್ತು ಆರೋಗ್ಯ ಕಾರ್ಯಕರ್ತೆಯರು ಪ್ರತಿ ಮನೆಗೆ ಭೇಟಿ ನೀಡಿ ಸರ್ವೆ ನಡೆಸಬೇಕು, ಆರೋಗ್ಯ ತಪಾಸಣೆಗೆ ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು’ ಎಂದು ಗ್ರಾಮ ಪಂಚಾಯಿತಿ ಸದಸ್ಯರಾದ ಬಿ. ವೀರೇಶ, ಬಸಮ್ಮ, ಗ್ರಾಮಸ್ಥರಾದ ಜಿ.ಎಂ. ತಿಪ್ಪೇಸ್ವಾಮಿ, ಕೆ. ಪ್ರಹ್ಲಾದ, ಎಚ್. ಮಲ್ಲೇಶ್ ಆಗ್ರಹಿಸಿದ್ದಾರೆ.

‘ಬಲಿದಾನ ಮರೆಯುವುದಿಲ್ಲ’

ನವದೆಹಲಿ (ಪಿಟಿಐ): ನಕ್ಸಲರು ನಡೆಸಿದ ಗುಂಡಿನ ದಾಳಿಯಿಂದಾಗಿ 22 ಯೋಧರು, ಭದ್ರತಾ ಸಿಬ್ಬಂದಿ ಮೃತಪಟ್ಟ ಘಟನೆ ಕುರಿತು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ‘ಹುತಾತ್ಮರಾದವರ ತ್ಯಾಗವನ್ನು ಎಂದಿಗೂ ಮರೆಯುವುದಿಲ್ಲ. ಗಾಯಾಳುಗಳು ಆದಷ್ಟು ಶೀಘ್ರ ಚೇತರಿಸಿಕೊಳ್ಳಲಿ’ ಎಂದಿದ್ದಾರೆ.

ಗೃಹ ಸಚಿವ ಅಮಿತ್ ಶಾ ಅವರು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಾಘೆಲ್ ಜೊತೆಗೆ ಚರ್ಚಿಸಿ ದುರಂತದ ವಿವರ ಪಡೆದರು. ಅಲ್ಲದೆ, ಸಿಆರ್‌ಪಿಎಫ್ ಡಿಜಿ ಕುಲದೀಪ್ ಸಿಂಗ್ ಅವರಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಗಮನಿಸಲು ಸೂಚಿಸಿದರು.

‘ಸರ್ಕಾರ ಎಂದಿಗೂ ಈ ಹುತಾತ್ಮರ ಬಲಿದಾನವನ್ನು ಮರೆಯುವುದಿಲ್ಲ. ಶಾಂತಿಯನ್ನು ಮರುಸ್ಥಾಪಿಸುವ ಕ್ರಮವಾಗಿ ಹೋರಾಟವನ್ನು ಮುಂದುವರಿಸಲಿದೆ’ ಎಂದೂ ಅಮಿತ್ ಶಾ ಹೇಳಿದ್ದಾರೆ.

‘ಕೇಂದ್ರ ಮತ್ತು ರಾಜ್ಯ ಸರ್ಕಾರ ಜಂಟಿಯಾಗಿ ಹೋರಾಟ ನಡೆಸಿದ್ದಲ್ಲಿ ಗೆಲುವು ಸಾಧ್ಯ ಎಂದು ಗೃಹಸಚಿವ ಅಮಿತ್ ಶಾ ಹೇಳಿದರು’ ಎಂದು ಛತ್ತೀಸಗಡ ಸರ್ಕಾರದ ವಕ್ತಾರರು ನಂತರ ತಿಳಿಸಿದರು.

ಈ ಅವಘಡದ ಹಿನ್ನೆಲೆಯಲ್ಲಿ, ಅಸ್ಸಾಂನಲ್ಲಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಅಮಿತ್ ಶಾ ಅವರು ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ, ನವದೆಹಲಿಗೆ ಮರಳಿದರು.

ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರೂ ಘಟನೆ ಕುರಿತು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಟೀಕೆ: ನಕ್ಸಲರ ದಾಳಿ ಗಮನಿಸಲು ಆಗದಷ್ಟು ಪ್ರಧಾನಿ, ಗೃಹ ಸಚಿವರು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ಟಿ.ವಿ.ಘೋಷಣೆಗಳಷ್ಟೇ ಸಾಲದು. ಪಿಡುಗು ತಡೆಗೆ ನಿರ್ದಿಷ್ಟ ಕಾರ್ಯತಂತ್ರ ಮತ್ತು ನೀಲನಕ್ಷೆ ಅಗತ್ಯವಾಗಿದೆ’ ಎಂದು ವಕ್ತಾರ ರಣದೀಪ್ ಸುರ್ಜೇವಾಲಾ ಟ್ವೀಟ್ ಮಾಡಿದ್ದಾರೆ.

27ರಲ್ಲಿ 14 ಜಿಲ್ಲೆಗಳು ನಕ್ಸಲ್ ಬಾಧಿತ: ಛತ್ತೀಸಗಡದಲ್ಲಿ 22 ಜನರ ಸಾವಿಗೆ ಕಾರಣವಾದ ಗುಂಡಿನ ದಾಳಿ ಒಂದು ವರ್ಷದ ಅವಧಿಯಲ್ಲಿ ನಡೆದಿರುವ ಭೀಕರ ದಾಳಿಯಾಗಿದೆ. ರಾಜ್ಯದಲ್ಲಿರುವ 27 ಜಿಲ್ಲೆಗಳ ಪೈಕಿ 14 ಜಿಲ್ಲೆಗಳು ನಕ್ಸಲ್ ಬಾಧಿತವಾಗಿವೆ.

ಮಾರ್ಚ್ 23ರಂದು ನಾರಾಯಣಪುರ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಇದ್ದ ವಾಹನವನ್ನು ಸುಧಾರಿತ ಸ್ಫೋಟಕ ಸಾಧನ (ಎಲ್‌ಇಡಿ) ಬಳಸಿ ನಕ್ಸಲರು ಉಡಾಯಿಸಿದ್ದು, ಐವರು ಮೃತಪಟ್ಟಿದ್ದರು.

ಬಿಜಾಪುರ ಜಿಲ್ಲೆಯಲ್ಲಿ ಮಾವೋವಾದಿಗಳ ದಾಳಿಯಿಂದ ಮೃತಟಪ್ಟ ಯೋಧನೊಬ್ಬನ ಶವವನ್ನು ಭದ್ರತಾ ಸಿಬ್ಬಂದಿ ಒಯ್ಯುತ್ತಿರುವುದು – ರಾಯಿಟರ್ಸ್ ಚಿತ್ರ

ನಕ್ಸಲರ ಅಟ್ಟಹಾಸ 22 ಯೋಧರು ಹುತಾತ್ಮ

ಒಂದನೇ ಪುಟದಿಂದ...

ಬಿಜಾಪುರ ಜಿಲ್ಲೆಯ ತರೆಮ್, ಉಸೂರ್, ಪಮೇಡ್, ಸುಕ್ಮಾ ಜಿಲ್ಲೆಯ ಮಿನ್‌ಪಾ ಹಾಗೂ ನರ್ಸಾಪುರಂ ವ್ಯಾಪ್ತಿಯಲ್ಲಿ ಶುಕ್ರವಾರ ರಾತ್ರಿ ಕಾರ್ಯಾಚರಣೆ ಆರಂಭವಾಗಿತ್ತು. 2,000 ಸಿಬ್ಬಂದಿ ಭಾಗಿಯಾಗಿದ್ದರು.

ಅಧಿಕಾರಿಯೊಬ್ಬರ ಪ್ರಕಾರ, ಗುಂಡಿನ ದಾಳಿ ಕೃತ್ಯದಲ್ಲಿ ಸುಮಾರು 400 ಮಾವೋವಾದಿಗಳು ಭಾಗಿಯಾಗಿದ್ದರು. ಪಿಎಲ್‌ಜಿಎ ಸಂಘಟನೆ 1ನೇ ಬೆಟಾಲಿಯನ್‌ನ ಹಿದ್ಮಾ ಮತ್ತು ಆತನ ಸಹಚರರಾದ ಸುಜಾತಾ ಈ ದಾಳಿಯ ಹಿಂದಿದ್ದಾರೆ ಎಂದು ಶಂಕಿಸಲಾಗಿದೆ. ಕೋಬ್ರಾ ಯೋಧರು ತೀವ್ರ ಪ್ರತಿರೋಧ ತೋರಿದ್ದರಿಂದ ನಕ್ಸಲರು ಇನ್ನಷ್ಟು ದಾಳಿ ಮುಂದುವರಿಸಲಾಗಲಿಲ್ಲ.

ಮಾವೋವಾದಿಗಳು ಮೂರು ದಿಕ್ಕಿನಿಂದ ಭದ್ರತಾ ಪಡೆಯನ್ನು ಸುತ್ತುವರಿದಿದ್ದು, ಲೈಟ್ ಮಷಿನ್ ಗನ್ ಬಳಸಿ ಗುಂಡಿನ ಸುರಿಮಳೆಗೈದಿದ್ದಾರೆ ಹಾಗೂ ಸುಧಾರಿತ ಸ್ಫೋಟಕ ಸಾಧನ (ಎಲ್‌ಇಡಿ)ವನ್ನೂ ದಾಳಿಗೆ ಬಳಸಿದ್ದಾರೆ.

ನಕ್ಸಲೀಯರ ಕಡೆಯೂ 10 ರಿಂದ 12 ಜನರು ಸತ್ತಿರುವ ಶಂಕೆ ಇದ್ದು, ಶವಗಳನ್ನು ಅವರು ಟ್ರ್ಯಾಕ್ಟರ್ ಟ್ರಾಲಿಯಲ್ಲಿ ಒಯ್ದಿದ್ದಾರೆ.

ಗಾಯಗೊಂಡಿರುವ ಯೋಧರು, ಭದ್ರತಾ ಸಿಬ್ಬಂದಿಗಳಲ್ಲಿ 7 ಜನರನ್ನು ರಾಯಪುರದಲ್ಲಿನ ಆಸ್ಪತ್ರೆ ಹಾಗೂ 23 ಜನರನ್ನು ಬಿಜಾಪುರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ನಕ್ಸಲರ ವಿರುದ್ಧ ಕಾರ್ಯಾಚರಣೆಗೆ 790 ಸಿಬ್ಬಂದಿಯ ಬಲ ಬಳಸಲು ಅನುಮೋದನೆ ದೊರೆತಿತ್ತು. ಸುದೀರ್ಘ ಅವಧಿಯ ಕಾರ್ಯಾಚರಣೆ ಆದ್ದರಿಂದ ಉಳಿದ ಸಿಬ್ಬಂದಿಯನ್ನು ಬೆಂಬಲವಾಗಿ ಬಳಸಲಾಗಿತ್ತು. ಗುಂಡಿನ ಚಕಮಕಿ ಆರಂಭವಾದ ಹಿಂದೆಯೇ ರಕ್ಷಣೆ ಕಾರ್ಯಕ್ಕೆ ನೆರವಾಗಲು ಹೆಲಿಕಾಪ್ಟರ್ ಸೇವೆ ಪಡೆಯಲಾಯಿತು. ಆದರೆ, ಸಕಾಲದಲ್ಲಿ ಹೆಲಿಕಾಪ್ಟರ್ ಸ್ಥಳಕ್ಕೆ ತಲುಪಲು ಆಗಲಿಲ್ಲ. ಸಂಜೆ 5ಕ್ಕೆ ಸ್ಥಳಕ್ಕೆ ತಲುಪಿದ್ದು, ಗಾಯಾಳುಗಳ ಕರೆತರಲು ನೆರವಾಯಿತು ಎಂದು ಅಧಿಕಾರಿ ಮೂಲಗಳು ತಿಳಿಸಿವೆ.

ಗೃಹ ಸಚಿವರ ನೇತೃತ್ವದಲ್ಲಿ ಸಭೆ

ನವದೆಹಲಿ: ಛತ್ತೀಸಗಡದಲ್ಲಿ ನಡೆದ ನಕ್ಸಲರ ದಾಳಿ ಘಟನೆ ಹಿನ್ನೆಲೆಯಲ್ಲಿ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆದಿದ್ದು, ಪರಿಸ್ಥಿತಿಯನ್ನು ಅವಲೋಕಿಸಿತು.

ಗೃಹ ಸಚಿವಾಲಯದ ಕಾರ್ಯದರ್ಶಿ ಅಜಯ್ ಭಲ್ಲಾ, ಗುಪ್ತದಳ ವಿಭಾಗದ ನಿರ್ದೇಶಕ ಅರವಿಂದ ಕುಮಾರ್ ಸೇರಿದಂತೆ ಸಚಿವಾಲಯದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಎಸ್‌ಐಟಿಯಿಂದ ಸಾಕ್ಷ್ಯ ನಾಶ: ಆರೋಪ

ಒಂದನೇ ಪುಟದಿಂದ...

'ಆದರೆ, ಪ್ರಕರಣದ ಆರೋಪಿ ರಮೇಶ ಜಾರಕಿಹೊಳಿ ಅವರನ್ನು ಕೇವಲ ಮೂರು ಗಂಟೆಗಳ ವಿಚಾರಣೆ ನಡೆಸಿ, ಮುಕ್ತವಾಗಿ ಓಡಾಡಲು ಎಸ್‌ಐಟಿ ಅವಕಾಶ ಕಲ್ಪಿಸಿದೆ. ಇದೆಲ್ಲವನ್ನೂ ಗಮನಿಸಿದರೆ, ನಾನು ಪ್ರಕರಣದ ಸಂತ್ರಸ್ತೆಯೋ? ಅಥವಾ ಆರೋಪಿಯೋ? ಎಂಬ ಅನುಮಾನ ವ್ಯಕ್ತವಾಗಿದೆ’ ಎಂದು ಹೇಳಿದ್ದಾರೆ.

‘ರಮೇಶ ಜಾರಕಿಹೊಳಿ ಅವರು ನನ್ನ ಚಾರಿತ್ರ್ಯವಧೆ ಮಾಡಲು ಷಡ್ಯಂತ್ರ ನಡೆಸಿದ್ದು , ಇದಕ್ಕಾಗಿ ಎಸ್‌ಐಟಿ ಮೇಲೆ ಸರ್ಕಾರದಿಂದ ಒತ್ತಡ ತರುತ್ತಿದ್ದಾರೆ. ನಾನು ನೀಡಿರುವ ದೂರಿನ ಅನ್ವಯ ಈವರೆಗೆ ಆರೋಪಿಯನ್ನು ಗಂಭೀರವಾಗಿ ವಿಚಾರಣೆ ನಡೆಸಿರುವ ಬಗ್ಗೆ ವಿಶ್ವಾಸವಿಲ್ಲ’ ಎಂದಿದ್ದಾರೆ.

‘ಗೃಹ ಇಲಾಖೆಯು ನನ್ನ ಸಹಮತ ಪಡೆಯದೆ, ಪ್ರಕರಣಕ್ಕೆ ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಿಸಿರುವುದಕ್ಕೆ ನನ್ನ ಆಕ್ಷೇಪವಿದೆ. ಇದರ ನಡುವೆಯೇ ‘ರಮೇಶ ಅವರು ಆರೋಪಮುಕ್ತರಾಗಿ ಹೊರಬರುತ್ತಾರೆ’ ಎಂದಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಹೇಳಿಕೆಯಿಂದ ಆತಂಕಗೊಂಡಿದ್ದೇನೆ. ದಯವಿಟ್ಟು ನನ್ನ ದೂರನ್ನು ಒಬ್ಬ ಸಂತ್ರಸ್ತ, ಅಸಹಾಯಕ ಯುವತಿಯ ದೃಷ್ಟಿಯಿಂದ ಪರಿಗಣಿಸಬೇಕು’ ಎಂದೂ ಒತ್ತಾಯಿಸಿದ್ದಾರೆ.

ಸಂತ್ರಸ್ತೆ ಅನುಪಸ್ಥಿತಿಯಲ್ಲಿ ದಾಳಿ: ವಕೀಲ ಜಗದೀಶ್ ಆಕ್ಷೇಪ

‘ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ದೂರಿನಲ್ಲಿ ಸಂತ್ರಸ್ತೆಯ ಹೆಸರು ಉಲ್ಲೇಖವಾಗಿಲ್ಲ. ತನಿಖೆ ಕೈಗೆತ್ತಿಕೊಂಡ ಎಸ್‌ಐಟಿ ಅಧಿಕಾರಿಗಳು ಸಂತ್ರಸ್ತೆ ವಾಸವಿದ್ದ ಪಿ.ಜಿ.ಮೇಲೆ ಆಕೆಯ ಅನುಪಸ್ಥಿತಿಯಲ್ಲಿ ದಾಳಿ ನಡೆಸಿದ್ದಾರೆ’ ಎಂದು ವಕೀಲ ಜಗದೀಶ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಇದು ದುರುದ್ದೇಶದಿಂದ ನಡೆದಿರುವ ದಾಳಿ. ಆರೋಪಿಗಳನ್ನು ರಕ್ಷಿಸುವ ಉದ್ದೇಶದಿಂದ ಸಂತ್ರಸ್ತೆಯ ನಿವಾಸದ ಮೇಲೆ ದಾಳಿ ನಡೆಸಿ, ಅಲ್ಲಿದ್ದ ಸಾಕ್ಷ್ಯಗಳನ್ನು ನಾಶ ಮಾಡಿದ್ದಾರೆ. ಇದಕ್ಕೆ ಎಸ್‌ಐಟಿ ಉತ್ತರಿಸಬೇಕು’ ಎಂದು ಆಗ್ರಹಿಸಿದರು.

‘ಈ ಸಂಬಂಧ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಇ-ಮೇಲ್ ಮೂಲಕ ದೂರು ಸಲ್ಲಿಸಲಾಗಿದೆ’ ಎಂದು ಹೇಳಿದರು.

ಇಂದು ರಮೇಶ ಜಾರಕಿಹೊಳಿ ವಿಚಾರಣೆ

ಸಿ.ಡಿ ಪ್ರಕರಣದಲ್ಲಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಏ.5ರಂದು ಬೆಳಿಗ್ಗೆ 10.30ಕ್ಕೆ ವಿಚಾರಣೆಗೆ ಬರುವಂತೆ ಎಸ್‌ಐಟಿ ಅಧಿಕಾರಿಗಳು ನೋಟಿಸ್ ನೀಡಿದ್ದು, ಆಡುಗೋಡಿಯಲ್ಲಿರುವ ಟೆಕ್ನಿಕಲ್ ಸೆಲ್‌ನಲ್ಲಿ ವಿಚಾರಣೆ ನಡೆಯಲಿದೆ.

ರಮೇಶ ಅವರನ್ನು ಎಸ್‌ಐಟಿ ಅಧಿಕಾರಿಗಳು ಈ ಹಿಂದೆಯೂ ವಿಚಾರಣೆ ನಡೆಸಿದ್ದರು. ಮತ್ತೆ ವಿಚಾರಣೆಗೆ ಬರುವಂತೆ ಅವರಿಗೆ ನೋಟಿಸ್ ನೀಡಿದ್ದರೂ ಅವರು ಎಸ್‌ಐಟಿ ಎದುರು ಹಾಜರಾಗಿರಲಿಲ್ಲ. ಹಾಗಾಗಿ, ಏ.5ರಂದು ವಿಚಾರಣೆಗೆ ಕಡ್ಡಾಯವಾಗಿ ಹಾಜರಾಗುವಂತೆ ಮತ್ತೆ ನೋಟಿಸ್ ಜಾರಿ ಮಾಡಿತ್ತು.

ನಿಧನ ವಾರ್ತೆ

ಕವಿ ಖಲಿಲ್ ಧಂತೆಜ್ವಿ



ವಡೋದರಾ: ಗುಜರಾತ್‌ನ ಖ್ಯಾತ ಕವಿ ಮತ್ತು ಘಜಲ್ ಗಾಯಕ ಖಲಿಲ್ ಧಂತೆಜ್ವಿ (82) ಭಾನುವಾರ ನಿಧನರಾದರು.

ಇವರ ಮೂಲ ಹೆಸರು ಖಲಿಲ್ ಇಸ್ಮಾಯಿಲ್. ವಡೋದರಾ ಬಳಿಯ ತಮ್ಮ ಗ್ರಾಮ ‘ಧಂತೆಜ್ವಿ’ಯ ಹೆಸರನ್ನು ತಮ್ಮ ಮೂಲ ಹೆಸರಿನ ಜತೆ ಸೇರಿಸಿಕೊಂಡಿದ್ದರು. ಹಲವು ಕವಿತೆಗಳು, ಘಜಲ್‌ಗಳನ್ನು ಇವರು ಬರೆದಿದ್ದರು. ಪತ್ರಕರ್ತರಾಗಿಯೂ ಕಾರ್ಯನಿರ್ವಹಿಸಿದ್ದರು.

‘ಕವಿ ಖಲಿಲ್ ಅವರ ನಿಧನದಿಂದ ಅಪಾರ ದುಃಖವಾಗಿದೆ. ಅವರ ಕೊಡುಗೆಯನ್ನು ಸ್ಮರಿಸಲಾಗುವುದು’ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಗೀತಾ ಪ್ರೆಸ್ ಅಧ್ಯಕ್ಷ ರಾಧೇಶ್ಯಾಮ್ ಖೇಮ್ಕಾ

ವಾರಾಣಸಿ: ಗೀತಾ ಪ್ರೆಸ್ ಅಧ್ಯಕ್ಷ ರಾಧೇಶ್ಯಾಮ್ ಖೇಮ್ಕಾ (87) ಅವರು ನಿಧನರಾದರು ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಶನಿವಾರ ಮಧ್ಯಾಹ್ನ ಸಾವನ್ನಪ್ಪಿದರು. ಹರಿಶ್ಚಂದ್ರ ಘಾಟ್‌ನಲ್ಲಿ ಅಂತಿಮ ವಿಧಿವಿಧಾನಗಳನ್ನು ಪೂರೈಸಲಾಯಿತು ಎಂದು ಕುಟುಂಬದ ಸದಸ್ಯರು ಮಾಹಿತಿ ನೀಡಿದ್ದಾರೆ.

ಆಂಬುಲೆನ್ಸ್‌ನಲ್ಲಿ ಅನ್ಸಾರಿ: ತನಿಖೆಗೆ ತಂಡ

ಬಾರಾಬಂಕಿ (ಉತ್ತರ ಪ್ರದೇಶ), (ಪಿಟಿಐ): ಪಾತಕಿ ಹಾಗೂ ರಾಜಕಾರಣಿ ಮುಖ್ತಾರ್ ಅನ್ಸಾರಿಯನ್ನು ಪಂಜಾಬ್‌ನ ರೂಪನಗರದ ಜೈಲಿನಿಂದ ಮೊಹಾಲಿ ನ್ಯಾಯಾಲಯಕ್ಕೆ ಇತ್ತೀಚೆಗೆ ಆಂಬುಲೆನ್ಸ್‌ನಲ್ಲಿ ಕರೆದೊಯ್ದ ಪ್ರಕರಣ ಬಗ್ಗೆ ತನಿಖೆ ನಡೆಸಲು ವಿಶೇಷ ತನಿಖಾ ತಂಡವನ್ನು ಉತ್ತರ ಪ್ರದೇಶ ಪೊಲೀಸ್ ರಚಿಸಿದೆ.

ಉತ್ತರ ಪ್ರದೇಶದ ಬಾರಾಬಂಕಿ ಸಂಖ್ಯೆಯ ನೋಂದಣಿ ಹೊಂದಿರುವ ಆಂಬುಲೆನ್ಸ್‌ನ ದಾಖಲೆಗಳು ನಕಲಿ ಎನ್ನುವುದು ಪತ್ತೆಯಾದ ಬಳಿಕ ಏಪ್ರಿಲ್ 2ರಂದು ಬಾರಾಬಂಕಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಡಾ. ಅಲ್ಕಾ ರಾಯ್ ಎನ್ನುವವರ ಹೆಸರಿನಲ್ಲಿ ಈ ಆಂಬುಲೆನ್ಸ್ ನೋಂದಣಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ತಾರ್ ಅನ್ಸಾರಿ

ಉತ್ತರ ಪ್ರದೇಶದ ಮೌ ಕ್ಷೇತ್ರದ ಬಿಎಸ್‌ಪಿ ಶಾಸಕ ಆಗಿರುವ ಅನ್ಸಾರಿಯನ್ನು ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿ 2019ರ ಜನವರಿಯಿಂದ ರೂಪನಗರದ ಜೈಲಿನಲ್ಲಿಡಲಾಗಿದೆ. ಮಾರ್ಚ್ 31ರಂದು ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊಹಾಲಿ ನ್ಯಾಯಾಲಯದಲ್ಲಿ ಅನ್ಸಾರಿಯನ್ನು ಹಾಜರುಪಡಿಸಲಾಗಿತ್ತು.

ಅನ್ಸಾರಿಯನ್ನು ಬಿಗಿಭದ್ರತೆಯೊಂದಿಗೆ ನ್ಯಾಯಾಲಯಕ್ಕೆ ಕರೆದೊಯ್ಯಲಾಗಿತ್ತು. ವಿಚಾರಣೆ ಬಳಿಕ ಆಂಬುಲೆನ್ಸ್‌ನಲ್ಲಿ ವಾಪಸ್ ಜೈಲಿಗೆ ಕಳುಹಿಸಲಾಗಿತ್ತು.

ಆದರೆ, ಪ್ರಾಥಮಿಕ ತನಿಖೆ ನಡೆಸಿದಾಗ ಆಂಬುಲೆನ್ಸ್‌ನ ನೋಂದಣಿಗಾಗಿ ನೀಡಿದ್ದ ವಿಳಾಸ ಮತ್ತು ಹೆಸರು ಸುಳ್ಳು ಎನ್ನುವುದು ಗೊತ್ತಾಯಿತು. ಡಾ. ಅಲ್ಕಾ ರಾಯ್ ವಿರುದ್ಧ ಎಫ್‌ಐಆರ್ ಸಹ ದಾಖಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ವಿವಾದ ಬಗ್ಗೆ ಸ್ಪಷ್ಟನೆ ನೀಡಿರುವ ಪಂಜಾಬ್ ಪೊಲೀಸ್ ಅಧಿಕಾರಿಗಳು, ವೈದ್ಯಕೀಯ ಪರಿಸ್ಥಿತಿ ಆಧರಿಸಿ ಖಾಸಗಿ ಆಂಬುಲೆನ್ಸ್ ಬಳಸಲು ಅವಕಾಶವಿದೆ. ಆದರೆ, ಸಾರಿಗೆ ವೆಚ್ಚವನ್ನು ಕೈದಿಯೇ ಭರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಅಯೋಧ್ಯೆ: ಕಲ್ಲಿನಿಂದ ಹೊಡೆದು ಸಾಧು ಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆ ಪಟ್ಟಣದ ಹನುಮಾನ್‌ಗಿರಿ ದೇವಾಲಯದ ಸಾಧುವೊಬ್ಬರನ್ನು ಕಲ್ಲುಗಳಿಂದ ಹೊಡೆದು ಹತ್ಯೆ ಮಾಡಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

‘ಸಾವಿಗೀಡಾಗಿರುವ ಸಾಧುವನ್ನು ಮಹಾಂತ ಕನ್ಹಯ್ಯಾ ದಾಸ್ ಎಂದು ಗುರುತಿಸಲಾಗಿದೆ. ಇವರು ಅಯೋಧ್ಯೆಯ ಪ್ರಸಿದ್ಧ ಹನುಮಾನ್‌ಗಿರಿ ದೇವಾಲಯದಲ್ಲಿದ್ದರು. ಶನಿವಾರ ರಾತ್ರಿ ಅವರನ್ನು ಕಲ್ಲುಗಳಿಂದ ಹೊಡೆದು ಹತ್ಯೆ ಮಾಡಲಾಗಿದೆ. ಭಾನುವಾರ ಮುಂಜಾನೆ ದೇವಾಲಯದಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಸಾಧು ಮಹಾಂತ ಅವರ ದೇಹವು ಪತ್ತೆಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೆ ಸಂಬಂಧಿಸಿದಂತೆ ಕನ್ಹಯ್ಯಾ ದಾಸ್ ಅವರ ‘ಗುರು ಭಾಯ್’ ಆಗಿರುವ ಗೋಲು ದಾಸ್ ಎಂಬುವರನ್ನು ಬಂಧಿಸಲಾಗಿದೆ.

ಗೋಲು ದಾಸ್ ಮತ್ತು ಕನ್ಹಯ್ಯಾ ದಾಸ್ ಅವರ ನಡುವೆ ಅಯೋಧ್ಯೆಯಲ್ಲಿರುವ ಸ್ವಲ್ಪ ಜಮೀನು ಮತ್ತು ಮನೆಯೊಂದಕ್ಕೆ ಸಂಬಂಧಿಸಿದಂತೆ ವೈಷಮ್ಯವಿತ್ತು ಎಂದು ಮೂಲಗಳು ತಿಳಿಸಿವೆ.

ಕನ್ಹಯ್ಯಾ ದಾಸ್ ಅವರ ಹತ್ಯೆಯ ಸುದ್ದಿ ತಿಳಿಯುತ್ತಿದ್ದಂತೆಯೇ ನಾಗಾ ಸಾಧುಗಳ ದೊಡ್ಡ ಗುಂಪೊಂದು ಆಶ್ರಮಕ್ಕೆ ಭೇಟಿ ನೀಡಿತು. ‘ನಾಗಾ ಸಾಧು’ ಆಗಿದ್ದ ಕನ್ಹಯ್ಯಾ ದಾಸ್ ಅವರ ಹತ್ಯೆಯ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ನಾಗಾ ಸಾಧುಗಳ ಗುಂಪು ಒತ್ತಾಯಿಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಆತನಿಂದ ಹತ್ಯೆಯ ಹಿಂದಿನ ಉದ್ದೇಶವನ್ನು ತಿಳಿಯಲು ಪ್ರಯತ್ನಿಸಲಾಗುತ್ತಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ರಾಮ ವನ ಗಮನ ಮಾರ್ಗ’ ನಿರ್ಮಿಸಲು ಯೋಜನೆ

ನವದೆಹಲಿ: ವನವಾಸದ ಸಂದರ್ಭದಲ್ಲಿ ಸೀತೆ ಮತ್ತು ಲಕ್ಷ್ಮಣರ ಜತೆ ರಾಮ ಸಂಚರಿಸಿದ್ದ ಎನ್ನಲಾದ ಮಾರ್ಗಗಳನ್ನು ಒಟ್ಟುಗೂಡಿಸಿ ದೇಶದಲ್ಲಿ ‘ರಾಮ ವನ ಗಮನ ಮಾರ್ಗ’ ನಿರ್ಮಿಸುವ ಕುರಿತು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಯೋಜನೆ ರೂಪಿಸುತ್ತಿದೆ.

ಮೊದಲ ಹಂತದಲ್ಲಿ ಉತ್ತರ ಪ್ರದೇಶದಲ್ಲಿ 210 ಕಿಲೋ ಮೀಟರ್ ‘ರಾಮ ವನ ಗಮನ ಮಾರ್ಗ’ ಹೆದ್ದಾರಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಹೆದ್ದಾರಿಯು ಅಯೋಧ್ಯೆಯಿಂದ ಮಧ್ಯಪ್ರದೇಶದ ಧಾರ್ಮಿಕ ಸ್ಥಳ ಚಿತ್ರಕೂಟವನ್ನು ಸಂಪರ್ಕಿಸಲಿದೆ.

‘ಮೊದಲ ಹಂತದ ಯೋಜನೆ ಉತ್ತರ ಪ್ರದೇಶದಲ್ಲಿ ಅನುಷ್ಠಾನಗೊಳ್ಳಲಿದೆ. ₹137.45 ಕೋಟಿ ವೆಚ್ಚದಲ್ಲಿ ಈ ಹೆದ್ದಾರಿ ನಿರ್ಮಾಣವಾಗಲಿದೆ. ಭಗವಾನ ರಾಮ ಸಂಚರಿಸಿದ ಆಯ್ದ ಎಂಟು ಸ್ಥಳಗಳನ್ನು ಸಂಪರ್ಕಿಸಲು ಯೋಜನೆ ರೂಪಿಸಲಾಗಿದೆ. ಈ ಸ್ಥಳಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು’ ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರಾಖಂಡ: ಬೆಂಕಿ, ಎನ್‌ಡಿಆರ್‌ಎಫ್ ರವಾನೆಗೆ ಆದೇಶ

ನವದೆಹಲಿ: ‘ಉತ್ತರಾಖಂಡದ ಅರಣ್ಯ ಪ್ರದೇಶದಲ್ಲಿನ ಬೆಂಕಿಯನ್ನು ನಂದಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ತಂಡಗಳು ಹಾಗೂ ಹೆಲಿಕಾಪ್ಟರ್‌ಗಳನ್ನು ನಿಯೋಜಿಸಲು ಕೇಂದ್ರ ಸರ್ಕಾರವು ಆದೇಶಿಸಿದೆ’ ಎಂದು ಭಾನುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

‘ಉತ್ತರಾಖಂಡದ ಮುಖ್ಯಮಂತ್ರಿ ಥೀರತ್ ಸಿಂಗ್ ರಾವತ್ ಅವರೊಂದಿಗೆ ಮಾತನಾಡಿ ಮಾಹಿತಿ ಪಡೆದೆ. ಬೆಂಕಿ ನಂದಿಸಲು ಕೇಂದ್ರವು ತಕ್ಷಣವೇ ಎನ್‌ಡಿಆರ್‌ಎಫ್ ತಂಡ ಹಾಗೂ ಹೆಲಿಕಾಪ್ಟರ್‌ಗಳನ್ನು ಕಳುಹಿಸಲು ಆದೇಶ ಹೊರಡಿಸಿದೆ’ ಎಂದು ಅಮಿತ್ ಶಾ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಆನ್‌ಲೈನ್/ ಆಫ್‌ಲೈನ್ ಪರೀಕ್ಷೆ

ಪುಟ್ಟ ಮಕ್ಕಳಿಗೂ ಇರಲಿ ಸಿದ್ಧತೆ

ಕೋಕಿಲ ಎಂ.ಎಸ್.

ಕೋವಿಡ್‌ ಕಾರಣದಿಂದಾಗಿ ಕಳೆದ ಒಂದು ವರ್ಷದಿಂದ ಆನ್‌ಲೈನ್‌ನಲ್ಲಿ ಪಾಠ ಕೇಳಿದ ಮಕ್ಕಳು ಕಿರು ಪರೀಕ್ಷೆಗಳನ್ನೂ ಕೂಡ ಅದರಲ್ಲೇ ಬರೆದಿದ್ದಾರೆ. ಆದರೆ ಬಹುತೇಕ ಮಕ್ಕಳು ಪೋಷಕರು ನೆರವಿನಿಂದ ಪರೀಕ್ಷೆ ಬರೆದಿರುವುದರಿಂದ ವಾರ್ಷಿಕ ಪರೀಕ್ಷೆ ನಡೆದರೆ ಹೇಗೆ ಸಿದ್ಧತೆ ಮಾಡಬೇಕು?

ಕೋವಿಡ್ ಕಾರಣದಿಂದ ಕಳೆದ ಒಂದು ವರ್ಷದಿಂದ ಮನೆಯೇ ಮಕ್ಕಳಿಗೆ ಪಾಠಶಾಲೆ. ಆನ್‌ಲೈನ್ ತರಗತಿಗಳಿಂದ ಹಿಡಿದು ಕಿರುಪರೀಕ್ಷೆಗಳವರೆಗೂ ಎಲ್ಲವೂ ಮನೆಯಿಂದಲೇ ನಡೆದಿವೆ. ಶಿಕ್ಷಕರ ರೀತಿಯಲ್ಲೇ ಮಕ್ಕಳೊಟ್ಟಿಗೆ ಕೂತು ಪೋಷಕರು ಕೂಡ ಕಲಿಕೆಗೆ ಸಹಾಯ ಮಾಡಿದ್ದಾರೆ. ಅದರಲ್ಲೂ ಪ್ರಾಥಮಿಕ ಹಂತದಲ್ಲಿರುವ ಮಕ್ಕಳು ತಮ್ಮೆಲ್ಲ ಕಿರುಪರೀಕ್ಷೆಗಳನ್ನು ಪೋಷಕರ ಸಹಾಯದಿಂದ ಮನೆಯಿಂದಲೇ ಬರೆದಿದ್ದಾರೆ. ಇದು ಒಂದರ್ಥದಲ್ಲಿ ಒಳ್ಳೆಯದೇ ಆಗಿದ್ದರೂ ಮಕ್ಕಳ ಸ್ವಂತಿಕೆ ವಿಚಾರದಲ್ಲಿ ಸ್ವಲ್ಪ ಯೋಚಿಸುವಂತಾಗಿದೆ. ಅತಿಯಾದ ಅವಲಂಬನೆಯೂ ಬೆಳವಣಿಗೆಗೆ ಮಾರಕವಾಗಬಹುದು. ಒಂದನೇ ತರಗತಿಯಿಂದಲೇ ಶಾಲೆಯಲ್ಲಿ ಕೂತು (ಆಫ್‌ಲೈನ್) ಪರೀಕ್ಷೆ ಬರೆಯುವ ಸಂದರ್ಭ ಬಂದರೆ ಅಥವಾ ಮೌಖಿಕ ಪರೀಕ್ಷೆ ನಡೆದರೆ ನಿಜವಾದ ಸಮಸ್ಯೆ ಶುರುವಾಗುವುದು ಆಗಲೆ. ಸಮಯ ಮೀರಿಲ್ಲ, ಸಮಸ್ಯೆಯನ್ನು ತಿಳಿಗೊಳಿಸಲು ಈಗಿನಿಂದಲೇ ಮಕ್ಕಳನ್ನು ತಯಾರು ಮಾಡಿ.

ಪರೀಕ್ಷೆಯ ಬಗ್ಗೆ ತಿಳಿಹೇಳಿ

ಶಾಲೆಯ ಮೆಟ್ಟಿಲನ್ನೆ ಏರಿರದ ಅಥವಾ ಹೋಗಿದ್ದರೂ ಪರೀಕ್ಷೆಯೆಂಬ ಪದದ ಅರಿವೇ ಇರದ ಒಂದು, ಎರಡನೇ ತರಗತಿ ಮಕ್ಕಳಿಗೆ ಪರೀಕ್ಷೆಯ ಬಗ್ಗೆ ಭಯ ಹುಟ್ಟಿಸುವುದು ಬೇಡ. ಬದಲಿಗೆ ಪರೀಕ್ಷೆಯೆಂದರೆ ಏನು ಎಂದು ವಿವರಿಸಿ ಹೇಳಿ.

ವರ್ಕ್‌ಶೀಟ್‌ಗಳನ್ನು ಬಳಸಿ

ಪ್ರಶ್ನೆಪತ್ರಿಕೆಗಳ ಮಾದರಿಯಲ್ಲಿಯೇ ವರ್ಕ್‌ಶೀಟ್‌ಗಳನ್ನು ನೀವೆ ತಯಾರಿಸಿ ಮಕ್ಕಳಿಗೆ ಬರೆಯಲು ನೀಡಿ. ಬಹಳಷ್ಟು ವೆಬ್‌ಸೈಟ್‌ಗಳಲ್ಲಿಯೂ ತರಗತಿಗಳಿಗೆ ಅನುಸಾರವಾಗಿ ವರ್ಕ್‌ಶೀಟ್‌ಗಳು ಸಿಗುತ್ತವೆ. ಒಂದೆರಡು ಪತ್ರಿಕೆಗಳನ್ನು ಅವರ ಮುಂದೆ ನೀವೆ ಉತ್ತರಿಸಿ ತೋರಿಸಿ. ಜೊತೆ ಕೂತು ಕೆಲವೊಂದನ್ನು ಮಾಡಿಸಿ. ನಂತರ ಅವರಿಗೆ ಮಾಡಲು ಬಿಡಿ. ಇದರಿಂದ ಮಕ್ಕಳಿಗೆ ಪ್ರಶ್ನೆಗಳ ಮಾದರಿ ಮತ್ತು ಯಾವ ಪ್ರಶ್ನೆಗೆ ಉತ್ತರಗಳನ್ನು ಹೇಗೆ ಬರೆಯಬೇಕೆಂಬುದು ಗೊತ್ತಾಗುತ್ತದೆ.

ಮಾದರಿ ಪರೀಕ್ಷೆಗಳನ್ನು ಮನೆಯಲ್ಲಿ ಮಾಡಿ (ಪೂರ್ವ ಸಿದ್ಧತಾ ಪರೀಕ್ಷೆ)

ಸತತವಾಗಿ ಒಂದು ಕಡೆ ಒಂದೂವರೆ ಗಂಟೆಯಾದರೂ ಕೂತು ಬರೆಯುವುದನ್ನು ಅಭ್ಯಾಸ ಮಾಡಿಸಿ. ಹೇಳಿದ ತಕ್ಷಣ ಕೂರುವುದು ಕಷ್ಟ, ಕೂತು ಬರೆದರೆ ಇಷ್ಟವಾದ ತಿಂಡಿಗಳನ್ನು ಮಾಡಿಕೊಡುವುದಾಗಿಯೋ ಅಥವಾ ಇಷ್ಟದ ವಸ್ತುಗಳನ್ನು ಕೊಡಿಸುವುದಾಗಿಯೋ ಹೇಳಿ ಅಥವಾ ನೀವೇ ಅವರ ಜೊತೆ ಒಂದು ಗಂಟೆ ಆಟವಾಡುವುದಾಗಿ ಹೇಳಿ. ಎಲ್ಲ ಆಟಗಳಿಗಿಂತ ಅಮ್ಮ- ಅಪ್ಪನ ಜೊತೆಗೆ ಆಡುವುದೆಂದರೆ ಮಕ್ಕಳಿಗೆ ಇಷ್ಟ.

ಒತ್ತಡ ಹಾಕಬೇಡಿ

ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕೆಂದು ತಾಕೀತು ಹಾಕಬೇಡಿ. ಅರ್ಥವಾಗಿದ್ದನ್ನು ಬರೆದು ಬರುವಂತೆ ತಿಳಿಸಿ. ಒತ್ತಡ ಹಾಕಿದಷ್ಟೂ ಮಗುವಿನ ಮನಸ್ಸಿನಲ್ಲಿ ಭಯ ಆವರಿಸುತ್ತದೆ.

ಪ್ರಶ್ನೆಗಳನ್ನು ಬರೆಯಲು ಹೇಳಿ

ಕಲಿಕೆಯ ಮೊದಲ ಹಂತದಲ್ಲಿರುವ ಮಕ್ಕಳಿಗೆ ಉತ್ತರಗಳಷ್ಟೆ ಪ್ರಶ್ನೆಗಳೂ ಪ್ರಮುಖ ಪಾತ್ರ ವಹಿಸುತ್ತವೆ. ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಮಾತ್ರ ಹೇಳಿಸುವುದು ಸಾಮಾನ್ಯ. ಇದಕ್ಕೆ ಕಾರಣ ಪರೀಕ್ಷೆಯಲ್ಲಿ ಮಗು ಉತ್ತರವಷ್ಟೇ ಬರೆಯಬೇಕಲ್ಲವೆ ಎಂಬುದು. ಆದರೆ ಪ್ರಶ್ನೆ ಸರಿಯಾಗಿ ಅರ್ಥವಾದರೆ ಮಾತ್ರ ಮಗು ಉತ್ತರ ಹೇಳಲು ಅಥವಾ ಬರೆಯಲು ಸಾಧ್ಯ. ಹಾಗಾಗಿ ಒಂದೊಂದು ಪಾಠದ ಪ್ರಶ್ನೆಗಳನ್ನು ಓದಿ ಮಗುವಿಗೆ ಪ್ರಶ್ನೆ ಏನೆಂಬುದು ಅರ್ಥವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

ಸಹಾಯಕ್ಕೆ ಶಿಕ್ಷಕರೂ ಇರುತ್ತಾರೆ

‘ನನ್ನ ಮಗು ಒಂದನೇ ತರಗತಿ. ಓದೋದಕ್ಕೆ ಈಗ ಕಲಿತಿದ್ದಾನೆ. ಮನೆಯಲ್ಲಾದರೆ ಪ್ರಶ್ನೆಗಳನ್ನು ಓದಿ ಅರ್ಥ ಮಾಡಿಸಲು ನಾವಿದ್ದೆವು. ಆದರೆ ಶಾಲೆಯಲ್ಲಿ ಏನು ಮಾಡ್ತಾನೆ?’ ಎನ್ನುವ ಪ್ರಶ್ನೆ ಬಹುಪಾಲು ಪೋಷಕರದ್ದು. ಅದಕ್ಕಾಗಿ ಯೋಚಿಸುವ ಅಗತ್ಯವಿಲ್ಲ. ನಿಮ್ಮಂತೆಯೇ ಮಗುವಿನ ಸಹಾಯಕ್ಕಾಗಿ ಶಾಲೆಯಲ್ಲಿ ಶಿಕ್ಷಕರಿರುತ್ತಾರೆ.

ಈ ಶೈಕ್ಷಣಿಕ ಸಾಲಿನ ಕಲಿಕಾ ಮಟ್ಟವನ್ನು ಹಿಂದಿನ ವರ್ಷಗಳೊಂದಿಗೆ ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಲ್ಲ. ಪೋಷಕರೊಟ್ಟಿಗೆ ಬೆರೆತು ಹೆಚ್ಚು ಕಲಿಯುತ್ತಿರುವ ಮಕ್ಕಳ ಉದಾಹರಣೆಗಳೂ ಇಲ್ಲವೆಂದಲ್ಲ. ಅದು ಮಗುವಿನಿಂದ ಮಗುವಿಗೆ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಹಾಗಾಗಿ ಮಗುವಿನ ಕಲಿಕಾ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷೆಗೆ ತಯಾರು ಮಾಡಿ.

ಕೋವಿಡ್ ಸಮಯದಲ್ಲಿ ಹೆಚ್ಚಿದ ಬೇಡಿಕೆ

ಮೆಡಿಕಲ್ ಕೋಡಿಂಗ್

ಡಾ. ತೇಜಸ್ ಟಿ.ಎಸ್.

ಕೋವಿಡ್ ಸಂದರ್ಭದಲ್ಲಿ ಉದ್ಯೋಗ ನಷ್ಟ ಅನುಭವಿಸಿದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಟ್ರೆಂಡಿಂಗ್‌ನಲ್ಲಿರುವ ಕೋರ್ಸ್ ಮಾಡಿಕೊಂಡು ಬೇರೆ ಉದ್ಯೋಗಕ್ಕೆ ಸೇರಿದವರ ಸಂಖ್ಯೆಯೂ ಸಾಕಷ್ಟಿದೆ. ಅದರಲ್ಲೊಂದು ಮೆಡಿಕಲ್ ಕೋಡಿಂಗ್.

ಕೋವಿಡ್ ಬಹಳಷ್ಟು ಮಂದಿಯ ಉದ್ಯೋಗಗಳನ್ನು ಕಸಿದುಕೊಂಡಿದ್ದು ಗೊತ್ತೇ ಇದೆ. ಭಾರತದಲ್ಲಿ ಮಾತ್ರವಲ್ಲ, ಇದು ಪ್ರಪಂಚದಾದ್ಯಂತ ನಡೆದಿರುವ ವಿದ್ಯಮಾನ. ಉದ್ಯೋಗ ಇಲ್ಲ ಎಂದು ಕೈಕಟ್ಟಿ ಕೂರದೇ ಹೊಸ ಉದ್ಯೋಗಕ್ಕಾಗಿ ಹೊಸ ಕೋರ್ಸ್‌ಗೆ ಪ್ರವೇಶ ಪಡೆದವರೂ ಸಾಕಷ್ಟು ಮಂದಿ ಇದ್ದಾರೆ. ಈ ಸಂದರ್ಭದಲ್ಲಿ ಮೆಡಿಕಲ್ ಕೋಡಿಂಗ್ ಹಲವರ ಚಿತ್ತವನ್ನು ಸೆಳೆದಿದ್ದಂತೂ ಹೌದು. ಆರೋಗ್ಯಸೇವಾ ಕ್ಷೇತ್ರದಲ್ಲಿ ರೋಗ ಪತ್ತೆ, ಇತರ ಪ್ರಕ್ರಿಯೆಗಳು, ವೈದ್ಯಕೀಯ ನೆರವಿನ ಮಾಹಿತಿ ಮಾತ್ರವಲ್ಲ, ಶಸ್ತ್ರಚಿಕಿತ್ಸೆ, ತಪಾಸಣೆ, ಆಸ್ಪತ್ರೆ, ಪ್ರಯೋಗಾಲಯ ಮೊದಲಾದವುಗಳಲ್ಲಿ ಬಳಸಲಾಗುವ ಉಪಕರಣಗಳ ವಿವರಗಳನ್ನು ಕೂಡ ವೈದ್ಯಕೀಯ ಅಲ್ಫಾನ್ಯೂಮರಿಕ್ ಕೋಡ್‌ಗೆ ಬದಲಾಯಿಸುವ ‘ಮೆಡಿಕಲ್ ಕೋಡಿಂಗ್’ ಇತ್ತೀಚೆಗೆ ಜನಪ್ರಿಯವಾಗುತ್ತಿದೆ.

ಕೋರ್ಸ್‌ಗಳು

ಕೋಡಿಂಗ್ ಕುರಿತು ಕೋರ್ಸ್‌ಗಳೂ ಇವೆ. ಕೋಡಿಂಗ್ ಸರ್ಟಿಫಿಕೇಶನ್, ಮೆಡಿಕಲ್ ಕೋಡಿಂಗ್ ಮತ್ತು ಬಿಲ್ಲಿಂಗ್ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಬೆಂಗಳೂರು ಸೇರಿದಂತೆ ಇತರೆಡೆ ಇರುವ ಕೆಲವು ಕಾಲೇಜುಗಳಲ್ಲಿ ಕಲಿಸಲಾಗುವುದು. ಮೆಡಿಕಲ್ ರೆಕಾರ್ಡ್ ಟೆಕ್ನಾಲಜಿ, ಪ್ರೊಫೆಶನಲ್ ಕೋಡರ್ (ಸಿಪಿಸಿ), ಅಡ್ವಾನ್ಸ್ಡ್ ಮೆಡಿಕಲ್ ಕೋಡಿಂಗ್ ಮೊದಲಾದ ಕೋರ್ಸ್‌ಗಳು ಬೆಂಗಳೂರು, ಚೆನ್ನೈ, ಮುಂಬೈ, ಹೈದರಾಬಾದ್ ಮುಂತಾದ ಕಡೆಗಳಲ್ಲಿ ಇವೆ.

ಈ ಮೆಡಿಕಲ್ ಕೋಡಿಂಗ್ ಉದ್ಯೋಗಿಯು ಮಾಡಬೇಕಾದ ಕೆಲಸಗಳ ವಿವರ ನೋಡೋಣ. ರೋಗ ಪತ್ತೆ ಮತ್ತು ಪ್ರಕ್ರಿಯೆಗೆ ಐಸಿಡಿ (ಅಂತರರಾಷ್ಟ್ರೀಯ ಕಾಯಿಲೆ ವರ್ಗೀಕರಣ) ಹಾಗೂ ಸಿಪಿಟಿ (ಪ್ರಚಲಿತ ಕಾರ್ಯವಿಧಾನದ ಪರಿಭಾಷೆ) ಕೋಡ್‌ಗಳನ್ನು ನೀಡಬೇಕಾಗುತ್ತದೆ. ಸರ್ಕಾರ ಮತ್ತು ವಿಮೆ ನಿಯಮಗಳಿಗೆ ಅನುಗುಣವಾಗಿ ಈ ಕೋಡ್‌ಗಳು ನಿಖರವಾಗಿರಬೇಕು. ಯಾವುದಾದರೂ ದಾಖಲೆ ಅಪೂರ್ಣವಾಗಿ ಅಥವಾ ಅಸ್ಪಷ್ಟವಾಗಿದ್ದರೆ ಅವುಗಳನ್ನು ಒದಗಿಸುವವರ ಜೊತೆ ನಿರಂತರ ಸಂಪರ್ಕದಲ್ಲಿರಬೇಕು. ದಾಖಲೀಕರಣಕ್ಕೆ ಸಂಬಂಧಿಸಿದಂತೆ ಇತರ ಕ್ಲಿನಿಕಲ್ ಸಿಬ್ಬಂದಿ ಜೊತೆ ಸಂವಹನ ನಡೆಸಬೇಕಾಗುತ್ತದೆ. ಕೋಡಿಂಗ್ ಕಷ್ಟವಾದರೆ ಅಥವಾ ವಿಭಿನ್ನವಾಗಿದ್ದರೆ ಮಾಹಿತಿ ಹುಡುಕಾಟ ನಡೆಸಬೇಕು. ರೋಗಿಗಳ ದಾಖಲೆಗಳನ್ನು ಪರಿಶೀಲಿಸಬೇಕು. ಹಿಂದಿನ ದಾಖಲೆಗಳನ್ನು ಪರಾಮರ್ಶಿಸಬೇಕು. ಎಲ್ಲಾ ಕೋಡ್‌ಗಳು ಪ್ರಸ್ತುತವಾಗಿದ್ದು, ಸಕ್ರಿಯವಾಗಿರುವಂತೆ ನಿಗಾ ವಹಿಸಬೇಕು. ಇವಿಷ್ಟನ್ನೂ ಮೆಡಿಕಲ್ ಕೋಡಿಂಗ್ ಮಾಡುವವರು ನಿರಂತರವಾಗಿ ಮಾಡಬೇಕಾಗುತ್ತದೆ.

ಸದ್ಯ ಮೆಡಿಕಲ್ ಕೋಡಿಂಗ್‌ಗೆ ಇರುವ ಅಂತರರಾಷ್ಟ್ರೀಯವಾಗಿ ಪ್ರಮಾಣಿತವಾಗಿರುವ ಮಾಪನವೆಂದರೆ ಐಸಿಡಿ-10. ಇದನ್ನು ವಿಶ್ವ ಆರೋಗ್ಯ ಸಂಸ್ಥೆಯೇ ಸ್ಥಿರೀಕರಿಸಿದೆ. ಇದರಲ್ಲಿ ರೋಗ ಪತ್ತೆಗೇ 14 ಸಾವಿರಕ್ಕಿಂತ ಅಧಿಕ ಕೋಡ್‌ಗಳಿವೆ. ಹಾಗೆಯೇ ಐಸಿಡಿ-11 ಕೂಡ ಅಂಗೀಕೃತವಾಗಿದ್ದು, ಮುಂದಿನ ವರ್ಷದಿಂದ ಬಳಕೆಗೆ ಬರಬಹುದು. ಇದರಲ್ಲಿ 55 ಸಾವಿರಕ್ಕಿಂತ ಅಧಿಕ ಕೋಡ್‌ಗಳಿವೆ.

ಅರ್ಹತೆ

ಹಾಗಾದರೆ ಮೆಡಿಕಲ್ ಕೋಡಿಂಗ್ ಕ್ಷೇತ್ರದಲ್ಲಿ ಉದ್ಯೋಗ ಗಿಟ್ಟಿಸುವುದಾದರೆ ಯಾವ ಅರ್ಹತೆ ಇರಬೇಕು? ಪಿಯುಸಿಯಲ್ಲಿ ವಿಜ್ಞಾನ ಓದಿ ಮುಂದೆ ಜೀವ ವಿಜ್ಞಾನ (ಲೈಫ್ ಸೈನ್ಸ್) ಅಂದರೆ ಜೀವಶಾಸ್ತ್ರ/ ಮಾನವ ಅಂಗರಚನಾ ಶಾಸ್ತ್ರ/ ಫಿಸಿಯಾಲಜಿ ಮೊದಲಾದವುಗಳಲ್ಲಿ ಬಿಎಸ್‌ಸಿ ಪದವಿ ಪಡೆದಿರಬೇಕು. ಇದಲ್ಲದೇ ಬಯೋಟೆಕ್, ಜೈವಿಕರಸಾಯನಶಾಸ್ತ್ರ, ಬಯೋಇನ್‌ಫಾರ್ಮಾಟಿಕ್ಸ್, ಎಂಡೊಕ್ರೀನೋಲಜಿ, ಫಾರ್ಮಸಿ ಅಥವಾ ನರ್ಸಿಂಗ್‌ನಲ್ಲಿ ಪದವಿ ಪಡೆದಿರಬೇಕು.

ಇದರ ಜೊತೆಗೆ ಕೆಲವು ತಾಂತ್ರಿಕ ಕೌಶಲಗಳಲ್ಲಿ ಪರಿಣತಿ ಅಗತ್ಯ. ಅನಾಟಮಿ, ಫಿಸಿಯಾಲಜಿ ಮತ್ತು ವೈದ್ಯಕೀಯ ಶಬ್ದಗಳ ಕುರಿತು ಆಳವಾದ ಜ್ಞಾನವಿರಬೇಕು. ಕಂಪ್ಯೂಟರ್‌ನಲ್ಲಿ ವೇಗವಾಗಿ, ಸ್ಪಷ್ಟವಾಗಿ ಟೈಪ್ ಮಾಡುವ ಕಲೆ ಸಿದ್ಧಿಸಿರಬೇಕು. ಹಾಗೆಯೇ ಗಣಿತದ ಕೌಶಲವೂ ಅವಶ್ಯಕ. ಐಸಿಡಿ-9 ಕೋಡ್ ಮತ್ತು ಪ್ರಕ್ರಿಯೆಗಳ ಅರಿವಿರಬೇಕು. ಮಾತನಾಡುವ ಹಾಗೂ ಬರೆಯುವ ಮತ್ತು ಸಂವಹನ ನಡೆಸುವ ಕೌಶಲವಿರುವುದು ಕಡ್ಡಾಯ.

ಕಾರ್ಮಿಕ ಮತ್ತು ಅಂಕಿಅಂಶ ಇಲಾಖೆಯ ಪ್ರಕಾರ ಮೆಡಿಕಲ್ ಕೋಡಿಂಗ್ ಮತ್ತು ಬಿಲ್ಲಿಂಗ್ ಕ್ಷೇತ್ರವು ಇನ್ನು 2-3 ವರ್ಷಗಳಲ್ಲಿ ಶೇ 15ರಷ್ಟು ಪ್ರಗತಿ ಕಾಣಲಿದೆ. ಮೆಡಿಕಲ್ ರೆಕಾರ್ಡ್ಸ್ ಕೋಆರ್ಡಿನೇಟರ್, ಕೋಡಿಂಗ್ ಎಜುಕೇಟರ್, ಮೆಡಿಕಲ್ ಕೋಡಿಂಗ್ ತಜ್ಞ, ಆರೋಗ್ಯ ಮಾಹಿತಿ ಅಧಿಕಾರಿ, ಕೋಡಿಂಗ್ ನಿರ್ದೇಶಕ, ಸಿಇಒ, ಕಾಲೇಜ್ ಉಪನ್ಯಾಸಕ ಮೊದಲಾದ ಹುದ್ದೆಗಳನ್ನು ಈ ಕೋರ್ಸ್ ಮಾಡಿಕೊಂಡವರು ನಿಭಾಯಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ರೋಪರ್ ಡಿಎಸ್‌ಟಿ ಟಿಐಎಚ್ - ಎಡಬ್ಲ್ಯುಡಿ ಜೂನಿಯರ್ ರಿಸರ್ಚ್ ಫೆಲೋಶಿಪ್ 2021

- **ವಿವರ:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ರೋಪರ್ ಸ್ನಾತಕೋತ್ತರ ಪದವಿ ಪಡೆದವರಿಂದ ಡಿಎಸ್‌ಟಿ ಟಿಐಎಚ್ - ಎಡಬ್ಲ್ಯುಎಡಿಎಚ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021ಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.
- **ಅರ್ಹತೆ:** ಕೆಮಿಕಲ್, ಮೆಕ್ಯಾನಿಕಲ್, ಸಿವಿಲ್ ಎಂಜಿನಿಯರಿಂಗ್ ಅಥವಾ ತಂತ್ರಜ್ಞಾನ ವಿಷಯದಲ್ಲಿ ಶೇ 60 ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಮುಗಿಸಿದ ವಿದ್ಯಾರ್ಥಿಗಳು ಈ ಫೆಲೋಶಿಪ್‌ಗೆ ಅರ್ಹರಾಗಿರುತ್ತಾರೆ. ಪಿಎಚ್‌ಡಿ ಮಾಡುತ್ತಿರುವವರು ಈ ಫೆಲೋಶಿಪ್‌ಗೆ ಅರ್ಜಿ ಸಲ್ಲಿಸಬಹುದು.
- **ಆರ್ಥಿಕ ನೆರವು:** ತಿಂಗಳಿಗೆ ₹ 31,000 ಭತ್ಯೆ (ವಿವಿಧ ಮಾನದಂಡಗಳ ಆಧಾರದ ಮೇಲೆ)
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಏಪ್ರಿಲ್ 10, 2021
- **ಅರ್ಜಿ ಸಲ್ಲಿಕೆ ವಿಧಾನ:** ಇಮೇಲ್ ಮೂಲಕ
- **ಹೆಚ್ಚಿನ ವಿವರಗಳಿಗೆ:** www.b4s.in/praja/RTW3

ಐಐಟಿ ಕಾನ್ಪುರ ಡಿಪಾರ್ಟ್‌ಮೆಂಟ್ ಆಫ್ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ಜೂನಿಯರ್ ರಿಸರ್ಚ್ ಫೆಲೋಶಿಪ್ 2021

- **ವಿವರ:** ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗ ಜೂನಿಯರ್ ರಿಸರ್ಚ್ ಫೆಲೋಶಿಪ್ 2021 ಕ್ಕೆ ಅರ್ಜಿ ಆಹ್ವಾನಿಸಿದೆ. ಬಿಟೆಕ್ ಹಾಗೂ ಎಂಟೆಕ್ ಪದವಿ ಪಡೆದವರು ಈ ಫೆಲೋಶಿಪ್‌ಗೆ ಅರ್ಹರು. ಆಯ್ಕೆಯಾದ ಅಭ್ಯರ್ಥಿಗಳು ಎಸ್‌ಇಆರ್‌ಬಿ ಪ್ರಾಯೋಜಿತ ಯೋಜನೆಯಲ್ಲಿ ಕೆಲಸ ಮಾಡಬೇಕಾಗುತ್ತದೆ.
- **ಅರ್ಹತೆ:** ಬಿಟೆಕ್ ಹಾಗೂ ಎಂಟೆಕ್‌ನಲ್ಲಿ ಕನಿಷ್ಠ ಶೇ 75 ಅಂಕ ಗಳಿಸಿರಬೇಕು. ಸಿ, ಸಿ + + , ಪ್ರೋಗ್ರಾಮಿಂಗ್ ಕೌಶಲ ಹೊಂದಿರುವ ಅಭ್ಯರ್ಥಿಗಳಿಗೆ ಹಾಗೂ ಎಂಪಿಐ ಪ್ರೋಗ್ರಾಮಿಂಗ್‌ನಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.
- **ಆರ್ಥಿಕ ವಿವರ:** ತಿಂಗಳಿಗೆ ₹ 31,000 ಭತ್ಯೆ ನೀಡಲಾಗುವುದು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಏಪ್ರಿಲ್ 15, 2021
- **ಅರ್ಜಿ ಸಲ್ಲಿಕೆ ವಿಧಾನ:** ಇಮೇಲ್ ಮೂಲಕ
- **ಹೆಚ್ಚಿನ ವಿವರಗಳಿಗೆ:** www.b4s.in/praja/EJF7

ಕೃಪೆ: buddy4study.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

ಎಸ್ಸೆಸ್ಸೆಲ್ಸಿ

ಭೌತಶಾಸ್ತ್ರ

ಪಟ್ಟಕದ ಮೂಲಕ ಬೆಳಕಿನ ವಕ್ರೀಭವನ

ಪಟ್ಟಕವು ಎರಡು ತ್ರಿಭುಜ ಪಾದಗಳು ಹಾಗೂ ಮೂರು ಆಯತಾಕಾರದ ಪಾರ್ಶ್ವ ಮೇಲ್ಮೈಗಳನ್ನು ಹೊಂದಿದ್ದು ಮೂರು ಪಾರ್ಶ್ವಗಳು ಪರಸ್ಪರ ಓರೆಯಾಗಿರುತ್ತವೆ.

ಬೆಳಕಿನ ಕಿರಣವು ಪಟ್ಟಕದ ಮೇಲೆ ಬಿದ್ದಾಗ ಬೆಳಕು ವಕ್ರೀಭವನ ನಂತರ ಲಂಬದ ಕಡೆಗೆ ಓರೆಯಾಗಿರುತ್ತದೆ. ನಂತರ ಪಟ್ಟಕದಿಂದ ಹೊರಬರುವ ಬೆಳಕು ಲಂಬದಿಂದ ದೂರ ಬಾಗುತ್ತದೆ.

ಪಟ್ಟಕದ ವಿಶೇಷ ಆಕಾರವು ನಿರ್ಗಮನ ಕಿರಣವನ್ನು ಪತನ ಕಿರಣದ ದಿಕ್ಕಿನಿಂದ ಬಾಗುವಂತೆ ಮಾಡುತ್ತದೆ. ಪತನ ಕಿರಣ ಮತ್ತು ನಿರ್ಗಮ ಕಿರಣದ ನಡುವಿನ ಕೋನವನ್ನು ದಿಕ್ಪಲ್ಲಟ ಕೋನ ಎನ್ನುವರು.

ಪಟ್ಟಕದಲ್ಲಿ ಬೆಳಕಿನ ವಿಭಜನೆ



ಬಿಳಿ ಬೆಳಕು ಪಟ್ಟಕದ ಮೇಲೆ ಬಿದ್ದಾಗ ಪಟ್ಟಕವು ಪತನವಾದ ಬೆಳಕನ್ನು VIBGYOR ಅನುಕ್ರಮದಲ್ಲಿ ಅಂದರೆ ನೇರಳೆ, ಊದ, ನೀಲಿ, ಹಸಿರು, ಹಳದಿ, ಕಿತ್ತಳೆ ಮತ್ತು ಕೆಂಪು ಬಣ್ಣಗಳಾಗಿ ವಿಭಜನೆ ಮಾಡುತ್ತದೆ. ಹೀಗೆ ಬಿಳಿಯ ಬಣ್ಣವು ಅದರ ವಿಭಿನ್ನ 2 ಬಣ್ಣದ ಘಟಕಗಳಾಗಿ ವಿಭಜನೆ ಹೊಂದುವುದನ್ನು ಬೆಳಕಿನ ವರ್ಣ ವಿಭಜನೆ ಎನ್ನುತೇವೆ.

ಪಟ್ಟಕದ ಮೂಲಕ ಬೆಳಕು ಹಾದು ಹೋಗುವಾಗ ಪತನ ಕಿರಣಕ್ಕೆ ಸಂಬಂಧಿಸಿದಂತೆ ಪ್ರತೀ ಬಣ್ಣವೂ ತನ್ನದೇ ಆದ ಕೋನದಿಂದ ಬಾಗುವುದರಿಂದ ಬೆಳಕು ಪಟ್ಟಕದಲ್ಲಿ ವರ್ಣ ವಿಭಜನೆ ಹೊಂದುತ್ತದೆ. ಇಲ್ಲಿ ಕೆಂಪು ಬಣ್ಣವು ಕನಿಷ್ಠವಾಗಿ ಮತ್ತು ನೇರಳೆ ಬಣ್ಣವು ಗರಿಷ್ಠವಾಗಿ ಬಾಗುತ್ತದೆ. ಪ್ರತೀ ಬಣ್ಣವೂ ಸಹ ತನ್ನದೇ ಆದ ನಿರ್ಗಮ ಕೋನದ ಮೂಲಕ ಬೇರೆ ಪಥಗಳಲ್ಲಿ ಹೊರಹೊಮ್ಮುವುದರಿಂದ ವಿಶಿಷ್ಟ ಬಣ್ಣಗಳ ಪಟ್ಟಿಯನ್ನು ರೋಹಿತದಲ್ಲಿ ಕಾಣುತ್ತೇವೆ.

ಬೆಳಕಿನ ಬಣ್ಣಗಳ ರೋಹಿತದ ಪುನರ್ ಸಂಯೋಜನೆ



ಒಂದು ಪಟ್ಟಕದ ಮುಂದೆ ಮತ್ತೊಂದು ಸಮರೂಪಿ ಪಟ್ಟಕವನ್ನು ಮೊದಲ ಪಟ್ಟಕದ ವಿರುದ್ಧ ದಿಕ್ಕಿನಲ್ಲಿ ತಲೆಕೆಳಗಾಗಿ ಇಟ್ಟಾಗ ಮೊದಲನೇ ಪಟ್ಟಕದಲ್ಲಿ ಬಣ್ಣಗಳು ಬೇರ್ಪಟ್ಟು ರಚನೆಗೊಂಡ ರೋಹಿತವು ಎರಡನೇ ಪಟ್ಟಕದಲ್ಲಿ ರೋಹಿತದ ಜೊತೆ ಮಿಶ್ರಣಗೊಂಡು ಬಿಳಿ ಬಣ್ಣವಾಗಿ ಹೊರಹೊಮ್ಮುತ್ತದೆ. ಇದು ಬಿಳಿ ಬೆಳಕು ಏಳು ಬಣ್ಣಗಳಿಂದಾಗಿದ್ದು ಆ ಏಳು ಬಣ್ಣಗಳ ರೋಹಿತವನ್ನು ಪುನಃ ಬೇರ್ಪಡಿಸಲಾಗುವುದು ಎಂದು ತಿಳಿಸುತ್ತದೆ.

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ ‘ಪೇರ್ ಆಫ್ ಲೀನಿಯರ್ ಇಕ್ವೇಷನ್_ಗ್ರಾಫಿಕಲ್ ಮೆಥಡ್’ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3rIQBxG

ಗ್ಲುಕೋಸ್

ದ್ವಿತೀಯ ಪಿಯುಸಿ

ರಸಾಯನಶಾಸ್ತ್ರ

1. ಇದರ ಅಣುಸೂತ್ರವು ಈ ರೀತಿ ಕಂಡು ಬಂದಿರುತ್ತದೆ.

$$C_6H_{12}O_6$$

2. HI ಜೊತೆ ಸುದೀರ್ಘವಾಗಿ ಕಾಯಿಸಿದಾಗ ಟಿ-ಹೆಕ್ಸೇನ್ ಅನ್ನು ನೀಡುತ್ತದೆ. ಈ ರಾಸಾಯನಿಕ ಕ್ರಿಯೆಯು ಗ್ಲುಕೋಸ್‌ನ ಎಲ್ಲಾ ಆರು ಇಂಗಾಲದ ಪರಮಾಣುಗಳು ಒಂದು ನೇರ ಸರಪಳಿಯಲ್ಲಿ ಸಂಯೋಜನೆಗೊಂಡಿರುವುದನ್ನು ಪ್ರಚುರಪಡಿಸುತ್ತದೆ.

$$\begin{matrix} CHO \\ | \\ (CHOH)_4 \\ | \\ CH_2OH \end{matrix} \xrightarrow{HI\ \ \Delta} CH_3-CH_2-CH_2-CH_2-CH_2-CH_3$$

ಗ್ಲುಕೋಸ್

3. ಗ್ಲುಕೋಸ್ ಹೈಡ್ರೋಕ್ಸಿಲಮೈನ್‌ನೊಡನೆ ವರ್ತಿಸಿ ಆಕ್ಸಿಮ್ ಉಂಟಾಗುತ್ತದೆ ಮತ್ತು ಒಂದು ಹೈಡ್ರೋಜನ್ ಸೈಯನೈಡ್ ಅಣುವನ್ನು ಮಾತ್ರ ಸೇರಿಸಿಕೊಂಡು ಸೈನೋಹೈಡ್ರಿನ್‌ನನ್ನು ನೀಡುತ್ತದೆ. ಈ ರಾಸಾಯನಿಕ ಕ್ರಿಯೆಗಳು ಗ್ಲುಕೋಸ್‌ನಲ್ಲಿ ಒಂದು ಕಾರ್ಬೋನಿಲ್ ($>c=0$) ಗುಂಪಿನ ಇರುವಿಕೆಯನ್ನು ಖಚಿತಪಡಿಸುತ್ತದೆ.

$$\begin{matrix} CHO \\ | \\ (CHOH)_4 \\ | \\ CH_2OH \end{matrix} \xrightarrow{NH_2OH} \begin{matrix} CH=N-OH \\ | \\ (CHOH)_4 \\ | \\ CH_2OH \end{matrix}$$

4. ಸೌಮ್ಯ ಉತ್ಕರ್ಷಣಕಾರಿಯಾದ ಬ್ರೋಮಿನ್ ನೀರಿನ ದ್ರಾವಣದೊಡನೆ ವರ್ತಿಸಿ ಗ್ಲುಕೋಸ್ ಆರು ಇಂಗಾಲವಿರುವ ಕಾರ್ಬಾಕ್ಸಿಲಿಕ್ ಆಮ್ಲ ಗ್ಲುಕೋನಿಕ್ ಆಮ್ಲವಾಗಿ ಉತ್ಕರ್ಷಣಗೊಳ್ಳುತ್ತದೆ. ಇದು ಕಾರ್ಬೋನಿಲ್ ಗುಂಪಿನ ಆಲ್ಡಿಹೈಡಿಕ್ ಗುಂಪು ಎಂಬುದನ್ನು ಇದು ಸೂಚಿಸುತ್ತದೆ.

$$\begin{matrix} CHO \\ | \\ (CHOH)_4 \\ | \\ CH_2OH \end{matrix} \xrightarrow{Br_2\ \text{ನೀರು}} \begin{matrix} COOH \\ | \\ (CHOH)_4 \\ | \\ CH_2OH \end{matrix}$$

ಗ್ಲುಕೋನಿಕ್ ಆಮ್ಲ

5. ಗ್ಲುಕೋಸ್ ಅನ್ನು ಅಸಿಟಿಕ್ ಅನ್‌ಹೈಡ್ರೈಡ್ ಜೊತೆ ಅಸಿಟೈಲೆಷನ್‌ಗೊಳಪಡಿಸಿದಾಗ ಗ್ಲುಕೋಸ್ ಪೆಂಟಾ ಅಸಿಟೇಟ್ ಸಿಗುತ್ತದೆ. ಇದು ಗ್ಲುಕೋಸ್‌ನಲ್ಲಿ ಐದು ಹೈಡ್ರಾಕ್ಸಿಲ್ ಗುಂಪುಗಳು ಇರುವುದನ್ನು ದೃಢಪಡಿಸುತ್ತದೆ. ಗ್ಲುಕೋಸ್ ಪೆಂಟಾಲಿಸಿಟೇಟ್ ಒಂದು ಸ್ಥಿರ ಸಂಯುಕ್ತವಾಗಿ ಅಸ್ತಿತ್ವದಲ್ಲಿರುವುದರಿಂದ, ಐದು ಗುಂಪುಗಳು ವಿವಿಧ ಇಂಗಾಲದ ಪರಮಾಣುಗಳಿಗೆ ಜೋಡಣೆಯಾಗಿರಬೇಕು.

$$\begin{matrix} CHO \\ | \\ (CHOH)_4 \\ | \\ CH_2OH \end{matrix} \xrightarrow{\text{ಅಸಿಟಿಕ್ ಅನಹೈಡ್ರೇಟ್}} \begin{matrix} CHO \\ | \\ (CH-O-\overset{O}{\overset{||}{C}}-CH_3)_4 \\ | \\ CH_2O-\overset{O}{\overset{||}{C}}-CH_3 \end{matrix}$$

6. ನೈಟ್ರಿಕ್ ಆಮ್ಲದೊಡನೆ ಉತ್ಕರ್ಷಿಸಿದಾಗ ಗ್ಲುಕೋಸ್ ಮತ್ತು ಗ್ಲುಕೊನಿಕ್ ಆಮ್ಲ ಎರಡೂ ಸಹ ಡೈ ಕಾರ್ಬಾಲಿಕ್ಸಿಲಿಕ್ ಆಮ್ಲ ಸಕಾರಿಕ್ ಆಮ್ಲವನ್ನು ಉತ್ಪತ್ತಿ ಮಾಡುತ್ತವೆ. ಇದು ಗ್ಲುಕೋಸ್‌ನಲ್ಲಿ ಪ್ರಾಥಮಿಕ ಆಲ್ಕೋಹಾಲಿಕ್ (-OH) ಗುಂಪಿನ ಇರುವಿಕೆಯನ್ನು ಸೂಚಿಸುತ್ತದೆ.

$$\underset{\text{ಗ್ಲುಕೋಸ್}}{\begin{matrix} CHO \\ | \\ (CHOH)_4 \\ | \\ CH_2OH \end{matrix}} \xrightarrow{\text{ಉತ್ಕರ್ಷಣ ನೀರು}} \underset{\text{ಸಕಾರಿಕ್ ಆಮ್ಲವ}}{\begin{matrix} COOH \\ | \\ (CHOH)_4 \\ | \\ CH_2OH \end{matrix}} \xrightarrow{\text{ಉತ್ಕರ್ಷಣ ನೀರು}} \underset{\text{ಗ್ಲುಕೊನಿಕ್ ಆಮ್ಲ}}{\begin{matrix} COOH \\ | \\ (CHOH)_4 \\ | \\ CH_2OH \end{matrix}}$$

ಫಿಷರ್, ಗ್ಲುಕೋಸ್‌ನ ಅನೇಕ ಗುಣಲಕ್ಷಣಗಳ ಅಧ್ಯಯನದ ನಂತರ ಅದರಲ್ಲಿನ ವಿವಿಧ OH ಗುಂಪಿನ ನಿಖರ ವ್ಯವಸ್ಥೆಯನ್ನು ನೀಡಿದನು. ಇದರ ಸಂರಚನೆಯನ್ನು ಸರಿಯಾಗಿ ರಚನೆ 1 ರಲ್ಲಿ ಪ್ರತಿನಿಧಿಸಲಾಗಿದೆ. ಅದರಂತೆ ಗ್ಲುಕೋನಿಕ್ ಆಮ್ಲವನ್ನು 2, ಸಕಾರಿಕ್ ಆಮ್ಲವನ್ನು 3 ರಲ್ಲಿ ಪ್ರತಿನಿಧಿಸಲಾಗಿದೆ.



(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ ‘ಡ್ಯುಯೆಲ್ ನೇಚರ್ ಆಫ್ ರೇಡಿಯೇಷನ್ ಮ್ಯಾಟರ್_ಹಾಲ್‌ವಾಕ್ಸ್ ಅಂಡ್ ಲೆನಾರ್ಡ್ಸ್ ಅಬ್ಸರ್ವೇಶನ್ಸ್’ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/2PQa56i

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಭ್ರಷ್ಟಾಚಾರವು ಪ್ರಗತಿಯ ಅತಿ ದೊಡ್ಡ ಶತ್ರುಗಳಲ್ಲಿ ಒಂದು. ಅಲ್ಲದೆ, ಅದು ವಿಶ್ವದ ಅನೇಕ ಸಮಸ್ಯೆಗಳ ಹೃದಯಭಾಗಕ್ಕೆ ಆಗಿರುವ ಕ್ಯಾನ್ಸರ್‌ನಂತೆ. -ಡೇವಿಡ್ ಕ್ಯಾಮರೂನ್

ಪಶ್ಚಿಮಘಟ್ಟಗಳಲ್ಲಿ ಭೂಕುಸಿತದ ತಡೆ ಬೇಕಿದೆ ಆಡಳಿತದ ಪ್ರಾಮಾಣಿಕ ನಡೆ

ಪಶ್ಚಿಮಘಟ್ಟಗಳು ಜೀವಸಿರಿಯ ಉಗ್ರಾಣವೂ ಹೌದು, ನಿಸರ್ಗ ವಿಕೋಪಗಳ ಉಗ್ರ ತಾಣವೂ ಹೌದು. ಹಿಮಾಲಯದಂತೆ ಅದು ಬೆಳೆಯುತ್ತಿಲ್ಲವಾದರೂ ಪದೇಪದೇ ಕುಸಿತಕ್ಕೆ ಪಕ್ಕಾಗುತ್ತಲೇ ಇರುತ್ತದೆ. ಅಲ್ಲಿನ ಪುರಾತನ ಶಿಥಿಲ ಶಿಲೆಗಳು, ತೀವ್ರ ಇಳಿಜಾರಿನ ಆಳ ಕಮರಿಗಳು, ಸಡಿಲ ಮಣ್ಣು ಮತ್ತು ಭರಪೂರ ಮಳೆ ಎಲ್ಲವೂ ಇಡೀ ಗುಡ್ಡ ಪ್ರದೇಶವನ್ನು ಅಸ್ಥಿರತೆಯ ಪ್ರಪಾತಕ್ಕೆ ತಳ್ಳಲು ಸಜ್ಜಾಗಿರುತ್ತವೆ. ಈಚಿನ ವರ್ಷಗಳಲ್ಲಿ ಹವಾಗುಣ ಬದಲಾವಣೆಯ ಕಾರಣದಿಂದಾಗಿ ಅತಿಶಯ ಸೆಕೆ, ಅನಿರೀಕ್ಷಿತ ಮೇಘಸ್ಫೋಟ, ಸತತ ಜಡಿಮಳೆ ಮುಂತಾದವು ಒಟ್ಟಾಗಿ ಭೂಕುಸಿತದ ಸಂಭವನೀಯತೆ ಮತ್ತು ತೀವ್ರತೆ ಎರಡನ್ನೂ ಹೆಚ್ಚಿಸಿವೆ. ಸಾಲದೆಂಬಂತೆ, ಅಲ್ಲಿ ಅಭಿವೃದ್ಧಿಯ ಯೋಜನೆಗಳ ದಾಂಗುಡಿಯೂ ಹೆಚ್ಚುತ್ತಿದೆ. ಮೂರು- ನಾಲ್ಕು ವರ್ಷಗಳಿಂದ ವಿಶೇಷವಾಗಿ ಕೊಡಗು ಮತ್ತು ಚಿಕ್ಕಮಗಳೂರಿನ ಕೆಲ ಭಾಗಗಳಲ್ಲಿ ಭಾರಿ ದೊಡ್ಡ ಪ್ರಮಾಣದಲ್ಲಿ ಭೂಕುಸಿತಗಳು ಸಂಭವಿಸುತ್ತಿವೆ. ಅಂಥ ಮಹಾದುರಂತಗಳಿಗೆ ನಿಖರ ಕಾರಣಗಳನ್ನು ಪತ್ತೆಹಚ್ಚುವಂತೆ ಹಾಗೂ ವಿಕೋಪಗಳನ್ನು ಪ್ರತಿಬಂಧಿಸುವ ಕ್ರಮಗಳನ್ನು ಸೂಚಿಸುವಂತೆ ವಿಜ್ಞಾನಿಗಳ ಹಾಗೂ ಪರಿಸರತಜ್ಞರ ಸಮಿತಿಯೊಂದನ್ನು ಕರ್ನಾಟಕ ಸರ್ಕಾರ ನೇಮಕ ಮಾಡಿತ್ತು. ಅದರ ಅಂತಿಮ ವರದಿಯನ್ನು ಇತ್ತೀಚೆಗೆ ಜೀವವೈವಿಧ್ಯ ಮಂಡಳಿ ಪ್ರಕಟಿಸಿದೆ. ಪ್ರಕೃತಿಯ ಮಡಿಲಲ್ಲಿ ಮನುಷ್ಯನ ಹಸ್ತಕ್ಷೇಪಗಳಿಂದಾದ ತಪ್ಪುಗಳೇ (ಮುಖ್ಯವಾಗಿ ಎಂಜಿನಿಯರಿಂಗ್ ದೋಷಗಳೇ) ಬಹುತೇಕ ಎಲ್ಲ ಭೂಕುಸಿತಗಳಿಗೆ ಕಾರಣವಾಗಿವೆ ಎಂದು ವರದಿಯಲ್ಲಿ ಪ್ರಮುಖವಾಗಿ ಹೇಳಲಾಗಿದೆ; ಭೂಕುಸಿತವನ್ನೂ ನೈಸರ್ಗಿಕ ವಿಕೋಪಗಳ ವ್ಯಾಖ್ಯೆಯಡಿ ತರಬೇಕೆಂದೂ ಸಮಿತಿ ಶಿಫಾರಸು ಮಾಡಿದೆ. ಪಶ್ಚಿಮಘಟ್ಟಗಳ ವ್ಯಾಪ್ತಿಯಲ್ಲಿ ಮುಂದೆ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ರಾಜ್ಯ ವಿಕೋಪ ನಿಯಂತ್ರಣ ಪ್ರಾಧಿಕಾರದ ಅನುಮತಿ ಪಡೆಯಬೇಕೆಂದೂ ತಜ್ಞರ ಸಮಿತಿ ಸೂಚಿಸಿದೆ.

ತಜ್ಞರ ಸಮಿತಿಯ ಶಿಫಾರಸುಗಳ ಅನುಷ್ಠಾನ ತ್ವರಿತವಾಗಿ ಆಗಲಿ

ತನಿಖಾ ಸಮಿತಿಗಳೆಂದರೆ ತತ್ಕಾಲೀನ ಆಕ್ರೋಶವನ್ನು ತಂಪುಗೊಳಿಸುವ ಕ್ರಮಗಳೆಂದೂ, ವರದಿಗಳೆಂದರೆ ಮೂಲೆಗೆ ತಳ್ಳಬೇಕಾದ ದಾಖಲೆಗಳೆಂದೂ ಪರಿಭಾವಿಸುವ ಪ್ರತೀತಿಯೇ ನಮ್ಮಲ್ಲಿದೆ. ಅದಕ್ಕೆ ಅಪವಾದವೆಂಬಂತೆ ಈ ಸಮಿತಿ ತುರ್ತಾಗಿಯೇ ವರದಿ ಸಲ್ಲಿಸಿದ್ದು ಹಾಗೂ ಅದರ ಶಿಫಾರಸುಗಳನ್ನು ಪರಿಶೀಲಿಸಿ ಅನುಷ್ಠಾನಕ್ಕೆ ತರುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪನವರು ಹೇಳಿಕೆ ನೀಡಿದ್ದು- ಇವೆಲ್ಲವೂ ಸ್ವಾಗತಾರ್ಹವೇ ಹೌದು. ಅನುಷ್ಠಾನಕ್ಕೆ ವಿಳಂಬ ಬೇಡ. ಈ ನಿಸರ್ಗ ಭಂಡಾರದತ್ತ ಹೂಡಿಕೆದಾರರ ಆಕರ್ಷಣೆ ದಿನದಿನಕ್ಕೆ ಹೆಚ್ಚುತ್ತಿದೆ. ಹೆದ್ದಾರಿ ವಿಸ್ತರಣೆ, ರೈಲು-ಮಾರ್ಗಕ್ಕಾಗಿ ಭೂಕೊರೆತ, ಸುರಂಗ ನಿರ್ಮಾಣ, ವಿದ್ಯುತ್ ತಂತಿಮಾರ್ಗ, ನದಿತಿರುವಿನ ಕೊಳವೆ ಮಾರ್ಗವೇ ಮುಂತಾದ ಮೂಲಸೌಕರ್ಯಗಳ ಅಭಿವೃದ್ಧಿಯ ಜೊತೆಜೊತೆಗೆ ಮರಳು ಗಣಿಗಾರಿಕೆ, ಖಾಸಗಿ ರೆಸಾರ್ಟ್ ನಿರ್ಮಾಣ, ಗ್ರಾನೈಟ್ ಸಾಗಾಟದಿಂದಾಗುವ ಅರಣ್ಯನಾಶ ಎಲ್ಲವೂ ಈ ಪರಿಸರ-ಸೂಕ್ಷ್ಮ ಪ್ರದೇಶದಲ್ಲಿ ಹೆಚ್ಚುತ್ತಿವೆ. ಸಾಲದ್ದಕ್ಕೆ ಭೂಪರಿವರ್ತನೆಯ ಮೇಲಿದ್ದ ನಿರ್ಬಂಧಗಳನ್ನೂ ಸರ್ಕಾರ ತೆಗೆದು ಹಾಕಿದ್ದರಿಂದ ಕಂಡಕಂಡಲ್ಲಿ ಖಾಸಗಿ ಜೆಸಿಬಿ ಯಂತ್ರಗಳು ಗುಡ್ಡ ಕೊರೆಯುವ, ಡೈನಮೈಟ್ ಸಿಡಿಸಿ ಭೂವಿಸ್ತರಣೆ ಮಾಡುವ ಪ್ರಕ್ರಿಯೆಯೂ ಹೆಚ್ಚಾಗಿದೆ. ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿಯ ಕೆಳಗಡೆಗೇ ಅಗೆತದ ಕೆಲಸ ನಡೆದಿದೆ ಎಂದರೆ ಪೀಠದ ಕೆಳಗೇ ಅಸ್ಥಿರತೆಯ ಭೀತಿಯಿದೆಯೆಂದಾಯಿತು. ಇನ್ನು ಪರಿಹಾರದ ವಿಚಾರ: ಅದೆಷ್ಟೋ ಗ್ರಾಮಗಳಲ್ಲಿ ಕಳೆದ ಎರಡು– ಮೂರು ವರ್ಷಗಳಲ್ಲಿ ಭೂಕುಸಿತದಿಂದ ಜಮೀನು-ಮನೆ ಕಳೆದುಕೊಂಡವರಿಗೆ ಬದಲೀ ನೆಲೆಯನ್ನು ಕಲ್ಪಿಸುವ ಕೆಲಸವೂ ಆಗುತ್ತಿಲ್ಲ. ಕಡತಗಳೆಲ್ಲ ಜಿಲ್ಲಾಧಿಕಾರಿಗಳ ಬಳಿಯೇ ಕೂತಿವೆ. ಮನುಷ್ಯರಿಗೇನೊ ಅಷ್ಟಿಷ್ಟು ನಗದು ಪರಿಹಾರ ಕೊಟ್ಟಾಗಿದೆ ಸರಿ; ಆದರೆ ನಿಸರ್ಗಕ್ಕೆ ಪರಿಹಾರವೆಲ್ಲಿ? ಗುಡ್ಡ ಕುಸಿದಿದ್ದರಿಂದ ಹಳ್ಳಕೊಳ್ಳಗಳ ದಿಕ್ಕುತಪ್ಪಿ ಮಡುಗಟ್ಟಿದ ಮಣ್ಣು-ನೀರು ಹೊಸಬಗೆಯ ಅಸ್ಥಿರತೆಗೆ ಕಾರಣವಾಗಿ (ಉತ್ತರಾಖಂಡದಲ್ಲಿ ಆದಂತೆ) ಅದೂ ಆಪತ್ತಿಗೆ ಕಾರಣವಾಗಬಹುದು. ಪ್ರಕೃತಿಗೂ ಮರುವಸತಿ ಕಲ್ಪಿಸುವ ಕೆಲಸ ತುರ್ತಾಗಿ ಆಗಬೇಕಿದೆ. ಅಡ್ಡಾದಿಡ್ಡಿ ಭೂಬಳಕೆ, ಲಂಗುಲಗಾಮಿಲ್ಲದ ಕಬಳಿಕೆಯಿಂದಾಗಿ ಮಲೆನಾಡು- ಕರಾವಳಿ ಪ್ರದೇಶಗಳ 23 ತಾಲ್ಲೂಕುಗಳಲ್ಲಿ ಭೂಕುಸಿತದ ಸಾಧ್ಯತೆ ಇದೆಯೆಂದು ಭಾರತೀಯ ಭೂವಿಜ್ಞಾನ ಸರ್ವೇಕ್ಷಣ ವರದಿಯಲ್ಲೂ ಹೇಳಲಾಗಿದೆ. ಯಾವುದೇ ಸರ್ಕಾರಿ ಕಾಮಗಾರಿಗೆ ಕೈಹಾಕುವ ಮುನ್ನ ಈ ಸಂಸ್ಥೆ ಸಿದ್ಧಪಡಿಸಿರುವ ‘ಸಂಭವನೀಯ ಭೂಕುಸಿತದ ನಕ್ಷೆ’ಯನ್ನು ಎದುರಿಗಿಟ್ಟುಕೊಳ್ಳಬೇಕು ಎಂಬುದನ್ನು ಕಡ್ಡಾಯ ಮಾಡಬೇಕು. ಕೇರಳದಲ್ಲಿ ಇಂಥ ನಕ್ಷೆಯನ್ನು ಯಾರು ಬೇಕಾದರೂ ವೀಕ್ಷಿಸಬಹುದಾಗಿದೆ. ಎಲ್ಲಕ್ಕಿಂತ ಮುಖ್ಯ ಏನೆಂದರೆ, ಘಟ್ಟಪ್ರದೇಶದ ಕಣಿವೆಗಳಲ್ಲಿ ಶತಮಾನಗಳಿಂದ ನೆಲೆಸಿರುವ ಜನರು ತಮ್ಮದಲ್ಲದ ತಪ್ಪಿನಿಂದಾಗಿ ಭಯ-ಆತಂಕಗಳಲ್ಲಿ ಬದುಕಬೇಕಾಗಿ ಬಂದಿದೆ. ಅಂಥವರಿಗೆ ಕೊಂಚ ನೆಮ್ಮದಿ ಸಿಗುವಂತೆ ವಿಶೇಷ ‘ಭೂಕುಸಿತ ವಿಮೆ’ ಮಾಡಿಸುವತ್ತ ಸರ್ಕಾರ ಗಮನ ಹರಿಸಬೇಕಿದೆ. ಭದ್ರತೆ ನಿಸರ್ಗಕ್ಕೂ ಬೇಕಾಗಿದೆ, ಅದರ ಮಡಿಲಲ್ಲಿ ನೆಲೆಸಿದವರಿಗೂ.

ರಾಷ್ಟ್ರ ರಾಜಕಾರಣದ ಮೇಲೆ ಈಗಿನ ವಿಧಾನಸಭಾ ಚುನಾವಣೆಯ ಪರಿಣಾಮಗಳು ಮಹತ್ವದ್ದಾಗಿರುತ್ತವೆ

ರಾಜ್ಯಗಳ ಮೂಲಕ ರಾಷ್ಟ್ರ ರಾಜಕಾರಣ

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಚುನಾವಣೆ ಎದುರಿಸುತ್ತಿರುವ ದೇಶದ ಕೆಲವು ಪ್ರಮುಖ ರಾಜ್ಯಗಳಲ್ಲಿನ ಬೆಳವಣಿಗೆಗಳ ಮೂಲಕ ರಾಷ್ಟ್ರ ರಾಜಕಾರಣವನ್ನು ಕಳೆದ ಕೆಲವು ವಾರಗಳಿಂದ ನೋಡಲಾಗುತ್ತಿದೆ. ಮುಂದಿನ ಕೆಲವು ವಾರಗಳವರೆಗೆ ನೋಡುವ ಬಗೆಯು ಹೀಗೆಯೇ ಇರಲಿದೆ. ನಾಲ್ಕು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶವು ಬಿರುಸಿನ ಪ್ರಚಾರಕ್ಕೆ ಸಾಕ್ಷಿಯಾಗಿವೆ. ಇಲ್ಲೆಲ್ಲ ಸ್ಪರ್ಧೆ ತೀರಾ ತುರುಸಿನಿಂದ ಕೂಡಿದೆ. ಐದು ಕಡೆ ಚುನಾವಣೆ ನಡೆಯುತ್ತಿದ್ದರೂ, ಇಲ್ಲಿ ಕೇಂದ್ರಬಿಂದು ಆಗಿರುವುದು ಪಶ್ಚಿಮ ಬಂಗಾಳ ಎಂಬಂತಿದೆ. ಬೇರೆ ಚುನಾವಣಾ ಕಣಗಳಿಗೆ ಸಿಗಬೇಕಾದ ಆದ್ಯತೆ ಸಿಗುತ್ತಿಲ್ಲ.

ಪ್ರತೀ ಕಣದಲ್ಲಿನ ಪ್ರಮುಖ ರಾಜಕೀಯ ಪಕ್ಷಗಳು ಬೇರೆ ಬೇರೆ. ಇದು ಭಾರತದ ಚುನಾವಣಾ ರಾಜಕೀಯದ ಬಹುತ್ವವನ್ನು ತೋರಿಸುತ್ತದೆ. ಅಸ್ಸಾಂನಲ್ಲಿ ಬಿಜೆಪಿ (ಮತ್ತು ಮಿತ್ರಪಕ್ಷಗಳು) ಹಾಗೂ ಕಾಂಗ್ರೆಸ್ (ಮತ್ತು ಮಿತ್ರ ಪಕ್ಷಗಳು) ನಡುವೆ ಹಣಾಹಣಿ ಇದ್ದರೆ, ತಮಿಳುನಾಡಿನ ಅಖಾಡದಲ್ಲಿ ಇರುವುವು ರಾಜ್ಯಮಟ್ಟದ ಎರಡು ಬಲಿಷ್ಠ ರಾಜಕೀಯ ಪಕ್ಷಗಳು ಮತ್ತು ಅವುಗಳ ಮಿತ್ರಪಕ್ಷಗಳು. ಕೇರಳದಲ್ಲಿ ಎರಡು ಮಿತ್ರಕೂಟಗಳ ನಡುವಿನ ಸ್ಪರ್ಧೆಗೆ ತಾನೂ ಪ್ರವೇಶಪಡೆದು, ತ್ರಿಕೋನ ಸ್ಪರ್ಧೆ ಸಾಧ್ಯವಾಗಿಸಲು ಬಿಜೆಪಿಯು ಸಂಘಟಿತ ಯತ್ನ ನಡೆಸಿದೆ. ಪುದುಚೇರಿಯ ಮತದಾರರು ಎನ್‌ಡಿಎ ಅಥವಾ ಯುಪಿಎ ಒಕ್ಕೂಟಗಳ ನಡುವೆ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹಾಗೂ ತೃಣಮೂಲ ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ಇರುವಂತೆ ಕಾಣುತ್ತಿದೆ. ಹಾಗಾಗಿ ಐದೂ ಕಣಗಳಲ್ಲಿನ ಲೆಕ್ಕಾಚಾರಗಳು ಬೇರೆಯವೇ ಆಗಿವೆ.

ಅತ್ಯಂತ ತೀವ್ರ ಹಣಾಹಣಿ ಇರುವುದು ತಮಿಳುನಾಡಿನಲ್ಲಿ ಎಂಬಂತೆ ಕಾಣುತ್ತಿದೆ. ಡಿಎಂಕೆ ನೇತೃತ್ವದ ಮೈತ್ರಿಕೂಟವು ಮುಂಚೂಣಿಯಲ್ಲಿದೆ ಎಂದು ಆರಂಭದಲ್ಲಿ ಅನಿಸುತ್ತಿತ್ತು. ಆದರೆ, ಅಭಿಯಾನ ಬಿರುಸು ಪಡೆದಂತೆಲ್ಲ ಡಿಎಂಕೆ ಮೈತ್ರಿಕೂಟ ಮತ್ತು ಎಐಎಡಿಎಂಕೆ ಮೈತ್ರಿಕೂಟದ ನಡುವಿನ ಅಂತರ ತಗ್ಗಿರುವಂತೆ, ಡಿಎಂಕೆ ತುಸು ಮುನ್ನಡೆ ಕಾಯ್ದುಕೊಂಡಿರುವಂತೆ ಕಾಣುತ್ತಿದೆ. ಸೀಟು ಹಂಚಿಕೆಯಲ್ಲಿ ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳು ತಮ್ಮಿಂದ ರಾಷ್ಟ್ರೀಯ ಪಕ್ಷಗಳು ಹೆಚ್ಚಿನ ಸ್ಥಾನ ಕೇಳದಂತೆ ಮಾಡಿವೆ.

ಡಿಎಂಕೆ ಮುನ್ನಡೆಯಲ್ಲಿದೆ ಎಂದು ಹೇಳಿದ್ದಕ್ಕೆ ಮೂರು ಕಾರಣಗಳಿವೆ. ಮೊದಲನೆಯದು, ಡಿಎಂಕೆ ಪಕ್ಷವು ತನ್ನ ರಾಜಕೀಯ ಗೆಳೆಯರನ್ನು ಹೆಚ್ಚು ಒಳಗೊಳ್ಳುವಂತೆ, ಅದರ ಚುನಾವಣಾ ಅಭಿಯಾನ ಹೆಚ್ಚು ಗಟ್ಟಿಯಾಗಿ ಹೆಣೆದುಕೊಂಡಿದ್ದಂತೆ ಕಾಣುತ್ತಿದೆ. ಎರಡನೆಯದು, ಡಿಎಂಕೆ ವಿರೋಧಿ ಮತಗಳು ಮೂರು ಭಿನ್ನ ಗುಂಪುಗಳ ನಡುವೆ ಹಂಚಿಹೋಗಲಿವೆ. ಅವೆಲ್ಲವೂ ಎಐಎಡಿಎಂಕೆ ಮೈತ್ರಿಕೂಟದ ತೆಕ್ಕೆಗೇ ಹೋಗುತ್ತವೆ ಎನ್ನಲಾಗದು. ಮೂರನೆಯದು, ಸ್ಟಾಲಿನ್ ಅವರು ಕರುಣಾನಿಧಿ ಅವರ ನಿಜ ಉತ್ತರಾಧಿಕಾರಿಯಂತಿದ್ದಾರೆ. ಆದರೆ ಎಐಎಡಿಎಂಕೆ ಪಕ್ಷದಲ್ಲಿ ಜಯಲಲಿತಾ ಅವರ ಉತ್ತರಾಧಿಕಾರಿಯಾಗಿ ಯಾವುದೇ ಒಬ್ಬ ನಾಯಕ ಕಾಣುತ್ತಿಲ್ಲ. ಇಡೀ ಪಕ್ಷವು ತನ್ನನ್ನು ಜಯಲಲಿತಾ ಪ್ರತಿನಿಧಿ ಎಂಬಂತೆ ಬಿಂಬಿಸಿಕೊಳ್ಳಲು ಯತ್ನಿಸುತ್ತಿದ್ದರೆ, ಡಿಎಂಕೆ ಬೆಂಬಲಿಗರ ಪಾಲಿಗೆ ಸ್ಟಾಲಿನ್ ಅವರೇ ಪಕ್ಷದ ಮುಖವಾಣಿಯಾಗಿ ಕಾಣುತ್ತಿದ್ದಾರೆ. ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು ತಮ್ಮ ನಾಯಕತ್ವದಲ್ಲಿ ಒಂದು ತಲೆಮಾರು ಬದಲಾವಣೆ ಆಗಿದ್ದನ್ನು ಸ್ವೀಕರಿಸುವಂತೆ ಬೆಂಬಲಿಗರನ್ನು ಎಷ್ಟರ ಮಟ್ಟಿಗೆ ಒಪ್ಪಿಸಿದ್ದಾರೆ ಎಂಬುದನ್ನು ತಮಿಳುನಾಡಿನ ಫಲಿತಾಂಶವು ಹೇಳಲಿದೆ.

ಪಕ್ಕದ ಪುದುಚೇರಿಯಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವು ಹಿನ್ನಡೆ ಕಂಡಂತಿದೆ. ಎನ್‌ಡಿಎ ಮೈತ್ರಿಕೂಟದ ಸ್ಥಿತಿ ಅಲ್ಲಿ ಉತ್ತಮವಾಗಿದೆ ಎಂಬಂತೆ ಕಾಣುತ್ತಿದೆ.

ಕೇರಳದಲ್ಲಿ ಆಡಳಿತಾರೂಢ ಪಕ್ಷಗಳು ಅಧಿಕಾರದಲ್ಲಿ ಉಳಿದುಕೊಂಡಿದ್ದು ಕಡಿಮೆ. ಇದು ಈ ಬಾರಿಯೂ ಮುಂದುವರಿಯಲಿದೆ ಎಂಬ ಆಶಾಭಾವನೆ ಕಾಂಗ್ರೆಸ್ಸಿನಲ್ಲಿದೆ. ಕೇರಳದಲ್ಲಿ ಬಿಜೆಪಿಯ ಅಸ್ತಿತ್ವ, ನೆಲೆ ವಿಸ್ತರಣೆ ಕಣ್ಣಿಗೆ ಕಾಣುವಂತಿದೆ. ಬಿಜೆಪಿಯ ನೆಲೆ ವಿಸ್ತರಣೆ ಆಗುತ್ತಿರುವ ಭೌಗೋಳಿಕ ಪ್ರದೇಶಗಳನ್ನು ಗಮನಿಸಿ, ಸಾಂಪ್ರದಾಯಿಕವಾಗಿ ಆಲೋಚಿಸಿ ಹೇಳುವುದಾದರೆ ಬಿಜೆಪಿಯ ಮತಗಳಿಕೆ ಹೆಚ್ಚಾಗುವುದರಿಂದ ಎಡರಂಗಕ್ಕೆ ತೊಂದರೆ ಆಗುತ್ತದೆ. ಆದರೆ, ಬಿಜೆಪಿಯು ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟದ ಮತಗಳನ್ನು (ಅದರಲ್ಲೂ ಮುಖ್ಯವಾಗಿ ಮಧ್ಯ ಹಾಗೂ ದಕ್ಷಿಣ ಕೇರಳದಲ್ಲಿ) ಸೆಳೆದುಕೊಳ್ಳಲಿದೆ ಎಂದು 2019ರ ಲೋಕನೀತಿ–ಸಿಎಸ್‌ಡಿಎಸ್ ಸಮೀಕ್ಷೆ ಹೇಳಿತ್ತು. ಹಾಗಾಗಿ, ಯಾವ ಮೈತ್ರಿಕೂಟವು ತನ್ನ ಸಾಂಪ್ರದಾಯಿಕ ಮತಗಳನ್ನು ಹೆಚ್ಚು ಉಳಿಸಿಕೊಳ್ಳುತ್ತದೆ ಎಂಬುದರ ಮೇಲೆ ಕೇರಳದ ಫಲಿತಾಂಶ ನಿಂತಿರಲಿದೆ.

ಅಸ್ಸಾಂನಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟಗಳ ನಡುವೆ ನೇರ ಸ್ಪರ್ಧೆಯಿದೆ. ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲಿ ತಾನು ಮಾಡಿದ್ದನ್ನು ಸಮರ್ಥಿಸಿಕೊಳ್ಳಬೇಕಿರುವ ಅನಿವಾರ್ಯ ಬಿಜೆಪಿಗೆ ಇರುವುದು ಈ ರಾಜ್ಯದಲ್ಲಿ ಮಾತ್ರ. ಅಸ್ಸಾಂನಲ್ಲಿ ಸಿಎಎ (ಪೌರತ್ವ ತಿದ್ದುಪಡಿ ಕಾಯ್ದೆ) ಚರ್ಚೆಯು ಬೇರೆಯದೇ ಆದ ಬಣ್ಣ ಪಡೆದಿದೆ. ತರುಣ್ ಗೊಗೊಯಿ ಉಪಸ್ಥಿತಿ ಹಾಗೂ ಪಕ್ಷವನ್ನು ಒಟ್ಟಾಗಿರಿಸುವ ಅವರ ಶಕ್ತಿಯು ಕಾಂಗ್ರೆಸ್ಸಿಗೆ ದಕ್ಕಿಲ್ಲ ಎಂಬುದು ನಿಜವಾದರೂ, ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವು ಇಲ್ಲಿ ಬಿಜೆಪಿ ವಿರೋಧಿ ಮತಗಳನ್ನು ಒಗ್ಗೂಡಿಸುವಲ್ಲಿ ಯಶಸ್ಸು ಕಂಡಿದೆ.

ಕೊನೆಯದಾಗಿ, ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯುವುದಕ್ಕಾಗಿ ನಡೆದಿರುವ ಸ್ಪರ್ಧೆಯ ಬಗ್ಗೆ ಒಂದೆರಡು ಮಾತು! ಬಿಜೆಪಿಯು 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ, ಅದು ಅತ್ಯಂತ ತುರುಸಿನ ಸ್ಪರ್ಧೆ ಎದುರಿಸಿದ್ದು ಪ್ರಮುಖ ರಾಜ್ಯಗಳಲ್ಲಿನ ಪ್ರಾದೇಶಿಕ ನಾಯಕರಿಂದ. ಜನಸಮೂಹದಲ್ಲಿ ಸಂಚಲನ ಸೃಷ್ಟಿಸಬಲ್ಲ ಶಕ್ತಿಯಿರುವ ಕೇಂದ್ರ ನಾಯಕತ್ವವನ್ನು ನೆಚ್ಚಿಕೊಂಡಿರುವ ಒಂದು ರಾಷ್ಟ್ರೀಯ ಪಕ್ಷ ಹಾಗೂ ಜನಸಮೂಹದ ನಡುವೆ ಓಡಾಡಿ ಸಂಚಲನ ತರಬಲ್ಲ ನಾಯಕರನ್ನು ನಂಬಿರುವ ಪ್ರಾದೇಶಿಕ ಪಕ್ಷವೊಂದರ ನಡುವಿನ ಸ್ಪರ್ಧೆ ಪಶ್ಚಿಮ ಬಂಗಾಳದಲ್ಲಿ ನಡೆದಿದೆ. ಎರಡು ಅವಧಿಗೆ ಆಡಳಿತ ನಡೆಸಿರುವ ಟಿಎಂಸಿ, ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವುದು ನಿಜ. ಆದರೆ, ಬಿಜೆಪಿಗೆ ಅಲ್ಲಿ ಜಯ ತಂದುಕೊಡುವಂತಹ ತಳಮಟ್ಟದ ಸಂಘಟನಾ ಕೌಶಲ ಇದೆಯೇ? ಇಲ್ಲಿ ಎರಡು ಅಂಶಗಳನ್ನು ಪರಿಗಣಿಸಬೇಕು. ಮೊದಲನೆಯದು, ಮಮತಾ ಬ್ಯಾನರ್ಜಿ ಅವರನ್ನು ಎದುರಿಸಲು ಬಿಜೆಪಿಗೆ ವಿಶ್ವಾಸಾರ್ಹವಾದ ಸ್ಥಳೀಯ ನಾಯಕತ್ವ ಇಲ್ಲ.

ಎರಡನೆಯದು, ಈಗ ಬಿಜೆಪಿಯ ಶಾಲು ಹೊದ್ದುಕೊಂಡಿರುವ ಬಹುತೇಕರು ತೀರಾ ಈಚಿನವರೆಗೆ ಟಿಎಂಸಿ ಪಕ್ಷದ ಶಾಲನ್ನು ಹೆಗಲ ಮೇಲೆ ಹಾಕಿಕೊಂಡಿದ್ದವರು. ಮುಂಚೂಣಿ ನಾಯಕತ್ವದ ಸ್ಥಾನಗಳಲ್ಲಿ ಹೊಸಬರನ್ನೇ ಇಟ್ಟುಕೊಂಡು ವಿಜಯ ಸಾಧಿಸುವುದು ಸುಲಭದ ಕೆಲಸವಲ್ಲ ಎಂಬುದನ್ನು ಈವರೆಗಿನ ಅನುಭವಗಳು ಹೇಳುತ್ತವೆ.

ಬಿಸಿಲ ಬೇಗೆ ಜಾಸ್ತಿ ಇರುವ ಈ ಹೊತ್ತಿನಲ್ಲಿ ನಡೆಯುತ್ತಿರುವ ಈ ಚುನಾವಣೆಗಳು, ಕೆಲವು ರಾಜಕೀಯ ನಾಯಕರು ತಾಪ ಅನುಭವಿಸುವಂತೆ ಮಾಡುವುದು ಖಂಡಿತ. ಇನ್ನು ಕೆಲವು ನಾಯಕರು ಕೊನೆಯಲ್ಲಿ ಯಶಸ್ಸಿನ ಸುಪ್ಪತ್ತಿಗೆಯ ಮೇಲೆ ಕುಳಿತುಕೊಳ್ಳುವಂತೆಯೂ ಇದು ಮಾಡುತ್ತದೆ. ರಾಷ್ಟ್ರ ರಾಜಕಾರಣದ ಮೇಲೆ ಇದರ ಪರಿಣಾಮಗಳು ಮಹತ್ವದ್ದಾಗಿರುತ್ತವೆ. ಬಿಜೆಪಿಗೆ ಅಸ್ಸಾಂನಲ್ಲಿ ಅಧಿಕಾರ ಉಳಿಸಿಕೊಳ್ಳಲು, ಬಂಗಾಳದಲ್ಲಿ ಪ್ರಬಲ ಸ್ಪರ್ಧೆ ಒಡ್ಡಲು, ಕೇರಳದಲ್ಲಿ ಮಹತ್ವದ ಮೂರನೆಯ ಶಕ್ತಿ ಆಗಲು, ತಮಿಳುನಾಡಿನಲ್ಲಿ ಎಐಎಡಿಎಂಕೆಗೆ ಅಧಿಕಾರ ಹಿಡಿಯಲು ನೆರವಾಗಲು ಸಾಧ್ಯವಾದರೆ ಅದು ಪಕ್ಷದ ಸ್ಥೈರ್ಯವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸುತ್ತದೆ.

ಕಾಂಗ್ರೆಸ್ಸಿಗೆ ಕೇರಳದಲ್ಲಿ ಮತ್ತೆ ಅಧಿಕಾರ ಹಿಡಿಯಲು ಆಗದಿದ್ದರೆ, ಅಸ್ಸಾಂನಲ್ಲಿ ಬಿಜೆಪಿಯಿಂದ ಅಧಿಕಾರ ಕಸಿಯಲು ಆಗದಿದ್ದರೆ ಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತದೆ. ತಮಿಳುನಾಡಿನಲ್ಲಿ ಡಿಎಂಕೆ ಜಯ ಸಾಧಿಸಿದ ಮಾತ್ರಕ್ಕೆ ಕಾಂಗ್ರೆಸ್ಸಿಗೆ ಸಮಾಧಾನ ಸಿಗುವುದಿಲ್ಲ. ಬಿಜೆಪಿಯು 2019ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಮರಳಿದ ಎರಡು ವರ್ಷಗಳ ನಂತರ ನಡೆಯುತ್ತಿರುವ ಈ ಚುನಾವಣೆಗಳು ಮುಂದಿನ ದಿನಗಳಲ್ಲಿ ರಾಜಕೀಯದ ಹವಾ ಹೇಗಿರಲಿದೆ ಎಂಬುದನ್ನು ತೀರ್ಮಾನಿಸಬಹುದು.

ಚುರುಮುರಿ

ಕಣ್ತಪ್ಪುಗಳ ಕಾಲವಿದು!

• ಸುಮಂಗಲಾ

ನಾಕು ದಿನದ ಹಿಂದೆ ಸುದ್ದಿಯೊಂದನ್ನು ಓದಿದ ಬೆಕ್ಕಣ್ಣನದು ಒಂದೇಸಮನೆ ವರಾತ... ‘ಅಕ್ಕಂಗೆ ಫೋನ್ ಹಚ್ಚಬೇಕು, ಮೊಬೈಲ್ ಕೊಡು’.

‘ಯಾರಲೇ ನಿನ್ನ ಈ ಹೊಸ ಅಕ್ಕ’ ನನಗೆ ಕುತೂಹಲ.

‘ಹೊಸ ಅಕ್ಕ ಅಲ್ಲೇಳು... ನಿರ್ಮಲಕ್ಕ’ ಎಂದಿದ್ದೇ ಇಂಟರ್ನೆಟ್ಟಿನಲ್ಲಿ ಜಾಲಾಡಿ, ಫೋನ್ ನಂಬರ್ ಹುಡುಕಿ ವಿಡಿಯೊ ಕಾಲ್ ಮಾಡಿಯೇ ಬಿಟ್ಟಿತು.

‘ಏನಕ್ಕೋ... ಬಡವ್ರ ಹೊಟ್ಟಿ ಮ್ಯಾಗೆ ಒಂದಾದ ಮ್ಯಾಗ್ ಒಂದ್ ಹೊಡೆದಿದ್ದು ಸಾಲದು ಅಂತ ಈಗ ಹಿಂಗ ಮಾಡಿಯೇನ್? ಸಣ್ಣ ಉಳಿತಾಯ ಅಂತ ಅಂಗೈಯಗಲ ತಣ್ಣೀರ್ ಪಟ್ಟಿ ಹೊಟ್ಟಿಮ್ಯಾಗ ಹಾಕ್ಕಂಡಿದ್ರು, ಅದೂ ಕಿತ್ತಕಂಡು ನಿನ್ನ್ ನೆತ್ತಿ ತಂಪಾಗ್ಲಿ ಅಂತ ತೆಲಿ ಮ್ಯಾಗೆ ಹಾಕ್ಕಂಡಿಯಲ್ಲ... ಯಾವ್ ದೇವ್ರು ಮೆಚ್ಚತಾನ ನಿಂಗೆ’ ಅಂತ ಸಮಾ ಬೈಯತೊಡಗಿತು.

‘ಈಗ ಹೆಂಗೆ ವಾಪಸು ತಗಳೂದಪ್ಪ’ ಅಂತ ಆಕಿ ಬೆವರು ವರೆಸಿಕೊಳ್ತ ಕೇಳಿದ್ಲು.

‘ಕನ್ನಡಕ ಹಾಕ್ಕಳದು ಮರೆತಿದ್ದೆ, ಕಣ್ತಪ್ಪಿನಿಂದ ಗೊತ್ತಾಗದೇ ರಾಂಗ್ ನೋಟಿಸ್ ಕಳಿಸಿಬಿಟ್ಟೆ ಅಂತ ವಂದ್ ಹೇಳಿಕೆ ಕೊಡು’ ಅಂತ ಬೆಕ್ಕಣ್ಣನೇ ಉಪಾಯ ಸೂಚಿಸಿತು. ‘ಆತೇಳು... ಹಂಗೇ ಮಾಡತೀನಿ’ ನಿರ್ಮಲಕ್ಕ ಫೋನಿಟ್ಟಳು.

ಮರುದಿನ ಬೆಳಗ್ಗೆ ಪೇಪರ್ ನೋಡಿದ್ದೇ ಬೆಕ್ಕಣ್ಣ, ‘ಏ ನೋಡಿಲ್ಲಿ, ನಿರ್ಮಲಕ್ಕ ನಾ ಹೇಳಿದಂಗೇ ಕಣ್ತಪ್ಪಿನಿಂದ ಆಗಿದ್ದದು ಅಂತ್ಹೇಳಿ ಬಡ್ಡಿದರ ಕಡಿತ ಹಿಂದ್ ತಗಂಡಾಳ’ ಎಂದು ಖುಷಿಯಿಂದ ಕುಣಿದಾಡಿತು.

‘ನೀ ಬೈದಿದ್ದಕ್ಕೆ ಅಲ್ಲಲೇ... ಎಷ್ಟಕೊಂದು ರಾಜ್ಯದಾಗೆ ಚುನಾವಣೆ ಕಾವು ಏರೈತಿ, ಈ ಬಡ್ಡಿದರ ಕಡಿತ ಉಲ್ಟಾ ತಮ್ಮನ್ನೇ ಸುಡತೈತಿ ಅಂತ್ಹೇಳಿ ವಾಪಸು ತಂಗಂಡಾರ. ಹಂಗಾರೆ ನಿಮ್ಮ ಈಶೂಮಾಮ ವಾಪಸು ಕಳಿಸಿದ ಫೈಲಿಗೆ ಯೆಡ್ಯೂರಜ್ಜಾರು ಸಹಿ ಹಾಕಿ, ಅರವತ್ತೈದು ಕೋಟಿ ರೂಪಾಯಿ ಕಾಮಗಾರಿ ತಮ್ಮ ಸಂಬಂಧಿಗೆ ಮಂಜೂರು ಮಾಡ್ಯಾರಂತಲ್ಲ, ಅದನ್ನೂ ಕಣ್ತಪ್ಪಿನಿಂದ ಅಂತ್ಹೇಳಿ ವಾಪಸು ತಗಳಕ್ಕೆ ಅಜ್ಜಾರಿಗೆ ಹೇಳಲೇ’ ಎಂದೆ.

‘ಹೇ... ಅದೆಲ್ಲ ವರಿಷ್ಠರಿಗೆ ಬಿಟ್ಟ ವಿಚಾರ’ ಎಂದು ಪೆಕರು ನಗೆ ನಕ್ಕಿತು.

ದಿನದ ಟ್ವೀಟ್

ದೃಢ ಪ್ರತ್ಯುತ್ತರ ನೀಡಬೇಕಿದೆ



ಛತ್ತೀಸಗಡದಲ್ಲಿ ನಡೆದ ಹೊಂಚುದಾಳಿ ಭಯಾನಕ ದುರಂತ. ಸಶಸ್ತ್ರ ಮಾವೊವಾದಿಗಳ ಬೆದರಿಕೆಗೆ ಹೆಚ್ಚು ದೃಢವಾದ ಪ್ರತ್ಯುತ್ತರ ನೀಡಬೇಕಿದೆ. ನಮ್ಮ ಆಂತರಿಕ ಭದ್ರತೆಗೆ ಇದೊಂದು ಅತಿದೊಡ್ಡ ಬೆದರಿಕೆ ಎಂದು ಮನಮೋಹನ್ ಸಿಂಗ್ ಅವರು ಹೇಳಿದ್ದು ಸರಿಯಾಗಿಯೇ ಇದೆ. ಈ ಪಿಡುಗು ಇನ್ನೂ ಮುಂದುವರಿದಿರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯವಲ್ಲದೆ ಬೇರೇನೂ ಅಲ್ಲ.

ಶೇಖರ್ ಗುಪ್ತಾ, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 5-4-1996

• **ಚುನಾವಣೆ: ಪಕ್ಷ ಮಾಡುವ ವೆಚ್ಚ ಅಭ್ಯರ್ಥಿಯ ಲೆಕ್ಕಕ್ಕೆ**

ನವದೆಹಲಿ, ಏ. 4– ರಾಜಕೀಯ ಪಕ್ಷವೊಂದು ಚುನಾವಣೆಗೆ ಮಾಡುವ ವೆಚ್ಚ ಅಭ್ಯರ್ಥಿಯ ಲೆಕ್ಕಕ್ಕೆ ಸೇರುತ್ತದೆ. ಆದರೆ, ತನ್ನ ಗಮನಕ್ಕೆ ತರದೆ ಪಕ್ಷ ಈ ವೆಚ್ಚ ಮಾಡಿದೆ ಎಂದು ಅಭ್ಯರ್ಥಿ ಸಾಬೀತು ಪಡಿಸಿದರೆ ಮಾತ್ರ ಆತನ ಲೆಕ್ಕಕ್ಕೆ ಸೇರಿಸದೆ ವಿನಾಯಿತಿ ನೀಡಬಹುದು ಎಂದು ಸುಪ್ರೀಂ ಕೋರ್ಟ್ ಇಂದು ವ್ಯಾಪಕ ಪರಿಣಾಮ ಬೀರುವ ಮಹತ್ವದ ತೀರ್ಪಿನಲ್ಲಿ ತಿಳಿಸಿದೆ.

ಅಭ್ಯರ್ಥಿಗಳ ಮೇಲೆ ಪಕ್ಷ ಮಾಡುವ ವೆಚ್ಚವನ್ನು ಅಭ್ಯರ್ಥಿಯ ವೆಚ್ಚಕ್ಕೆ ಸೇರಿಸದೆ ವಿನಾಯಿತಿ ನೀಡುವ ಚುನಾವಣಾ ಕಾನೂನಿನ ಸೌಲಭ್ಯ ಬಳಸಿಕೊಳ್ಳಲು ಲೆಕ್ಕಪತ್ರಗಳನ್ನಿಡದ ಹಾಗೂ ಆದಾಯದ ಲೆಕ್ಕ ಇಡದ ರಾಜಕೀಯ ಪಕ್ಷಗಳಿಗೆ ಅವಕಾಶ ನೀಡಲಾಗದು ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಬರಲಿರುವ ಚುನಾವಣೆಗಳಲ್ಲಿ ಕಪ್ಪುಹಣದ ಬಳಕೆಗೆ ಅಂತ್ಯ ಹಾಡುವುದು ಕೋರ್ಟ್ ಕ್ರಮದ ಉದ್ದೇಶ.

• **ರಸ್ತೆ ತಡೆ, ಬೀದರ್ ಉದ್ರಿಕ್ತ**

ಬೀದರ್, ಏ. 4– ಕಲ್ಬುರ್ಗಿ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ಅವರ ಹೆಸರಿಡಬೇಕು ಎಂದು ಒತ್ತಾಯಿಸಿ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಇಂದು ಜಿಲ್ಲೆಯ ಹಲವು ಕಡೆಗಳಲ್ಲಿ ನಡೆಸಿದ ರಸ್ತಾರೋಕೊ ಕಾಲಕ್ಕೆ ಉದ್ರಿಕ್ತ ಜನರನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು, ಲಾಠಿ ಪ್ರಹಾರ ಮತ್ತು ಅಶ್ರುವಾಯು ಸಿಡಿಸಿರುವುದಾಗಿ ಇಲ್ಲಿಗೆ ಬಂದಿರುವ ವರದಿ ತಿಳಿಸಿದೆ.

50 ವರ್ಷಗಳ ಹಿಂದೆ

ಸೋಮವಾರ, 5-4-1971

• **ಸೂಕ್ತ ಸಮಯದಲ್ಲಿ ಬಾಂಗ್ಲಾದೇಶ ಮಾನ್ಯತೆ**

ನವದೆಹಲಿ, ಏ. 4– ಬಾಂಗ್ಲಾದೇಶದ ಹಂಗಾಮಿ ಸರ್ಕಾರಕ್ಕೆ ಮಾನ್ಯತೆ ಮತ್ತು ಅಲ್ಲಿನ ಸ್ವಾತಂತ್ರ್ಯ ಯೋಧರಿಗೆ ನಿರ್ದಿಷ್ಟ ನೆರವು ನೀಡಬೇಕೆಂದು ಇಂದು ಅಖಿಲ ಭಾರತ ಆಡಳಿತ ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ಉದ್ರಿಕ್ತ ಸದಸ್ಯರು ಪಟ್ಟು ಹಿಡಿದು ಆಗ್ರಹ ಮಾಡಿದರೂ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಾಗಲಿ, ವಿದೇಶಾಂಗ ಸಚಿವ ಶ್ರೀ ಸ್ವರಣಸಿಂಗರಾಗಲಿ ಅದಕ್ಕೆ ಸ್ಪಷ್ಟ ಪ್ರತಿಕ್ರಿಯೆ ಸೂಚಿಸಲಿಲ್ಲ.

ಆದರೆ ‘ಸೂಕ್ತ ಸಮಯದಲ್ಲಿ’ ಮಾನ್ಯತೆ ನೀಡುವುದಾಗಿ ಶ್ರೀ ಸ್ವರಣ ಸಿಂಗ್ ಹೇಳಿ ಸದಸ್ಯರನ್ನು ಸ್ವಲ್ಪ ಸಮಾಧಾನಪಡಿಸಿದರು.

‘ಇಂತಹ ಕ್ರಮಗಳಲ್ಲಿ ಅವಸರ ಬಿದ್ದರೆ, ನಮ್ಮ ಉದ್ದೇಶವೇ ವಿಫಲವಾಗುತ್ತದೆ’ ಎಂದು ಅವರು ಉತ್ತರ ಕೊಟ್ಟರು.

• **ಸಸ್ಯ ರೋಗಲಕ್ಷಣ ವಿಶ್ಲೇಷಣೆ ಅಂತರ ರಾಷ್ಟ್ರೀಯ ಅಧ್ಯಯನ ಕೇಂದ್ರ ಸ್ಥಾಪನೆಗೆ ಸಿದ್ಧತೆ**

ಧಾರವಾಡ, ಏ. 4– ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ಕೃಷಿ ಸಂಶೋಧನೆಗೆ ಮೂಲ ಕೇಂದ್ರವಾಗಿ ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಸ್ಯ ರೋಗ ಲಕ್ಷಣ ವಿಶ್ಲೇಷಣೆಯ ಉನ್ನತ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಕೆ.ಸಿ.ನಾಯಕ್ ಅವರು ಇಂದು ಇಲ್ಲಿ ತಿಳಿಸಿದರು.

ಸಂಗತ

ಕೇಳುತ್ತಿದೆಯೇ?... ಆತ್ಮಸಾಕ್ಷಿಯ ಪಿಸುಮಾತು

ಆತ್ಮಸಾಕ್ಷಿಯನ್ನು ಜಾಗೃತಗೊಳಿಸಬೇಕಾಗಿರುವುದು ವರ್ತಮಾನದ ತುರ್ತು

• ಡಾ. ಜ್ಯೋತಿ

ನಮ್ಮ ಸುತ್ತಲಿನ ಜಗತ್ತಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ವರ್ತಮಾನದ ಕಾಲಘಟ್ಟದಲ್ಲಿ ಮನುಷ್ಯನ ಆತ್ಮಸಾಕ್ಷಿಯ ಪಿಸುಮಾತು ಉಚ್ಚಸ್ವರ ಪಡೆಯಬೇಕಾದ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ ಎನಿಸುತ್ತದೆ. ಆದರೆ, ಪ್ರಸ್ತುತದ ಅಬ್ಬರ ಮತ್ತು ವಸ್ತುಮೋಹಿ ಪ್ರಪಂಚದಲ್ಲಿ ಮನುಷ್ಯನ ಪರಮೋಚ್ಚ ಶಕ್ತಿಯಾದ ಆತ್ಮಸಾಕ್ಷಿ ಮೌನವಾಗಿರುವುದು ಸ್ಪಷ್ಟವಾಗುತ್ತದೆ.

ಹಾಗಿದ್ದಲ್ಲಿ, ಆತ್ಮಸಾಕ್ಷಿಯೆಂದರೇನು? ಇದನ್ನು ಮನುಷ್ಯನ ನೈತಿಕ ಪ್ರಜ್ಞೆ, ಸ್ವಅರಿವು, ವೈಚಾರಿಕತೆ ಮತ್ತು ಸ್ವವಿಶ್ಲೇಷಣಾ ಸಾಮರ್ಥ್ಯದ ಮಿಶ್ರಣವೆನ್ನಬಹುದು. ಈ ಪ್ರಜ್ಞೆ ಮೂಲತಃ ಮನುಷ್ಯನಲ್ಲಿತ್ತೇ ಎನ್ನುವುದನ್ನು ಅರಸುತ್ತಾ ಹೋದರೆ, ಬುಡಕಟ್ಟು ಜನಾಂಗಗಳಲ್ಲಿ ಇದಕ್ಕೆ ಬಹಳಷ್ಟು ಪುರಾವೆಗಳನ್ನು ಕಾಣಬಹುದು. ಉದಾಹರಣೆಗೆ, ಬೇಟೆಗೆ ಜೊತೆಯಾಗಲು ಸಾಧ್ಯವಾಗದ ಅನಾರೋಗ್ಯಪೀಡಿತ ಸಹವರ್ತಿಗಳಿಗೂ ಬೇಟೆಯ ಪಾಲು ಕೊಡುತ್ತಿದ್ದುದು, ಆಹಾರಕ್ಕಾಗಿ ಕಿತ್ತ ಗೆಡ್ಡೆಯ ಜಾಗದಲ್ಲಿ ಅದರ ಮೊಗ್ಗುಗಳನ್ನು ನೆಡುತ್ತಿದ್ದುದು, ಭೂಮಿಯಿಂದ ದೈನಂದಿನ ಅಗತ್ಯಗಳನ್ನಷ್ಟೇ ಪಡೆದು, ಸಲಹುತ್ತಿರುವ ಭೂಮಿಯನ್ನು ಕೃತಜ್ಞತೆಯಿಂದ ಗೌರವಿಸುತ್ತಿದ್ದುದು... ಹೀಗೆ, ಅನಕ್ಷರಸ್ಥನಾಗಿದ್ದ ಕಾಲದಲ್ಲಿ ಮನುಷ್ಯನ ಆತ್ಮಸಾಕ್ಷಿ ಜಾಗೃತವಾಗಿತ್ತು ಎನ್ನಬಹುದು.

ಆದರೆ, ಕಾಲಕಳೆದಂತೆ ಮನುಷ್ಯನು ತಂತ್ರಜ್ಞಾನ ಆಧಾರಿತ ಕೌಶಲಗಳನ್ನು ಬೆಳೆಸಿಕೊಂಡಂತೆ ಸ್ವಹಿತಾಸಕ್ತಿಗಳು ಹೆಚ್ಚಾಗಿ, ಆತ್ಮಸಾಕ್ಷಿ ಮಸುಕಾಗುತ್ತಿರುವುದನ್ನು ಗಮನಿಸಬಹುದು. ಈ ಪ್ರವೃತ್ತಿಯು ಮನುಷ್ಯನಿಗೆ, ಭೂಮಿಯ ಮೇಲಿನ ತನ್ನ ಜೀವನ ಅನಿಶ್ಚಿತವೆನ್ನುವ ಅರಿವಿನ ನಡುವೆಯೂ ಸ್ವಹಿತಕ್ಕಾಗಿ ಅಗಾಧ ಪ್ರಮಾಣದ ಸಂಪಾದನೆ ಮಾಡಲು ಪ್ರೇರೇಪಿಸುತ್ತದೆ. ಜೊತೆಗೆ, ಸುತ್ತಲಿನ ಜಗತ್ತಿನ ಹಸಿವು, ದಾರಿದ್ರ್ಯ, ಕಷ್ಟನಷ್ಟಗಳು ಆತ್ಮಸಾಕ್ಷಿಯನ್ನು ಕಾಡುವುದಿಲ್ಲ.

ಪ್ರಸ್ತುತ, ಆತ್ಮಸಾಕ್ಷಿಯ ಕೊರತೆ ವರ್ತಮಾನ ಜಗತ್ತಿನ ಸಮೂಹ ಸನ್ನಿ. ಉದಾಹರಣೆಗೆ, ವರ್ತಮಾನದ ಹೆಚ್ಚಿನ ರಾಜಕಾರಣಿಗಳು ಸ್ವಹಿತ ಸಾಧಿಸಲೆಂದೇ ಪಕ್ಷಗಳನ್ನು ಸೇರುತ್ತಾರೆ ಮತ್ತು ಹಣದ ಪ್ರಭಾವದಿಂದ ಉನ್ನತ ಸ್ಥಾನ ಅಲಂಕರಿಸುತ್ತಾರೆ. ಹಲವರಲ್ಲಿ ಸಿದ್ಧಾಂತಗಳ ಗಂಧಗಾಳಿಯೂ ಇಲ್ಲ, ನಿರಾಯಾಸವಾಗಿ ಪಕ್ಷ ಬದಲಾಯಿಸಿ ಸ್ವಹಿತ ಕಾಪಾಡಿಕೊಳ್ಳುತ್ತಾರೆ.

ಆತ್ಮಸಾಕ್ಷಿಯ ಆಯಾಮದಿಂದ, ನಾವು ಜಗತ್ತಿನ ಭವಿಷ್ಯ ನಿರ್ಧರಿಸುವ ಮಕ್ಕಳನ್ನು ಗಮನಿಸಿದರೆ, ಯಾವುದೇ ಆಶಾದಾಯಕ ಬೆಳವಣಿಗೆಯನ್ನು ಕಾಣುವುದಿಲ್ಲ. ಯಾಕೆಂದರೆ, ಹೆತ್ತವರೂ ಒಳಗೊಂಡಂತೆ ಈಗಿನ ಪ್ರಪಂಚವು ಅವರನ್ನು ತಯಾರು ಮಾಡುತ್ತಿರುವುದು ಸ್ಪರ್ಧಾತ್ಮಕ ಪ್ರಪಂಚದಲ್ಲಿ ಉಳಿದವರನ್ನು ಹಿಂದಿಕ್ಕಿ ನಾಗಾಲೋಟದಲ್ಲಿ ಮುನ್ನುಗ್ಗುವುದಕ್ಕೆ ಮಾತ್ರ. ಅವರ ಆತ್ಮಸಾಕ್ಷಿ ಉದ್ದೀಪನಗೊಳಿಸುವ ಯಾವ ತರಬೇತಿಯೂ ಸಿಗುತ್ತಿಲ್ಲ. ಯಾಕೆಂದರೆ, ಇಂದಿನ ಪೋಷಕರಿಗೆ, ಮಕ್ಕಳ ತಪ್ಪು ಒಪ್ಪುಗಳನ್ನು ತಿದ್ದಲು ಸಮಯವಿಲ್ಲ. ಈ ದಿಸೆಯಲ್ಲಿ, ಮಕ್ಕಳ ಪಠ್ಯಕ್ರಮಗಳು ಬರೀ ಕೌಶಲಗಳನ್ನಷ್ಟೇ ಉದ್ದೀಪನಗೊಳಿಸದೆ, ಆತ್ಮಸಾಕ್ಷಿಯನ್ನು ಜಾಗೃತವಾಗಿ ಇಡಬೇಕಾದುದು ಇಂದಿನ ಅಗತ್ಯ. ಯಾಕೆಂದರೆ, ಆತ್ಮಸಾಕ್ಷಿರಹಿತ ವಿದ್ವತ್ತು ಸಮಾಜಕ್ಕೆ ನಿರರ್ಥಕ ಮಾತ್ರವಲ್ಲ ಅಪಾಯಕಾರಿ ಕೂಡ.

ತತ್ವಜ್ಞಾನಿ ನೀಷೆ ಪ್ರಕಾರ ಆತ್ಮಸಾಕ್ಷಿಯೆಂದರೆ, ಮೌಲ್ಯಾಧಾರಿತವಾಗಿ ಬದುಕಬೇಕೆಂಬ ಎಚ್ಚರ. ಈ ಮೌಲ್ಯಗಳೆಂದರೆ ನಮ್ಮ ಸಾಮಾಜಿಕ ಜವಾಬ್ದಾರಿಗಳ ಅರಿವು. ವಿಶೇಷವೆಂದರೆ, ನಮ್ಮ ದೈನಂದಿನ ಜೀವನದ ಹೆಚ್ಚಿನ ಘಟನಾವಳಿಗಳು ಆತ್ಮಸಾಕ್ಷಿಯನ್ನು ಕಲಕದೆ ಮರೆತು ಮುಂದೆ ಸಾಗುತ್ತೇವೆ.



ನೀಷೆ ಹೇಳುವಂತೆ, ನೋವು ಕೊಡುವ ಅನುಭವವು ಆತ್ಮಸಾಕ್ಷಿಯನ್ನು ಎಚ್ಚರಿಸುತ್ತದೆ. ಉದಾಹರಣೆಗೆ, ಕೆಲವೊಮ್ಮೆ ಸಾಮಾಜಿಕ ಮೌಲ್ಯಗಳು ನಮ್ಮ ವೈಯಕ್ತಿಕ ಮೌಲ್ಯಗಳೊಂದಿಗೆ ಸಂಘರ್ಷಕ್ಕಿಳಿದಾಗ, ಆತ್ಮಸಾಕ್ಷಿಯು ಎರಡು ರೀತಿಯಲ್ಲಿ ಸ್ಪಂದಿಸಲು ಪ್ರೇರೇಪಿಸಬಹುದು. ಮನುಷ್ಯ ದ್ವೀಪವಾಗಿರದೆ ಸಮುದಾಯ ಜೀವಿಯಾಗಿರುವುದರಿಂದ, ಈ ರೀತಿಯ ಸಂಘರ್ಷ ಮನುಷ್ಯನಿಂದ ವಿಧ್ವಂಸಕ ಕೃತ್ಯಗಳನ್ನು ಮಾಡಿಸಬಹುದು. ಉದಾಹರಣೆಗೆ, ಇತಿಹಾಸದಲ್ಲಿ ದಾಖಲಾಗಿರುವ ಎಲ್ಲ ನಿರಂಕುಶ ಪ್ರಭುಗಳ ನಡವಳಿಕೆ. ಆದರೆ ಕೆಲವೊಮ್ಮೆ ಈ ವೈಯಕ್ತಿಕ ಸಂಘರ್ಷವು ಸಾಮಾಜಿಕ ಸುಧಾರಣೆಗೆ ಮುನ್ನುಡಿಯಾಗಬಹುದು. ಉದಾಹರಣೆಗೆ, ಬುದ್ಧ, ಯೇಸು ಕ್ರಿಸ್ತ, ಬಸವಣ್ಣ, ಗಾಂಧಿ... ಹೀಗೆ, ಒಬ್ಬ ವ್ಯಕ್ತಿಯ ಆತ್ಮಸಾಕ್ಷಿಯು ಜನಸಮೂಹವನ್ನು ಬಡಿದೆಬ್ಬಿಸಿ ಹೊಸ ಶಕೆಗೆ ಕಾರಣವಾಗಬಹುದು. ಉದಾಹರಣೆಗೆ, ಅಮೆರಿಕದಲ್ಲಿ ಇತ್ತೀಚೆಗೆ ಜಾರ್ಜ್ ಫ್ಲಾಯ್ಡ್ ಹತ್ಯೆಯ ನಂತರ ‘ಬ್ಲ್ಯಾಕ್ ಲೈವ್ಸ್ ಮ್ಯಾಟರ್’ ಜನಜಾಗೃತಿ ಆಂದೋಲನ ಆರಂಭವಾದಂತೆ, ಸದ್ಯ ಭಾರತದಲ್ಲಿ ಕೃಷಿ ಕಾಯ್ದೆ ವಿರುದ್ಧ ಆರಂಭವಾದ ಪ್ರತಿಭಟನೆಯು ದೇಶದಾದ್ಯಂತ ಪಸರಿಸುತ್ತಿರುವ ಹಾಗೆ, ಮನುಷ್ಯನ ಆತ್ಮಸಾಕ್ಷಿಯ ಜಾಗೃತಿ ಸಾಮಾಜಿಕ ಅಥವಾ ರಾಜಕೀಯ ಪರಿವರ್ತನೆಗಳನ್ನು ತರಬಲ್ಲದು.

ಕೊನೆಯದಾಗಿ, ಕುವೆಂಪು ಅವರ ಸಾಲು ‘ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?’ ಕೂಡ ಆತ್ಮಸಾಕ್ಷಿಯ ಮಹತ್ವವನ್ನು ಹೇಳುತ್ತದೆ. ಏಪ್ರಿಲ್ 5 ಅನ್ನು ‘ವಿಶ್ವ ಆತ್ಮಸಾಕ್ಷಿಯ ದಿನ’ವೆಂದು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯು 2020ರ ಏಪ್ರಿಲ್ 5ರಂದು ಪ್ರಥಮ ವಿಶ್ವ ಆತ್ಮಸಾಕ್ಷಿಯ ದಿನವನ್ನು ಆಚರಿಸಿತು.

ಜಗತ್ತಿನಲ್ಲಿ ನಡೆಯುತ್ತಿರುವ ಬಹುತೇಕ ಅಪರಾಧಗಳು ಮನುಷ್ಯನ ಆತ್ಮಸಾಕ್ಷಿಯ ಕೊರತೆಯಿಂದಲೇ ಆಗುತ್ತಿರುವುದೆಂದು ಮನಗಂಡು, ಶಾಂತಿ ಮತ್ತು ಪ್ರೀತಿಯ ಮೂಲಕ ಆತ್ಮಸಾಕ್ಷಿಯನ್ನು ಜಾಗೃತಗೊಳಿಸುವ ದಿಸೆಯಲ್ಲಿ ಈ ದಿನವನ್ನು ಆಚರಿಸಲಾಗುತ್ತಿದೆ. ಈ ಜಾಗೃತಿಯು ಜನರಲ್ಲಿ ಸಹನೆ, ಸಹಬಾಳ್ವೆ ಮತ್ತು ಬಹುತ್ವದ ಸ್ವೀಕಾರವನ್ನು ಉದ್ದೀಪನಗೊಳಿಸಲಿ ಎನ್ನುವುದೇ ಈ ದಿನಾಚರಣೆಯ ಮೂಲ ಆಶಯ.

ವಾಚಕರ ವಾಣಿ

ಅನುಭವದ ಮಾತು!

‘ಮಮತಾ ದೀದಿ ನೀವು ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೀರಿ ಎಂಬ ವದಂತಿಗಳಿವೆ. ಅದು ನಿಜವೇ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದ ನಂದಿಗ್ರಾಮ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಮಮತಾ ಬ್ಯಾನರ್ಜಿಯವರನ್ನು ಉದ್ದೇಶಿಸಿ ಚುನಾವಣಾ ಪ್ರಚಾರದ ವೇಳೆ ವ್ಯಂಗ್ಯವಾಡಿದ್ದಾರೆ (ಪ್ರ.ವಾ., ಏ. 3). 2014ರ ಲೋಕಸಭಾ ಚುನಾವಣೆಗೆ ಎರಡು ಕ್ಷೇತ್ರಗಳಲ್ಲಿ (ವಾರಾಣಸಿ, ವಡೋದರ) ಅವರು ಸ್ಪರ್ಧಿಸಿದ್ದರಿಂದಲೇ ಈ ತರಹ ಹೇಳಿರಬಹುದು! ಯಾವತ್ತೂ ನೆನಪುಗಳು ಬಹಳ ಮುಖ್ಯ. ತಮ್ಮ ಅನುಭವದ ಮೇರೆಗೆ ಇಂತಹ ಸಲಹೆಯನ್ನು ಕೊಟ್ಟಿರಲೂಬಹುದು!

ನಿಖಿತಾ ಶಶಾಂಕ್ ಭಟ್, ಹೊಸನಗರ

ನಿರ್ಬಂಧ ಜಾರಿ: ಜನಹಿತ ಇರಲಿ

ಕೊರೊನಾ ಹಾವಳಿ ತಗ್ಗಿಸಲು ರಾಜ್ಯದ 8 ಜಿಲ್ಲೆಗಳಲ್ಲಿ ಸರ್ಕಾರ ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ. ಚಿತ್ರಮಂದಿರಗಳಲ್ಲಿ ಶೇ 50ರಷ್ಟು ಸೀಟುಗಳು ಮಾತ್ರ ಭರ್ತಿ ಎಂಬ ನಿಯಮವನ್ನು ಕೇವಲ 24 ಗಂಟೆಗಳಲ್ಲಿ ‘ಯುವರತ್ನ’ ಚಿತ್ರತಂಡದ ಕಡು ಒತ್ತಾಯದ ಮೇರೆಗೆ ಏಪ್ರಿಲ್ 7ರವರೆಗೆ ಮುಂದೂಡಿ ನಗೆಪಾಟಲಿಗೀಡಾಗಿದೆ. ಜನಸಾಮಾನ್ಯರ ಕಷ್ಟ ಕೋಟಲೆಗಳನ್ನರಿಯದೆ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಕಂಪ್ಯೂಟರ್ ಲೆಕ್ಕಾಚಾರದ ಮೂಲಕ ನಿಯಮಗಳನ್ನು ನಿರ್ಧರಿಸುವ ಅಧಿಕಾರಿಗಳ ಸಲಹೆಗಳನ್ನು ಸರ್ಕಾರ ವಿವೇಚನಾರಹಿತವಾಗಿ ಜಾರಿಗೆ ತರುತ್ತಿದೆ.

ಈಜುಕೊಳ ಬಂದ್ ಒಂದರ್ಥದಲ್ಲಿ ಸರಿ. ಆದರೆ ಸಾಮಾಜಿಕ ಅಂತರವಿದ್ದು ವಿರಳವಾಗಿ ಜನ ಸೇರುವ ಜಿಮ್‌ಗಳಿಗೇಕೆ ನಿಷೇಧ? ಮನೆಯಲ್ಲಿ ಒಂದೆಡೆ ವಾಸಿಸುವ ಪತಿ, ಪತ್ನಿ, ಮಕ್ಕಳು ಚಿತ್ರಮಂದಿರಗಳಲ್ಲಿ ದೂರ ದೂರ ಕೂರಬೇಕೇ? ಕೊರೊನಾ ಹರಡುವುದು ಉಸಿರು, ಬಾಯಿ ಹಾಗೂ ಕೈನಿಂದ ತಾನೇ? ಮುಖಕ್ಕೆ ಮಾಸ್ಕ್ ಹಾಗೂ ಕೈಗಳಿಗೆ ಕೈಗವಸು ಕೊಟ್ಟು ‘ಹೌಸ್‌ಫುಲ್’ ಪ್ರದರ್ಶನ ಮಾಡಬಹುದಲ್ಲವೇ? ಸಾರಿಗೆ ಬಸ್‌ಗಳಲ್ಲಿ ನಿಂತು ಪ್ರಯಾಣ ಮಾಡುವವರನ್ನು ಮಾತ್ರ ಕೊರೊನಾ ಬಾಧಿಸುವುದೇ? ಈ ಕಠಿಣ ನಿಯಮಗಳಿಗೆ ಸಂಬಂಧಿಸಿದ ಆದೇಶ ಹೊರಡಿಸಿದ ಮಾರನೇ ದಿನವೇ ಜನನಾಯಕರು ಹಾಗೂ ಆರೋಗ್ಯ ಸಚಿವರು ನಡೆಸಿದ ಸಮಾರಂಭಗಳಲ್ಲಿ ಸಾವಿರಾರು ಜನ ಎಗ್ಗಿಲ್ಲದೇ ತುಂಬಿ ತುಳುಕುತ್ತಿದ್ದರು. ಚುನಾವಣಾ ರ್‍ಯಾಲಿಗಳೂ ಆರಂಭವಾಗಿವೆ. ಇದೆಂಥ ನ್ಯಾಯ? ಜನರಿಗೊಂದು, ರಾಜಕಾರಣಿಗಳಿಗೆ ಮತ್ತೊಂದೇ? ಸರ್ಕಾರ ಜನಹಿತ ಯೋಚಿಸಿ ನಿರ್ಬಂಧಗಳನ್ನು ಜಾರಿಗೆ ತರಲಿ.

ಕೆ.ಶ್ರೀನಿವಾಸ ರಾವ್, ಹರಪನಹಳ್ಳಿ

ಜೀವ ಇದ್ದರೆ ಸಿನಿಮಾ

ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿದೆ. ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ಕಠಿಣ ನಿಯಮಗಳನ್ನು ಜಾರಿಗೆ ತರಬೇಕು. ಸಿನಿಮಾ ಮಂದಿರಗಳಿಗೆ ಶೇ 50ರಷ್ಟು ಸೀಟು ಭರ್ತಿಗೆ ಮಾತ್ರ ಅವಕಾಶ ಕಲ್ಪಿಸುವ ನಿಯಮ ತಂದರೂ ಕೆಲವರ ಒತ್ತಡಕ್ಕೆ ಮಣಿದು ಅದನ್ನು ಹಿಂದಕ್ಕೆ ಪಡೆದಿರುವುದು ವಿಷಾದನೀಯ. ಸಿನಿಮಾ ಮಂದಿಯೂ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬೇಕು. ಜನರ ಜೀವ ಇದ್ದರೆ ಸಿನಿಮಾ. ಅವರ ಜೀವವೇ ನಷ್ಟ ಆಗುವುದಾದರೆ ಯಾರಿಗಾಗಿ ಸಿನಿಮಾ?

ಸರ್ಕಾರ ಯಾರ ಒತ್ತಡಕ್ಕೂ ಮಣಿಯದೆ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಸಾರ್ವಜನಿಕರು ಸೇರಿದಂತೆ ಎಲ್ಲರೂ ಸಮಸ್ಯೆಯ ಗಂಭೀರತೆ ಅರ್ಥ ಮಾಡಿಕೊಂಡು ಕೋವಿಡ್ ನಿಯಂತ್ರಣಕ್ಕೆ ಸಹಕಾರ ನೀಡಲಿ.

ಡಾ. ರುದ್ರೇಶ್ ಅದರಂಗಿ, ಬೆಂಗಳೂರು

ಇಂದಿರಾ ಕ್ಯಾಂಟೀನ್ ಮತ್ತು ರಾಜಕೀಯ ದ್ವೇಷ

‘ಅತ್ತೆಯ ಮೇಲಿನ ಕೋಪ ಕೊತ್ತಿಯ ಮೇಲೆ’ ಎಂಬಂತೆ ಸಿದ್ದರಾಮಯ್ಯನವರ ಮೇಲಿನ ರಾಜಕೀಯ ದ್ವೇಷವನ್ನು ಇಂದಿರಾ ಕ್ಯಾಂಟೀನ್ ಮೇಲೆ ಚಲಾಯಿಸಿ, ಮುಖ್ಯಮಂತ್ರಿ ಯಡಿಯೂರಪ್ಪನವರು ದುರ್ಬಲ ವರ್ಗಗಳ ‘ಅನ್ನ ಭಾಗ್ಯ’ದ ತುತ್ತನ್ನು ಕಿತ್ತುಕೊಳ್ಳುವ ರಾಜಕೀಯವನ್ನು ಮಾಡುತ್ತಿದ್ದಾರೆ ಎಂದು ‘ಇಂದಿರಾ ಕ್ಯಾಂಟೀನ್’ನ ಆಹಾರ ವಂಚಿತರು ದೂಷಿಸುತ್ತಿದ್ದಾರೆ. ಕೊರೊನಾ ಸಂಕಷ್ಟ ಕಾಲದಲ್ಲಿ ದಿನಗೂಲಿಯೂ ಸಿಗದೆ ಹಸಿವಿನಿಂದ ಕಂಗಾಲಾಗಿದ್ದ ಅಸಂಖ್ಯಾತ ದುರ್ಬಲ ವರ್ಗದ ಶ್ರಮಜೀವಿಗಳಿಗೆ ಅಗ್ಗದ ಬೆಲೆಯಲ್ಲಿ ದೊರಕುತ್ತಿದ್ದ ಇಂದಿರಾ ಕ್ಯಾಂಟೀನ್ ಆಹಾರ ಜೀವನಾಧಾರವಾಗಿತ್ತು. ಆದರೆ ಈಗ ರಾಜ್ಯ ಸರ್ಕಾರದ ಅನಾದರ ಹಾಗೂ ವಿರೋಧ ಪಕ್ಷದ ಮೇಲಿನ ಅದರ ರಾಜಕೀಯ ದ್ವೇಷದಿಂದಾಗಿ ನಿರ್ಗತಿಕರು ನರಳುವಂತಾಗಿದೆ.

ಬಿ.ಎಂ.ಮಹಾದೇವ ಮೂರ್ತಿ, ಮೈಸೂರು

ಮೊಬೈಲ್ ವಾಹನದಲ್ಲಿ ಲಸಿಕೆ ವ್ಯವಸ್ಥೆಯಾಗಲಿ

45 ವರ್ಷ ಮೇಲ್ಪಟ್ಟ ವ್ಯಕ್ತಿಗಳಿಗೆ ಇತ್ತೀಚೆಗೆ ಕೋವಿಡ್ ಲಸಿಕೆ ನೀಡಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ ವಿಚಾರ. ಆದರೆ ಎಲ್ಲರೂ ಆರೋಗ್ಯ ಕೇಂದ್ರಕ್ಕೇ ಬಂದು ತೆಗೆದುಕೊಳ್ಳುವುದು ಕಷ್ಟಕರ. ವಯಸ್ಸಾದವರಿಗೆ ಆರೋಗ್ಯ ಕೇಂದ್ರಗಳಿಗೆ ತೆರಳಲು ಆಗುವುದಿಲ್ಲ. ಅದರ ಬದಲು ಸಂಚಾರಿ ವಾಹನವನ್ನು ಜನರು ಇರುವ ಕಡೆಗೇ ತೆಗೆದುಕೊಂಡು ಹೋಗಿ, ನರ್ಸ್‌ಗಳು, ಅಂಗನವಾಡಿ ಶಿಕ್ಷಕಿಯರು, ಶಾಲಾ ಶಿಕ್ಷಕರು, ಗ್ರಾಮ ಪಂಚಾಯಿತಿ ಸದಸ್ಯರ ನೆರವಿನಿಂದ ಜನರಿಗೆ ಲಸಿಕೆ ನೀಡುವಂತಾದರೆ ಲಸಿಕೆ ನೀಡಿಕೆ ಕಾರ್ಯಕ್ರಮವನ್ನು ಇನ್ನಷ್ಟು ಯಶಸ್ವಿಗೊಳಿಸಬಹುದು.

ಅ.ಮೃತ್ಯುಂಜಯ, ಪಾಂಡವಪುರ

ಸಮಷ್ಟಿ ಪ್ರಜ್ಞೆ ಅಗತ್ಯ

ರಾಜ್ಯ ಸರ್ಕಾರವು ಕೋವಿಡ್-19 ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತೆಗೆದುಕೊಂಡಿರುವ ಕಠಿಣ ನಿಯಮಗಳ ವಿರುದ್ಧ ನಿರ್ಮಾಪಕ ಕೆ.ಮಂಜು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೊರೊನಾದಂತಹ ಮಹಾಸೋಂಕಿನಿಂದ ಜನರನ್ನು ಕಾಪಾಡುವ ದೃಷ್ಟಿಯಿಂದ ಇಂತಹ ಕಠಿಣ ಮಾರ್ಗಗಳು ಕೆಲವೊಮ್ಮೆ ಅನಿವಾರ್ಯವಾಗುತ್ತವೆ. ಇಂತಹ ಸಂದರ್ಭಗಳಲ್ಲಿ ವೈಯಕ್ತಿಕವಾಗಿ ನಷ್ಟವಾದರೂ ಸಾಮಾಜಿಕ ಹಿತದೃಷ್ಟಿಯಿಂದ ಸಹಕರಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂಬುದನ್ನು ಮರೆಯಬಾರದು. ನಿರ್ಮಾಪಕರಿಗೆ ಹಾಕಿದ ಬಂಡವಾಳ ವಾಪಸು ಪಡೆಯುವ ಮತ್ತು ಲಾಭ ಮಾಡಿಕೊಳ್ಳುವ ಅಪೇಕ್ಷೆ ಇರುವುದು ಸಹಜ. ಹಾಗೆಂದು, ಅಂಥ ಕೆಲವರ ವ್ಯಾಪಾರಕ್ಕಾಗಿ ಒಟ್ಟಾರೆ ಸಮಾಜದ ಹಿತವನ್ನು ಬಲಿಗೊಡಲಾಗದು.

ಬಸೆಟ್ಟೆಪ್ಪ ಡಿ.ಎಂ., ಕುರುಗೋಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾವೇರಿ: ವ್ಯವಹಾರ ಮುಂದು, ವಿವಾದ ಹಿಂದು

• ಗಂಗಾಧರ ಮೊದಲಿಯಾರ್

ನದಿಗಳು ನಾಗರಿಕತೆಯನ್ನು ಕಟ್ಟಿವೆ. ಆದರೆ ನದಿ ನೀರು ವಿವಾದಗಳು ಅನಾಗರಿಕತೆಯನ್ನು ಪೋಷಿಸುತ್ತಿವೆ. ಹರಿಯುವ ನೀರಿಗೆ ಯಾವ ದೊಣೆನಾಯಕನ ಅಪ್ಪಣೆಯೂ ಬೇಕಿಲ್ಲ ಎನ್ನುವಕಾಲ ಒಂದಿತ್ತು, ಆದರೆ ಹರಿಯುವ ನೀರಿಗೆ ತಡೆಗೋಡೆ ಹಾಕಿ ಹಂಚಿಕೊಳ್ಳುವುದೇ ಈಗ ರಾಷ್ಟ್ರೀಯ ಸಮಸ್ಯೆಯಾಗಿದೆ. ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವೆ ಪ್ರತೀ ಬೇಸಿಗೆಯಲ್ಲಿ ಕಾವೇರಿ ಕಿಡಿ ಹಾರುತ್ತದೆ. ಎರಡೂ ರಾಜ್ಯಗಳ ಅಭಿಮಾನಿಗಳ ಮೈಯಲ್ಲಿ ಇನ್ನಿಲ್ಲದ ಕಿಚ್ಚು ಆವಾಹನೆಯಾಗಿ, ಮಳೆ ಸುರಿದ ತರುವಾಯ ತಣ್ಣಗಾಗುತ್ತದೆ. ಈ ವಿಷಯದಲ್ಲಿ ಎದ್ದು ಕಾಣುವುದು ಹುಚ್ಚಾಭಿಮಾನ ಮಾತ್ರ. ಅದರಲ್ಲಿ ಎರಡು ರೀತಿಯ ಪ್ರತಿಕ್ರಿಯೆ ಗಮನಿಸಬಹುದು. ಕೆಲವೊಮ್ಮೆ ಅದು ಸಾತ್ವಿಕ. ಮತ್ತೊಂದೆಡೆ ಅದು ಪೈಶಾಚಿಕಕೃತ್ಯ. ಕಾವೇರಿ ನದಿ ನೀರು ವಿವಾದ ಭುಗಿಲೆದ್ದಾಗಲೆಲ್ಲ ಇಂತಹ ವಿದ್ಯಮಾನಗಳನ್ನು ನಾವು ಗಮನಿಸುತ್ತಲೇ ಬಂದಿದ್ದೇವೆ.

ನೆಲ ಜಲ ವಿವಾದ ಉದ್ಭವಿಸಿದಾಗಲೆಲ್ಲ ಎದ್ದುಕಾಣುವುದು ನಮ್ಮ ನೆಲದ ಮೇಲಿನ ಅಭಿಮಾನ. ನದಿಗಳೇ ಕಟ್ಟಿದ ನಾಗರಿಕತೆ ಅದರೊಂದಿಗೇ ಸಂಸ್ಕೃತಿಯನ್ನೂ ರೂಪಿಸುತ್ತದೆ. ನದಿ ವಿವಾದಗಳು ಭುಗಿಲೆದ್ದಾಗ ಎಲ್ಲ ಸಂಸ್ಕೃತಿಗಳೂ ಪಕ್ಕಕ್ಕೆ ಸರಿದು, ಕುರುಡು ಅಭಿಮಾನವೊಂದೇ ಮೆರೆದು ಅದು ಗಲಭೆಯ, ಆಸ್ತಿನಷ್ಟದ ಕುರುಡುಮಾರ್ಗದತ್ತ ನಮ್ಮನ್ನು ನಡೆಸುತ್ತದೆ. ಅದರಲ್ಲೂ ಕಾವೇರಿ ವಿವಾದದ ಪ್ರಶ್ನೆ ಬಂದಾಗಲೆಲ್ಲ, ಭಾಷಾಭಿಮಾನವೂ ಎದ್ದು ನಿಲ್ಲುತ್ತದೆ. ಭಾಷಾದ್ವೇಷದ ಹೊಗೆ ಏಳುತ್ತದೆ. ಆಗ ಇದ್ದಕ್ಕಿದ್ದಂತೆ ಸೆಲಬ್ರೆಟಿಗಳ, ದಿಢೀರ್ ಮುಖಂಡರ ಪ್ರವೇಶವಾಗುತ್ತದೆ.

ಅವರು ನೇತೃತ್ವವನ್ನೂ ವಹಿಸಿಕೊಳ್ಳಬಹುದು, ಪ್ರಚೋದಿಸಲೂಬಹುದು. ಕನ್ನಡ, ಕರ್ನಾಟಕ ಮತ್ತು ಕನ್ನಡ ಸಂಸ್ಕೃತಿಗಳ ಮೇಲೆ ಅನ್ಯಾಕ್ರಮಣ ನಡೆದಾಗಲೆಲ್ಲ ಅನೇಕರು ಅದಕ್ಕೆ ಉತ್ತರಿಸಲು ಮುಂದೆ ಬಂದಿರುವ ಉದಾಹರಣೆ ಇದೆ. ಆದರೆ ಅವರೆಲ್ಲರೂ ತಮ್ಮ ಇತಿಮಿತಿಗಳನ್ನು ಅರಿತು ಕಾರ್ಯಾಚರಣೆ ಮಾಡುತ್ತಾರೆ. ಆದರೆ ಕನ್ನಡ ಭಾಷೆಯೊಂದಿಗೆ, ಕರ್ನಾಟಕದ ವಿಚಾರದೊಂದಿಗೆ,ಕರ್ನಾಟಕ ಸಂಸ್ಕೃತಿಯೊಂದಿಗೆ ತಾದಾತ್ಮ್ಯ ಹೊಂದಿ ಬದ್ಧತೆಯೊಂದಿಗೆ ಬೀದಿಗಿಳಿದವರು ಕೆಲವೇ ಮಂದಿ. ಅನಕೃ, ಮ.ರಾಮಮೂರ್ತಿ, ನಾಡಿಗೇರ ಕೃಷ್ಣರಾವ್, ತರಾಸು, ವೀರಕೇಸರಿ ಸೀತಾರಾಮಶಾಸ್ತ್ರಿ, ಎಂ.ಎನ್.ನಟರಾಜ್, ಬಂದಗದ್ದೆ ರಮೇಶ್, ಕೆ.ಜಿ.ಮಹೇಶ್ವರಪ್ಪ, ಕೋಣಂದೂರು ಲಿಂಗಪ್ಪ, ಮ.ನ.ಮೂರ್ತಿ, ಗೋಪಾಲ್, ಅರಸುಕುಮಾರ್, ಲಕ್ಷ್ಮಣ್, ವಾಟಾಳ್ ನಾಗರಾಜ್ ಮೊದಲಾದವರ ಹೆಸರುಗಳನ್ನು ಹೇಳಬಹುದು.

ಅರವತ್ತರ ದಶಕದಲ್ಲಿ ಕನ್ನಡ, ಕನ್ನಡಭಾಷೆಯ ಮೇಲೆ ಅನ್ಯಾಕ್ರಮಣವಾದಾಗ ಅದನ್ನು ಪ್ರತಿರೋಧಿಸಿ ಇವರೆಲ್ಲಾ ಬೀದಿಗಿಳಿದಾಗ ಅವರ ಹಿಂದೆ ಏಕೀಕರಣ ಚಳವಳಿಯ ಮುಂದಾಳತ್ವ ವಹಿಸಿದ್ದ ತಲೆಮಾರಿನ ಉದಾಹರಣೆ ಇತ್ತು. ತಲೆಮಾರುಗಳ ನಂತರ ನಡೆದಿರುವ ಸಾಮಾಜಿಕ ಪರಿವರ್ತನೆಯಿಂದಾಗಿ ಆಲೋಚನೆಗಳು ಬದಲಾಗಿವೆ. ಸೆಲಬ್ರೆಟಿಗಳು ಮುಂದಾಳತ್ವ ವಹಿಸಿಕೊಳ್ಳುವ ಮುನ್ನ ವ್ಯವಹಾರದ ಬಗ್ಗೆ ಆಲೋಚನೆ ಮಾಡುತ್ತಾರೆ. ನಮ್ಮ ನಾಡಗೀತೆಯಲ್ಲಿ 'ಕೃಷ್ಣ, ಶರಾವತಿ, ತುಂಗಾ, ಕಾವೇರಿಯ ವರರಂಗ' ಎಂಬ ಸಾಲುಗಳು ನಮ್ಮ ನದಿಗಳ ಮಹತ್ವವನ್ನು ಹೇಳುತ್ತದೆ. ನಮ್ಮ



ಸಿನಿಮಾ ನಾಯಕರು 'ಕನ್ನಡನಾಡಿನ ಜೀವನದಿ ಕಾವೇರಿ...' ಎಂದು ಹಾಡುತ್ತಾರೆ. ರಾಷ್ಟ್ರದ ನಾಲ್ಕನೇ ದೊಡ್ಡ ನದಿ ಕೃಷ್ಣಾ ಇವರ ಪಾಲಿಗೆ ನಗಣ್ಯ. ಈ ಸೀಮಿತ ಜ್ಞಾನದಿಂದಾಗಿ ಸೆಲಬ್ರೆಟಿಗಳು ಇಡೀ ರಾಜ್ಯದ ಜನತೆಯನ್ನು ತಲುಪಲು ವಿಫಲರಾಗುತ್ತಿದ್ದಾರೆ, ಕಾವೇರಿ ನದಿ ನೀರು ಹಂಚಿಕೆ ವಿವಾದ ಉದ್ಭವವಾದಾಗ ಭಾಷೆ, ಸಂಸ್ಕೃತಿ, ಜೀವನ, ಬದುಕು ಎಲ್ಲದರ ಪ್ರಶ್ನೆ ಮುಂದಾಗುತ್ತದೆ.

ಕರ್ನಾಟಕ-ಗೋವಾ ನಡುವೆ ಮಹದಾಯಿ ನದಿ ನೀರು ಹಂಚಿಕೆ ವಿವಾದವಾದಾಗ ಅದು ಕೇವಲ ಮುಂಬೈ-ಕರ್ನಾಟಕ ಭಾಗದ ಜನರ ಸಮಸ್ಯೆಯಷ್ಟೇ ಎನಿಸಿ, ಅದು ನಮ್ಮದು ಎನ್ನುವ ಭಾವನೆ ಸಿನಿಮಾ ನಾಯಕನಟರ ಗಮನಕ್ಕೆ ಬರುವುದೇ ಇಲ್ಲ. ಮಹದಾಯಿಯ ಬಗ್ಗೆ, ಕಳಸಾ ಬಂಡೂರಿಯ ಬಗ್ಗೆ, ಮಲಪ್ರಭಾ ಬಗ್ಗೆ ಪ್ರಶ್ನೆಗಳು ಉದ್ಭವವಾದಾಗ ಸಿನಿಮಾ ನಟರು ಭಾವನಾತ್ಮಕವಾಗಿ ಅದಕ್ಕೆ ಸ್ಪಂದಿಸುವುದಿಲ್ಲ; ಹೀಗಾಗಿ ಕಾವೇರಿ ಎನ್ನುವುದು ನಾಲ್ಕು ಜಿಲ್ಲೆಗಳಲ್ಲಿ ಹರಿದು, ತಮಿಳುನಾಡನ್ನು ಸೇರುವ ಹಳೇ ಮೈಸೂರು ಜನರ ಸಮಸ್ಯೆ ಎಂಬ ಆಪಾದನೆ ಸಾಮಾನ್ಯವಾಗಿ ಹೋಗಿದೆ. ಇದಕ್ಕೆ ಸಿನಿಮಾ ಮಂದಿಯ ಸಾಮಾನ್ಯ ಜ್ಞಾನದ ಕೊರತೆಯೇ ಕಾರಣ. ಕಾವೇರಿ ನದಿನೀರು ಹಂಚಿಕೆ ಪ್ರಶ್ನೆ ಬಂದಾಗಲೆಲ್ಲಾ ತಮಿಳುನಾಡಿನಲ್ಲಿ ಇಡೀ ಚಿತ್ರರಂಗ ದನಿ ಎತ್ತುತ್ತದೆ. 2018ರಲ್ಲಿ ಕಾವೇರಿ ನದಿ ನೀರು ವಿವಾದದಲ್ಲಿ ಪ್ರತಿಭಟನೆಗೆ ಕರೆ ಕೊಟ್ಟಾಗ ಇಡೀ ಚಿತ್ರರಂಗದ ಚಟುವಟಿಕೆಗಳನ್ನು ನಿಲ್ಲಿಸಿ, ಚಿತ್ರರಂಗದ ಎಲ್ಲ ಘಟಾನುಘಟಿಗಳು ರಸ್ತೆಯಲ್ಲಿ ಬಂದು ಕುಳಿತರು.

ರಜನೀಕಾಂತ್, ಕಮಲಹಾಸನ್, ಸತ್ಯರಾಜ್, ವಿಜಯ್, ಧನುಷ್, ವಿಶಾಲ್ ಸೇರಿದಂತೆ ಬಹುತೇಕ ನಟನಟಿಯರು, ನಿರ್ದೇಶಕರು, ನಿರ್ಮಾಪಕರು, ಕಿರುತೆರೆ ನಟನಟಿಯರು ಭಾಗವಹಿಸಿದ್ದರು. ಇದೇ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ರಜನೀಕಾಂತ್ ಅವರನ್ನು ಸತ್ಯರಾಜ್ ಭಾಷೆಯ ದೃಷ್ಟಿಯಿಂದ ನಿಂದಿಸಿದ ಘಟನೆಯೂ ನಡೆಯಿತು. ಕನ್ನಡಿಗರ ವಿರುದ್ಧ ಹೇಳಿಕೆ ನೀಡಿದ ಸತ್ಯರಾಜ್ ಅವರ ವಿರುದ್ಧ ಬೆಂಗಳೂರಿನಲ್ಲೂ ಪ್ರತಿಭಟನೆ ನಡೆಯಿತು. ಸತ್ಯರಾಜ್ ಕೂಡ ಅಭಿನಯಿಸಿರುವ 'ಬಾಹುಬಲಿ' ಚಿತ್ರದ ಬಿಡುಗಡೆಗೆ ಅಡ್ಡಿ ಮಾಡಿದ ಕೆಲವು ವಿತರಕರು, ನಿರ್ಮಾಪಕರು ಸತ್ಯರಾಜ್ ಅವರಿಂದ ಬಲವಂತವಾಗಿ ಕ್ಷಮಾಪಣೆ ಪಡೆದ ಘಟನೆಯೂ ನಡೆಯಿತು. ಕಾವೇರಿ ವಿವಾದ ಕೆಲವರಿಗೆ ವ್ಯಾವಹಾರಿಕವಾಗಿ ಲಾಭತರುತ್ತದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಕಾವೇರಿ ಪ್ರಶ್ನೆ ಬಂದಾಗ ತಮಿಳುನಾಡಿನ ಇಡೀ ಚಿತ್ರರಂಗ ಭಾವನಾತ್ಮಕವಾಗಿ ಎದ್ದು ನಿಂತಂತೆ ಕನ್ನಡ ಚಿತ್ರರಂಗ ಏಕೆ ಎದ್ದು ನಿಲ್ಲುತ್ತಿಲ್ಲ ಎನ್ನುವುದು.

ನಟ ಪ್ರಕಾಶ್‌ರಾಜ್ ಅವರ ವಿಷಯವನ್ನೇ ತೆಗೆದುಕೊಳ್ಳಿ, ಕಾವೇರಿ ವಿವಾದದ ಪ್ರಶ್ನೆ ಬಂದಾಗ ಅವರನ್ನು ಟಿ.ವಿ ಚಾನಲ್ ಒಂದು ನೇರ ಸಂದರ್ಶನಕ್ಕೆ ಆಹ್ವಾನಿಸಿತು. ಒಪ್ಪಿ ಬಂದ ಪ್ರಕಾಶ್ ರಾಜ್, ಕಾವೇರಿ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದರು. ಅಭಿಪ್ರಾಯ ಹೇಳಲಾರೆ ಎಂದರು. ಮತ್ತೆಮತ್ತೆ ಅದೇ ಪ್ರಶ್ನೆ ಕೇಳಿದಾಗ, ಸಿಟ್ಟಿನಿಂದ ಎಲ್ಲವನ್ನೂ ಕಿತ್ತೆಸೆದು, ಅಲ್ಲಿಂದ ನಿರ್ಗಮಿಸಿದರು. ಎರಡೂ ರಾಜ್ಯಗಳಲ್ಲಿ ಖ್ಯಾತರಾಗಿರುವ ಕಲಾವಿದರಿಗೆ ಇಂತಹ ಸಮಯದಲ್ಲಿ ವ್ಯವಹಾರವೇ ಪ್ರಧಾನವಾಗುತ್ತದೆ. ದ್ವಂದ್ವದಿಂದಾಗಿ ಅವರು ಗೊಂದಲಕ್ಕೊಳಗುತ್ತಾರೆ. ಸೆಲಬ್ರೆಟಿಗಳಿಗೆ ಪಕ್ಕದ ರಾಜ್ಯದ ಸಿನಿಮಾನಂಟಿನ ಜೊತೆ ಕೊಡು-ಕೊಳು ವ್ಯವಹಾರವಿರುವುದರಿಂದ ಅವರು ಇಂತಹ ಸಂದರ್ಭದಲ್ಲಿ ತಟಸ್ಥರಾಗುತ್ತಾರೆ.

ಕನ್ನಡ ಚಿತ್ರರಂಗ ಈಗ ಬದಲಾವಣೆಯ ಪರ್ವದತ್ತ ಕಾಲಿಟ್ಟಿದೆ. ಪ್ಯಾನ್ ಇಂಡಿಯಾ ಎಂಬ ಕಲ್ಪನೆಯನ್ನು ಹರಿಯಬಿಟ್ಟಿರುವುದರಿಂದ ಕೆ.ಜಿ.ಎಫ್., ರಾಬರ್ಟ್, ಪೊಗರು ಚಲನಚಿತ್ರಗಳು ದೇಶದಾದ್ಯಂತ ಆಯಾ ಭಾಷೆಗಳಲ್ಲೇ ಬಿಡುಗಡೆಯಾಗುವ ತಂತ್ರಜ್ಞಾನದತ್ತ ಹೊರಳಿವೆ. ನನ್ನ ಚಿತ್ರ ತಮಿಳುನಾಡಿನಲ್ಲಿ, ಆಂಧ್ರದಲ್ಲಿ, ಕೇರಳದಲ್ಲಿ ಬಿಡುಗಡೆಯಾಗಬೇಕು ಎನ್ನುವ ಹಂಬದಲ್ಲಿರುವ ನಾಯಕನಟರು ಪಕ್ಕದ ರಾಜ್ಯದ ಜನರನ್ನು ಏಕೆ ಎದುರುಹಾಕಿಕೊಳ್ಳುತ್ತಾರೆ. ಭಾಷೆಗಾಗಲಿ, ಭಾವನಾತ್ಮಕತೆಗಾಗಲಿ ಅಲ್ಲಿ ಸ್ಥಾನವೆಲ್ಲಿರುತ್ತದೆ?

ಲೇಖಕ: ಹಿರಿಯ ಪತ್ರಕರ್ತ

'ತಮಿಳುನಾಡು ಯೋಜನೆಗೆ ರಾಜ್ಯವು ಒಮ್ಮತದ ವಿರೋಧ ವ್ಯಕ್ತಪಡಿಸಬೇಕು'

• ಬಸವರಾಜ್ ಸಂಪಳ್ಳಿ

ಕಾವೇರಿ ನೀರನ್ನು ವೈಗೈ-ಗುಂಡಾರ್ ನದಿಗೆ ಹರಿಸುವ ತಮಿಳುನಾಡಿನ ಯೋಜನೆ ಕಾನೂನುಬಾಹಿರವಾಗಿದೆ. ಇದು ಕರ್ನಾಟಕಕ್ಕೆ ಮಾರಕವಾಗಿದೆ. ರಾಜ್ಯ ಸರ್ಕಾರವು ತಕ್ಷಣವೇ ಸುಪ್ರೀಂ ಕೋರ್ಟ್, ಕೇಂದ್ರ ಜಲ ಆಯೋಗ, ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ಕೇಂದ್ರ ಸರ್ಕಾರದ ಎದುರು ಈ ಪ್ರಕರಣ ತೆಗೆದುಕೊಂಡು ಹೋಗಿ ರಾಜ್ಯದ ಹಿತ ಕಾಯಬೇಕು. ಈ ಕುರಿತು ಮುಖ್ಯಮಂತ್ರಿ, ನೀರಾವರಿ ಮತ್ತು ಕಾನೂನು ಸಚಿವರಿಗೆ ಪತ್ರ ಬರೆಯುತ್ತೇನೆ ಎಂದು ಮಾಜಿ ಜಲ ಸಂಪನ್ಮೂಲ ಸಚಿವ, ಶಾಸಕ ಎಂ.ಬಿ.ಪಾಟೀಲ 'ಪ್ರಜಾವಾಣಿ' ಸಂದರ್ಶನದಲ್ಲಿ ಹೇಳಿದ್ದಾರೆ.

• ನಿಮ್ಮ ಅವಧಿಯಲ್ಲಿ ರೂಪುಗೊಂಡ ಮೇಕೆದಾಟು ಯೋಜನೆಗೆ ತಮಿಳುನಾಡಿನ ವಿರೋಧವಿದೆ. ಆ ರಾಜ್ಯದ ನದಿ ತಿರುವು ಯೋಜನೆ ಮತ್ತು ನಮ್ಮ ಮೇಕೆದಾಟು ಯೋಜನೆಗಳೆರಡೂ ಹೆಚ್ಚುವರಿ ನೀರು ಅವಲಂಬಿಸಿವೆ ಎನ್ನಲಾಗುತ್ತಿದೆ. ಹೆಚ್ಚುವರಿ ನೀರು ನಿಜಕ್ಕೂ ಇದೆಯೇ?

ಕಾವೇರಿಯಲ್ಲಿ ಹೆಚ್ಚುವರಿ ನೀರಿನ ಪ್ರಶ್ನೆಯೇ ಉದ್ಭವಿಸಲ್ಲ. ಅದು ಮುಂದಿನ ನ್ಯಾಯಮಂಡಳಿಯ ತೀರ್ಪಿನಲ್ಲಿ ಹೇಳಬೇಕಾಗುತ್ತದೆ. ಮೇಕೆದಾಟು ಯೋಜನೆ ಹೆಚ್ಚುವರಿ ನೀರು ಆಧರಿಸಿ ರೂಪಿಸಿದ್ದಲ್ಲ, ನಮಗೆ ಹಂಚಿಕೆಯಾಗಿರುವ ಕುಡಿಯುವ ನೀರನ್ನು ಆಧರಿಸಿ ರೂಪಿಸಲಾಗಿದೆ. ಆದರೆ, ತಮಿಳುನಾಡು ಹೆಚ್ಚುವರಿ ನೀರಿನ ಮೇಲೆ ಕಣ್ಣಿಟ್ಟು ನದಿ ಜೋಡಣೆ ಯೋಜನೆ ರೂಪಿಸಿದೆ. ಇದು ಸಾಧುವಲ್ಲ. ಬೃಹತ್ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ಸುತ್ತ-ಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು (27 ಟಿಎಂಸಿ ಅಡಿ), ತಮಿಳುನಾಡಿಗೆ ಬೇಸಿಗೆಯಲ್ಲಿ ಹರಿಸಬೇಕಾಗಿರುವ ನಾಲ್ಕು ತಿಂಗಳಲ್ಲಿನ 10 ಟಿಎಂಸಿ ಅಡಿ, ಹಾಗೂ ನದಿ ಪಾತ್ರದಲ್ಲಿ ನೈಸರ್ಗಿಕವಾಗಿ ಹರಿಯುವ 10 ಟಿಎಂಸಿ ಅಡಿ ನೀರು ಸೇರಿದಂತೆ ಒಟ್ಟು 47 ಟಿಎಂಸಿ ಅಡಿ ನೀರನ್ನು ಮೇಕೆದಾಟು ಯೋಜನೆ ಒಳಗೊಂಡಿದೆ. ನಾನು, ಜಲ ಸಂಪನ್ಮೂಲ ಸಚಿವನಾಗಿದ್ದಾಗ ಹಿರಿಯ ವಕೀಲ ಫಾಲಿ ನರಿಮನ್ ಅವರೊಂದಿಗೆ ಚರ್ಚಿಸಿ ಯೋಜನೆ ರೂಪಿಸಲಾಗಿದೆ. ಇದರಿಂದ ತಮಿಳುನಾಡಿಗೂ ಅನುಕೂಲವಾಗಲಿದೆ. ಆ ರಾಜ್ಯಕ್ಕೆ ಈಗಾಗಲೇ ಹಂಚಿಕೆಯಾಗಿರುವ 177.25 ಟಿಎಂಸಿ ಅಡಿ ನೀರಿಗೆ ಮೇಕೆದಾಟು ಯೋಜನೆಯಿಂದ ಎಲ್ಲಿಯೂ ಬಾಧಕವಾಗದಂತೆ ನಮ್ಮ ಸರಹದ್ದಿನಲ್ಲಿ ಕೈಗೊಳ್ಳಲಾಗಿದೆ.

ಎಂ.ಬಿ.ಪಾಟೀಲ

• ಅಕ್ಸಲರೇಟೆಡ್ ಇರಿಗೇಷನ್ ಬೆನಿಫಿಟ್ ಪ್ರಾಜೆಕ್ಟ್ (ಎಐಬಿಪಿ) ಅನ್ನು ಕೇಂದ್ರ ಸರ್ಕಾರವು ರದ್ದುಪಡಿಸಿದೆ. ಇದರ ಮೂಲಕ ಸಿಗುತ್ತಿದ್ದ ನೆರವು ಕೈತಪ್ಪಿದೆ. ಈ ವಿಚಾರದಲ್ಲಿ ಕೇಂದ್ರವನ್ನು ಮನವೊಲಿಸುವ ಕೆಲಸವೂ ಆಗಿಲ್ಲ. ಕೇಂದ್ರದ ವಿರುದ್ಧ ಆಂದೋಲನ ನಡೆಸುವ ಕೆಲಸವೂ ಆಗಿಲ್ಲ ಏಕೆ?

ಎಚ್.ಡಿ. ದೇವೇಗೌಡರು ಪ್ರಧಾನಿಯಾಗಿದ್ದಾಗ ಎಐಬಿಪಿ ಜಾರಿಗೆ ತಂದಿದ್ದರು ಎಂಬುದನ್ನು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗುತ್ತದೆ. ಇದರಿಂದ ನೀರಾವರಿ ಯೋಜನೆಗಳ ಅನುಷ್ಠಾನ, ಆಧುನೀಕರಣದ ಸಂದರ್ಭದಲ್ಲಿ ರಾಜ್ಯಕ್ಕೆ ಹೊರೆ ಕಡಿಮೆಯಾಗುತ್ತಿತ್ತು. ₹ 15 ಸಾವಿರ ಕೋಟಿಯಿಂದ ₹ 20 ಸಾವಿರ ಕೋಟಿ ಅನುದಾನ ಲಭಿಸುತ್ತಿತ್ತು. 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಎಐಬಿಪಿ ರದ್ದುಗೊಳಿಸಿ, ಪಿಎಂಕೆಎಸ್‌ವೈನಲ್ಲಿ ವಿಲೀನಗೊಳಿಸಿದರು. ಹೀಗಾಗಿ, ಈ ಮೊದಲು ಎಐಬಿಪಿಯಡಿ ಲಭಿಸುತ್ತಿದ್ದ ದೊಡ್ಡ ಪ್ರಮಾಣದ ಅನುದಾನ ಲಭಿಸುತ್ತಿಲ್ಲ. ಪಿಎಂಕೆಎಸ್‌ವೈನಲ್ಲಿ ರೈತರು ವೈಯಕ್ತಿಕವಾಗಿ ಸಹಾಯ ಪಡೆಯುತ್ತಿದ್ದಾರೆ. ಆದರೆ, ಸರ್ಕಾರ ಜಾರಿಗೊಳಿಸುವ ಏತ ನೀರಾವರಿಯಂತಹ ದೊಡ್ಡ ಯೋಜನೆಗಳಿಗೆ, ನಾಲೆಗಳ ಆಧುನೀಕರಣಕ್ಕೆ ಇದರಿಂದ ನೆರವಾಗುತ್ತಿಲ್ಲ. ಎಐಬಿಪಿಯನ್ನು ಪುನರಾರಂಭಿಸಲು ಕೇಂದ್ರದ ಮೇಲೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಒತ್ತಡ ಹೇರಬೇಕು. ಎಐಬಿಪಿ ಇಡೀ ದೇಶಕ್ಕೆ ಅನ್ವಯಿಸುವುದರಿಂದ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಅನುಕೂಲವಾಗಲಿದೆ.

ಪ್ರಜಾವಾಣಿ ಸಂದರ್ಶನ

ಎಂ.ಬಿ.ಪಾಟೀಲ, ಶಾಸಕ

• ಮಳೆ ಪ್ರಮಾಣ, ಬೆಳೆ ವಿನ್ಯಾಸ, ಭೂ ಬಳಕೆ ಎಲ್ಲವೂ ಬದಲಾಗಿದೆ. ಕಾವೇರಿ ನದಿಯಲ್ಲಿ ಎಷ್ಟು ನೀರು ಲಭ್ಯವಿದೆ ಎಂಬುದರ ಸಮೀಕ್ಷೆ ಅಥವಾ ಅಧ್ಯಯನ 1972ರ ಬಳಿಕ ಆಗಿಲ್ಲ. ಹಾಗಿರುವಾಗ ಮೇಕೆದಾಟು ಯೋಜನೆ ಮತ್ತು ತಮಿಳುನಾಡಿನ ನದಿ ಜೋಡಣೆ ಯೋಜನೆಯನ್ನು ಯಾವ ಆಧಾರದಲ್ಲಿ ರೂಪಿಸಲಾಗಿದೆ?

ತಮಿಳುನಾಡು ರಾಜ್ಯವು ಕಾವೇರಿಯನ್ನು ವೈಗೈ-ಗುಂಡಾರ್ ನದಿಗೆ ಜೋಡಿಸಲು ಮುಂದಾಗಿರುವುದು ಸಂಪೂರ್ಣ ಕಾನೂನು ಬಾಹಿರವಾಗಿದೆ. ಹೆಚ್ಚುವರಿ ನೀರು ಇನ್ನೂ ನಿರ್ಧಾರವಾಗಿಲ್ಲ. ಮೇಕೆದಾಟು ಯೋಜನೆ ಒಂದೇ ಒಂದು ಹನಿ ಹೆಚ್ಚುವರಿ ನೀರನ್ನು ಆಧರಿಸಿಲ್ಲ. ಮೇಕೆದಾಟು ಯೋಜನೆಯಲ್ಲಿ ಎಲ್ಲಿಯೂ ಕಾನೂನು ಉಲ್ಲಂಘನೆಯಾಗಿಲ್ಲ.

• ತಮಿಳುನಾಡು ಯೋಜನೆ ರೂಪಿಸುವಾಗ ಅಗತ್ಯ ಪೂರ್ವ ಸಿದ್ಧತೆಗಳೆಲ್ಲವನ್ನೂ ಮಾಡುತ್ತದೆ. ಆದರೆ, ನಮ್ಮಲ್ಲಿ ತರಾತುರಿಯಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗುತ್ತದೆ. ಪೂರ್ವ ಸಿದ್ಧತೆ ಇಲ್ಲದ ಕಾರಣ ಅಗತ್ಯ ಅನುಮತಿಗಳು ಸಿಗುವುದಿಲ್ಲ (ಪರಿಸರ ಅನುಮತಿ ಇತ್ಯಾದಿ), ಯೋಜನೆ ವಿಳಂಬವಾಗುತ್ತದೆ ಅಥವಾ ನನೆಗುದಿಗೆ ಬೀಳುತ್ತದೆ. ಯೋಜನಾ ವೆಚ್ಚ ವಿಪರೀತ ಏರಿಕೆಯಾಗುತ್ತದೆ. ಮೇಕೆದಾಟು ಯೋಜನೆ ಕೂಡ ಇದಕ್ಕೆ ಒಂದು ಉದಾಹರಣೆ. ಇದಕ್ಕೆ ಪರಿಹಾರ ಇಲ್ಲವೆ?

ತಮಿಳುನಾಡು ನೀರಾವರಿ ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ಪೂರ್ವ ಸಿದ್ಧತೆ ಮಾಡಿಲ್ಲ. ಕಾನೂನು ಬಾಹಿರವಾಗಿಯೇ ಮಾಡಿಕೊಂಡು ಬರುತ್ತಿದೆ. ಯಾರ ಅನುಮತಿ ಪಡೆಯದೇ ಅನುಷ್ಠಾನಕ್ಕೆ ಮುಂದಾಗಿದೆ. ಆದರೆ, ಕರ್ನಾಟಕ ಯಾವಾಗಲೂ ಕಾನೂನುಬದ್ಧವಾಗಿ ನೀರಾವರಿ ಯೋಜನೆ ಅನುಷ್ಠಾನಕ್ಕೆ ಆದ್ಯತೆ ನೀಡುತ್ತ ಬಂದಿದೆ. ಕೇಂದ್ರ ಜಲ ಆಯೋಗ ಡಿಪಿಆರ್‌ಗೆ ಒಪ್ಪಿಗೆ ನೀಡಿದ ಬಳಿಕ ಜಾಗತಿಕ ಟೆಂಡರ್ ಕರೆಯಲಾಗಿತ್ತು. ಆದರೆ, ಅದರಲ್ಲಿ ಯಾರೂ ಭಾಗವಹಿಸಿರಲಿಲ್ಲ. ಬಳಿಕ ರಾಷ್ಟ್ರಮಟ್ಟದಲ್ಲಿ ಟೆಂಡರ್ ಕರೆಯಲಾಯಿತು. ನೆರೆಯ ರಾಜ್ಯಗಳು ವಿರೋಧ ಮಾಡಿದಾಗ ಹಾಗೂ ಕೋರ್ಟ್‌ಗಳು ಮಧ್ಯ ಪ್ರವೇಶಿಸಿದಾಗ ಕೃಷ್ಣಾ, ಕಾವೇರಿ ಯೋಜನೆಗಳ ವೆಚ್ಚ ಹೆಚ್ಚಳ ಹಾಗೂ ಅನುಷ್ಠಾನ ವಿಳಂಬವಾಗಿದೆಯೇ ಹೊರತು, ಯೋಜನೆ ರೂಪಿಸುವಲ್ಲಿ ತಪ್ಪು ಮಾಡಿಲ್ಲ. ಪೂರ್ವ ಸಿದ್ಧತೆಯೊಂದಿಗೆ ಅನುಷ್ಠಾನಕ್ಕೆ ಆದ್ಯತೆ ನೀಡಲಾಗಿದೆ.

• ಮೇಕೆದಾಟು ಮತ್ತು ತಮಿಳುನಾಡಿನ ನದಿ ಜೋಡಣೆ ಯೋಜನೆಯನ್ನು ನಿಭಾಯಿಸುವ ವಿಚಾರದಲ್ಲಿ ಈಗಿನ ಸರ್ಕಾರಕ್ಕೆ ನೀವು ಕೊಡುವ ಸಲಹೆ ಏನು?

ರಾಜ್ಯ ಸರ್ಕಾರ ತಕ್ಷಣ ಸರ್ವಪಕ್ಷಗಳ ಸಭೆ ಕರೆದು ತಮಿಳುನಾಡಿನ ನದಿ ಜೋಡಣೆ ಯೋಜನೆ ಬಗ್ಗೆ ಚರ್ಚಿಸಿ ಕೇಂದ್ರ ಜಲ ಆಯೋಗ, ಕೇಂದ್ರ ಜಲಶಕ್ತಿ ಸಚಿವರು ಹಾಗೂ ಪ್ರಧಾನಮಂತ್ರಿಗಳ ಬಳಿ ನಿಯೋಗ ಕೊಂಡೊಯ್ದು, ಒಮ್ಮತದ ವಿರೋಧ ವ್ಯಕ್ತಪಡಿಸಬೇಕು. ಜೊತೆಗೆ ರಾಜ್ಯದ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರುವ ಮೂಲಕ ವ್ಯಾಪಕವಾಗಿ ವಿರೋಧಿಸಬೇಕು. ಕಾನೂನು ತಜ್ಞರ ಮೂಲಕ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಬೇಕು. ಮೇಕೆದಾಟು ಯೋಜನೆ ವಿಚಾರದಲ್ಲಿ ರಾಜ್ಯ ಕಾನೂನಾತ್ಮಕವಾಗಿ ನಡೆದುಕೊಳ್ಳುತ್ತಿದೆ. ಯೋಜನೆ ಅನುಷ್ಠಾನಕ್ಕೆ ಅಗತ್ಯವಿರುವ ಅನುಮತಿಗಳನ್ನು ಪಡೆಯಲು ಕಾನೂನು ತಂಡ, ತಾಂತ್ರಿಕ ತಂಡದೊಂದಿಗೆ ಜಲಸಂಪನ್ಮೂಲ ಸಚಿವರು, ಮುಖ್ಯಮಂತ್ರಿಯವರು ಸಂಬಂಧಿಸಿದ ಕೇಂದ್ರ ಸಚಿವರು, ಪ್ರಾಧಿಕಾರದ ಬಳಿಗೆ ಹೋಗಿ ಅಗತ್ಯ ಅನುಮತಿ ಪಡೆಯಲು ಮುಂದಾಗಬೇಕು.

ರಾಜಕೀಯ ಬದಿಗೊತ್ತಿ

ಕೇವಲ ರಾಜಕೀಯ ಉದ್ದೇಶಗಳಿಗಾಗಿ ಮೇಕೆದಾಟು ಹೆಸರು ಪದೇ ಪದೇ ಪ್ರಸ್ತಾಪ ಆಗುತ್ತಿದೆ. 2013ರಲ್ಲಿಯೇ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಅನುದಾನ ತೆಗೆದಿಟ್ಟರೂ ಈವರೆಗೆ ಯೋಜನೆಗೆ ಚಾಲನೆ ನೀಡದಿರುವುದು ವಿಷಾದದ ಸಂಗತಿ. ಇದರಿಂದಾಗಿ ಯೋಜನೆ ವೆಚ್ಚ ₹5,912 ಕೋಟಿಯಿಂದ ₹ 9 ಸಾವಿರ ಕೋಟಿಗೆ ಏರಿಕೆ ಆಗಿದೆ. ನಮ್ಮ ಪಾಲಿನ ನೀರನ್ನು ನಾವು ಬಳಸಿಕೊಳ್ಳಲು ಯಾರ ಅನುಮತಿಯೂ ಬೇಕಿಲ್ಲ ಎಂದು ನ್ಯಾಯಾಲಯವೇ ಹಿಂದೊಮ್ಮೆ ಹೇಳಿದೆ. ಹೀಗಾಗಿ ಸರ್ಕಾರ ರಾಜಕೀಯ ಬದಿಗೊತ್ತಿ ಅಣೆಕಟ್ಟೆ ನಿರ್ಮಾಣಕ್ಕೆ ಚಾಲನೆ ನೀಡಬೇಕು

ಸಂಪತ್‌ಕುಮಾರ್, ಸಂಚಾಲಕ, ಮೇಕೆದಾಟು ಹೋರಾಟ ಸಮಿತಿ

ಕೆರೆ ತುಂಬಿಸುವ ಕೆಲಸ ಆಗಲಿ

ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಶೀಘ್ರ ಹಸಿರು ನಿಶಾನೆ ತೋರಲಿದೆ. ಇದರೊಟ್ಟಿಗೆ ಕಾವೇರಿ ಕಣಿವೆ ವ್ಯಾಪ್ತಿಯಲ್ಲಿ ದಶಕಗಳಿಂದ ಬಾಕಿ ಉಳಿದಿರುವ ಏತ ನೀರಾವರಿ ಯೋಜನೆಗಳನ್ನು ಸರ್ಕಾರ ಪೂರ್ಣಗೊಳಿಸಿ ಕೆರೆಗಳನ್ನು ತುಂಬಿಸುವ ಕೆಲಸ ಮಾಡಬೇಕು. ನಾನು ಕಾವೇರಿ ನೀರಾವರಿ ನಿಗಮದ ಎಂ.ಡಿ. ಆಗಿದ್ದಾಗ ಹೇಮಾವತಿ ನದಿ ವ್ಯಾಪ್ತಿಯಲ್ಲಿ ಕೆರೆಗಳ ಹೂಳೆತ್ತಿ ತುಂಬಿಸಿದ್ದೆವು. ಕಾವೇರಿ ನದಿ ನೀರಿನಿಂದ ಕೆರೆಗಳನ್ನು ತುಂಬಿಸುವುದರಿಂದ ಕುಡಿಯುವ ನೀರಿನ ಜೊತೆಗೆ ಅಂತರ್ಜಲ ಮಟ್ಟವೂ ವೃದ್ಧಿ ಆಗುತ್ತದೆ. ಕಾವೇರಿ ಕಣಿವೆ ಜಲಾಶಯಗಳ ಮುಖ್ಯ ಕಾಲುವೆಗಳ ಮುಖಾಂತರ ಕೆರೆಗಳನ್ನು ತುಂಬಿಸಲು ಸಂಪರ್ಕ ನಾಲೆಗಳನ್ನು ಸರ್ಕಾರ ಅಭಿವೃದ್ಧಿಪಡಿಸಬೇಕು. ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ನೀರಿನ ಅಭಾವದ ವರ್ಷಗಳಲ್ಲಿ ಬೆಳೆ ಪದ್ಧತಿಯನ್ನು ವಿಮರ್ಶೆ ಮಾಡಬೇಕು

ಟಿ. ತಿಮ್ಮೇಗೌಡ, ನಿವೃತ್ತ ಐಎಎಸ್ ಅಧಿಕಾರಿ

ತಮಿಳುನಾಡು ರೈತರ ವಿರೋಧವಿಲ್ಲ

ಮೇಕೆದಾಟು ಅಣೆಕಟ್ಟೆ ನಿರ್ಮಾಣದಿಂದ ಯಾರಿಗೂ ಅನ್ಯಾಯ ಆಗದು. ಕಾವೇರಿ ಒಪ್ಪಂದಕ್ಕೆ ಬದ್ಧವಾಗಿಯೇ ನಮ್ಮ ಪಾಲಿಗೆ ಲಭ್ಯ ಇರುವ ಹೆಚ್ಚುವರಿ ನೀರಿನ ಬಳಕೆಗೆ ಸರ್ಕಾರ ಯೋಜನೆ ರೂಪಿಸಿದೆ. ಈ ಸಂಬಂಧ ರೈತ ಸಂಘವು ತಮಿಳುನಾಡಿನ 'ಕಾವೇರಿ ಕುಟುಂಬ' ರೈತರ ಜೊತೆಗೂ ಮಾತುಕತೆ ನಡೆಸಿದೆ. ಯೋಜನೆಗೆ ಅಲ್ಲಿನ ರೈತರ ವಿರೋಧ ಇಲ್ಲ. ಆದರೆ ತಮಿಳುನಾಡು ಕೇವಲ ರಾಜಕೀಯ ಉದ್ದೇಶಕ್ಕಾಗಿ ಇದನ್ನು ವಿರೋಧಿಸುತ್ತ ಬಂದಿದೆ. ಹೀಗಾಗಿ ರಾಜ್ಯ ಸರ್ಕಾರ ಹೆದರುವ ಅಗತ್ಯ ಇಲ್ಲ.

ಎಂ. ರಾಮು, ಕಾರ್ಯಾಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರ ಅಳಿಯ ಶಬರೀಶನ್ ಅವರ ಮನೆ ಹಾಗೂ ಕಚೇರಿಗಳಲ್ಲಿ ಏಪ್ರಿಲ್ 2ರಂದು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ತಪಾಸಣೆ ವೇಳೆ ₹700 ಕೋಟಿ ನಗದು, 260 ಕೆ.ಜಿ ಚಿನ್ನ, ₹3,000 ಕೋಟಿ ಮೌಲ್ಯದ ಆಸ್ತಿಯ ದಾಖಲೆಗಳು ಸಿಕ್ಕಿವೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗಿತ್ತು. ಕಂತೆಕಂತೆ ನೋಟು, ಚಿನ್ನದ ಬಿಸ್ಕೆಟ್ ಇರುವ ಚಿತ್ರಗಳು ವೈರಲ್ ಆಗಿದ್ದವು.

ಸ್ಟಾಲಿನ್ ಅಳಿಯನ ಮನೆಯಲ್ಲಿ ಸಿಕ್ಕಿವೆ ಎನ್ನಲಾದ ಚಿನ್ನ ಹಾಗೂ ಗರಿಗರಿ ನೋಟಿನ ಚಿತ್ರಗಳು ಈ ಬಾರಿಯ ಆದಾಯ ತೆರಿಗೆ ಅಧಿಕಾರಿಗಳ ಶೋಧದಲ್ಲಿ ಸಿಕ್ಕಿದವಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಶಬರೀಶನ್ ಮನೆಯಲ್ಲಿ ಸಿಕ್ಕಿದ್ದು ₹1.34 ಲಕ್ಷ ನಗದು ಮಾತ್ರ. ದಾಖಲೆಗಳನ್ನು ಒದಗಿಸಿದ ಬಳಿಕ ಹಣವನ್ನು ಕುಟುಂಬಕ್ಕೆ ಅಧಿಕಾರಿಗಳು ಹಸ್ತಾಂತರಿಸಿದ್ದಾರೆ ಎಂದು ಎನ್.ಡಿ.ಟಿ.ವಿ ಹಾಗೂ ಸನ್ ನ್ಯೂಸ್ ವರದಿ ಮಾಡಿವೆ. ವೈರಲ್ ಆಗಿರುವ ಚಿತ್ರವು, 2019ರಲ್ಲಿ ತೆಲಂಗಾಣದ ಖಮ್ಮಂನಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದ ನಕಲಿ ನೋಟುಗಳ ಚಿತ್ರ ಎಂದು ಸ್ಪಷ್ಟಪಡಿಸಿದೆ. ಚಿನ್ನದ ಬಿಸ್ಕೆಟ್ ಇರುವ ಚಿತ್ರವು 2018ರಲ್ಲಿ ವೆಲ್ಲೂರಿನ ಎಸ್‌ಪಿಕೆ ಕಂಪನಿಯ ಕಚೇರಿಯಲ್ಲಿ ಐಟಿ ಅಧಿಕಾರಿಗಳು ನಡೆಸಿದ ತಪಾಸಣೆಗೆ ಸಂಬಂಧಿಸಿದೆ ಎಂದು ವರದಿ ತಿಳಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ವೈರುಧ್ಯಗಳ ಏಕತೆ

ಹೊಳಪು ಹೊಳಪಿನ ನಡುವೆ ಬಿಡುವಿನಿತು ರತ್ನದಲಿ |
ಬೆಳಕು ಬೆಳಕಿನ ನಡುವೆ ಅನಿತಿನಿತು ನೆರಳು ||
ಬೆಳಸು ಬೆಳಸಿನ ಸಾಲು ನಡುವೆ ಬದಿ ಗದ್ದೆಯಲಿ |
ಉಳಿವಿಗಳಿವಿನ ನೆರೆಯೊ – ಮಂಕುತಿಮ್ಮ
|| 403 ||

ಪದ-ಅರ್ಥ: ಬಿಡುವಿನಿತು = ಬಿಡುವು (ಅಂತರ) + ಇನಿತು, ಅನಿತಿನಿತು = ಅನಿತು(ಅಷ್ಟು-) + ಇನಿತು(ಇಷ್ಟು), ಉಳಿವಿಗೆ(ಬದುಕಿಗೆ) + ಅಳಿವಿನ(ಸಾವಿನ), ನೆರೆ(ಹತ್ತಿರದ್ದು, ಸಂಬಂಧ)

ವಾಚ್ಯಾರ್ಥ: ರತ್ನದಲ್ಲಿ ಹೊಳಪಿನ ಮುಖಗಳ ನಡುವೆ ಕೊಂಚ ಅಂತರವಿದೆ. ಎರಡು ಬೆಳಕುಗಳ ನಡುವೆ ಕೊಂಚ ಕತ್ತಲು. ಗದ್ದೆಗಳಲ್ಲಿ ಬೆಳಸಿನ ಸಾಲಿನ ನಡುವೆ ಬದುವಿದೆ. ಅಂತೆಯೇ ಉಳಿವು ಮತ್ತು ಅಳಿವುಗಳು ಒಂದಕ್ಕೊಂದು ಪೂರಕವಾದವುಗಳು.

ವಿವರಣೆ: ಇದೊಂದು ಅತ್ಯದ್ಭುತವಾದ ಚೌಪದಿ. ವಿಸ್ತರಿಸಿದಷ್ಟೂ ಹಿಗ್ಗುವ ಅರ್ಥವ್ಯಾಪ್ತಿ. ನಾವು ಯಾವುದನ್ನು ವಿರೋಧಗಳು ಎಂದು ಭಾವಿಸಿದ್ದೇವೋ ಅವು ನೈಜದಲ್ಲಿ ಒಂದಕ್ಕೊಂದು ಪೂರಕವಾದವುಗಳಷ್ಟೇ ಅಲ್ಲ, ಅವು ಒಂದೇ ಸತ್ಯದ ಎರಡು ಮುಖಗಳು.

ಬಗದಾದಿನ ಮಹಾ ಸೂಫೀ ಸಂತ ಹಸನ್ ಒಂದು ಗ್ರಾಮಕ್ಕೆ ಸಂಜೆಗೆ ಹೋದ. ಅವನಿಗೆ ಇರಲಿಕ್ಕೆ ಕೋಣೆಯೊಂದನ್ನು ಮನೆಯ ಯಜಮಾನಿ ಕೊಟ್ಟಳು. ಕೋಣೆಯೊಳಗೆ ಕತ್ತಲೆ. ಯಜಮಾನಿ ತನ್ನ ಪುಟ್ಟ ಮಗಳೊಡನೆ ಒಂದು ದೀಪವನ್ನು ಕಳುಹಿಸಿದಳು. ಕತ್ತಲೆ ಕರಗಿತು. ಹಸನ್ ಮಗುವಿಗೆ ಕೇಳಿದ, 'ಮಗೂ, ಈ ದೀಪಕ್ಕೆ ಬೆಳಕು ಬಂದಿದ್ದು ಎಲ್ಲಿಂದ?' ಮಗು ಅಷ್ಟೇ ಮುಗ್ಧವಾಗಿ ನಕ್ಕು, ತುಟಿ ಚಾಚಿ ಉಫ್ ಎಂದು ಊದಿ ದೀಪವನ್ನು ಆರಿಸಿಬಿಟ್ಟು ಕೇಳಿತು, 'ಈಗ ಬೆಳಕು ಹೋದದ್ದು ಎಲ್ಲಿಗೆ?'

ಕತ್ತಲೆಯಿಂದಲೇ ಬೆಳಕಿಗೊಂದು ಅರ್ಥ, ಅಲ್ಲಿಂದಲೇ ಬೆಳಕಿನ ಉಗಮ. ಕತ್ತಲೆಯ ಗರ್ಭದಿಂದಲೇ ಬೆಳಕಿನ ಹುಟ್ಟು. ಅಂದರೆ ಕತ್ತಲೆ-ಬೆಳಕುಗಳು ಒಂದಕ್ಕೊಂದು ವಿರೋಧವಲ್ಲ. ಒಂದಿಲ್ಲದೆ ಮತ್ತೊಂದಿಲ್ಲ. ಅಷ್ಟೇ ಅಲ್ಲ ಒಂದರಿಂದಲೇ ಮತ್ತೊಂದರ ಅಸ್ತಿತ್ವ.

ಇದೇ ರೀತಿ ಸಾವು-ಹುಟ್ಟುಗಳು. 'ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ|' ಹುಟ್ಟಿದವರಿಗೆ ಸಾವು ತಪ್ಪಿದ್ದಲ್ಲ ಅಂತೆಯೇ ಮೃತನಿಗೆ ಮರುಹುಟ್ಟು ತಪ್ಪಿದ್ದಲ್ಲ. ಪ್ರಾಣಿ ಹುಟ್ಟಿದ ತಕ್ಷಣ ಅವನ ಕಾಲನ್ನು ಸಾವು ಹಿಡಿದುಕೊಂಡಿದೆ. ಪ್ರಾಣಿ ಬೆಳೆದಂತೆಯೇ ಸಾವು ಗಾಢವಾಗುತ್ತ, ಹತ್ತಿರವಾಗುತ್ತ ಹೋಗುತ್ತದೆ. ನಮಗೆ ಸಾವು ಮತ್ತು ಹುಟ್ಟುಗಳನ್ನು ವಿರೋಧಿಗಳಾಗಿಯೇ ನೋಡಿ ಅಭ್ಯಾಸ. ಆದರೆ ಅಖಂಡತ್ವದಲ್ಲಿ ಸಾವು ಮತ್ತೊಂದು ಹುಟ್ಟಿನ ಆರಂಭ ಹಾಗೂ ಹುಟ್ಟು ಮತ್ತೊಂದು ಸಾವಿನ ಅವತರಣ.

ಅಸಂಗತವೆಂದು ತೋರುವ ತತ್ವಗಳು ಅಖಂಡತ್ವದಲ್ಲಿ ಒಂದೇ ಆಗಿರುತ್ತವೆ. ಇದನ್ನು ಕಗ್ಗ ಸುಂದರವಾಗಿ ಉಪಮೆಗಳ ಮೂಲಕ ಹೇಳುತ್ತದೆ. ಒಂದು ಸಾಣೆ ಹಿಡಿದ ವಜ್ರಕ್ಕೆ ನೂರಾರು ಮುಖಗಳು. ಆ ಮುಖಗಳ ನಡುವೆ ಇರುವ ಅಂಚು ಬೆಳಕನ್ನು ಅಷ್ಟು ಪ್ರತಿಫಲಿಸಲಾರದು. ಅದೊಂದು ಚೂರು ನೆರಳು. ಈ ನೆರಳಿನಿಂದಲೇ ಆ ಮುಖಗಳು ಫಳ್ ಎಂದು ಹೊಳೆಯುವುದು. ಎಲ್ಲವೂ ನೇರವಾಗಿ ಮುಖವೇ ಆಗಿಬಿಟ್ಟಿದ್ದರೆ ಅದು ವಜ್ರವಾಗದೆ ಕನ್ನಡಿಯಾಗುತ್ತಿತ್ತು. ಹಾಗೆಯೇ ಎರಡು ಹಗಲುಗಳ ನಡುವೆ ಒಂದು ರಾತ್ರಿ. ರಾತ್ರಿ ಇರುವುದರಿಂದಲೇ ಹಗಲಿಗೊಂದು ವಿಶೇಷತೆ. ಗದ್ದೆಯಲ್ಲಿ ಬೆಳೆ ತೊನೆಯುತ್ತಿರುವಾಗ ನೋಡುವ ದೃಶ್ಯ ಅಪ್ಯಾಯಮಾನವಾದದ್ದು. ಒಂದು ಗದ್ದೆಯಿಂದ ಮತ್ತೊಂದು ಗದ್ದೆಯ ನಡುವೆ ಇದ್ದ ಬದುವು ಒಂದು ಆತ್ಯಂತಿಕ ಸುಂದರತೆಯನ್ನು ನೀಡುತ್ತದೆ. ಕೊನೆಗೆ ಈ ಕಗ್ಗ ಭರತವಾಕ್ಯವೊಂದನ್ನು ಹೇಳುತ್ತದೆ. 'ಉಳಿವಿಗೆ ಅಳಿವಿನ ನೆರೆ'. ಬದುಕು, ಸಾವು ನೀಡಿದ ಭಿಕ್ಷೆ; ಸಾವು, ಬದುಕು ನೀಡಿದ ಕರುಣೆ. ಒಂದಕ್ಕೊಂದು ಅನ್ಯೋನ್ಯ ಸಂಬಂಧ.

ದಿನ ಭವಿಷ್ಯ

ಸೋಮವಾರ 5 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೇವತಿ ಅಷ್ಟಮೀ ಗಂ. 2-13 (ಬೆ. 7-13) ಉಪರಿ ನವಮಿ ಗಂ. 56-36 (ಬೆ. ಝಾ. 5-51) ಸೋಮವಾರ ನಿತ್ಯ ನಕ್ಷತ ಉತ್ತರಾಷಾಢ ಗಂ. 57-56 (ಬೆ.ಝಾ. 5-30) ಶಿವ ನಾಮ ಯೋಗ ಗಂ 35-22 ಕೌಲವ ಕರಣ ಗಂ. 2-13 ಉಪರಿ ತೈತಲ ಕರಣ ಗಂ. 28-18 ವಿಷ ಗಂ. 16-57 ಅಮೃತ ಗಂ. 40-18 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-18 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 1, 2, 8

ಮೇಷ: ಮನೆಯವರ ಅಸಮ್ಮತಿಯ ನಡುವೆಯೂ ಉದ್ಯೋಗದ ಸಲುವಾಗಿ ದೂರದ ಪ್ರಯಾಣ ಮಾಡಬೇಕಾದೀತು. ಪತ್ನಿವರ್ಗದವರಿಂದ ಸಹಾಯ. ಸಂಬಂಧಿಗಳ ಮಧ್ಯಸ್ಥಿಕೆಯಿಂದಾಗಿ ಸಮಸ್ಯೆ ನಿವಾರಣೆ.

ವೃಷಭ: ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸಗಳು ಪೂರ್ಣಗೊಂಡು ನೆಮ್ಮದಿ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯಪೂರ್ವಕ ಪ್ರಸ್ತಾಪಗಳು ಬರಲಿವೆ. ಸಾಲದಿಂದ ಮುಕ್ತಿ ಹೊಂದಿ ನಿರಾಳತೆ.

ಮಿಥುನ: ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವಿರಿ. ಲೋಕೋಪಯೋಗಿ ಇಲಾಖೆ, ತಾಂತ್ರಿಕ ಇಲಾಖೆಯ ಕಂಪ್ಯೂಟರ್ ವಿಭಾಗದವರಿಗೆ ಭತ್ಯೆಯಲ್ಲಿ ಹೆಚ್ಚಳ.

ಕರ್ಕಾಟಕ: ತರಕಾರಿ, ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ ನೀಡುವ ಸಾಧ್ಯತೆ. ಧಾನ್ಯ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ.

ಸಿಂಹ: ಚಿನ್ನಾಭರಣಗಳ ವ್ಯವಹಾರ ಪ್ರಾರಂಭಿಸಲು ಉತ್ತಮ ದಿನ. ಲೆಕ್ಕಪತ್ರ ಪರಿಶೀಲನೆಯಲ್ಲಿ ಹೆಚ್ಚಿನ ಕಾಲ ಕಳೆಯಬೇಕಾದೀತು. ಉತ್ತಮ ಆದಾಯ. ಪುಸ್ತಕ ಗ್ರಂಥಗಳ ಖರೀದಿಗಾಗಿ ಖರ್ಚು.

ಕನ್ಯಾ: ತಂದೆ ತಾಯಿಗಳಿಗೆ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಯೋಗ. ಸತ್ಪುರುಷರ ಸಂದರ್ಶನ ಮಾಡುವ ಸಾಧ್ಯತೆ. ಅಧ್ಯಯನದಲ್ಲಿಯ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಮಾರ್ಗವಾಗಲಿದೆ.

ತುಲಾ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳ ಮೊರ ಹೊಗಬೇಕಾದೀತು. ದೂರದ ಪ್ರಯಾಣ ಸಾಧ್ಯತೆ. ಸ್ವಂತ ವಾಹನ ಖರೀದಿಯಿಂದ ನೆಮ್ಮದಿ.

ವೃಶ್ಚಿಕ: ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಹರಿಸಬೇಕಾದೀತು. ನೆರೆಯವರೊಂದಿಗೆ ಸ್ನೇಹ ಸಂಬಂಧಗಳು ವೃದ್ಧಿಯಾಗಲಿವೆ. ಮನೆ ಬದಲಾವಣೆ ವಿಚಾರ ಚರ್ಚೆಗೆ ಬರಲಿದೆ. ಅತಿಯಾದ ಪ್ರಯಾಣದಿಂದಾಗಿ ದೇಹಾಯಾಸ.

ಧನು: ಪ್ರಾಪ್ತ ವಯಸ್ಕರು ವೈವಾಹಿಕ ಜೀವನಕ್ಕೆ ಕಾಲಿಡಲು ಮಾಡಿದ ಪ್ರಯತ್ನಗಳು ಫಲ ನೀಡಲಿವೆ. ಗಣ್ಯರೊಂದಿಗೆ ಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ. ನಿಮ್ಮ ಸಹಾಯ ಸಲಹೆ ಕೋರಿ ಬರುವವರಿಗೆ ಸಹಾಯ ನೀಡಿ.

ಮಕರ: ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಸ್ಯ. ಗುರುದೇವತಾ ದರ್ಶನ ಮಾಡುವ ಸಾಧ್ಯತೆ ಕಂಡುಬರುವುದು.

ಕುಂಭ: ಹಂತಹಂತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಬಂಧುಗಳ ಆಗಮನದಿಂದ ಸಂತಸ. ಸಂಬಂಧಿಕರೊಂದಿಗೆ ಸುದೀರ್ಘ ಆಪ್ತ ಸಮಾಲೋಚನೆಯಿಂದಾಗಿ ಬಾಂಧವ್ಯದಲ್ಲಿ ವೃದ್ಧಿ.

ಮೀನ: ಜಮೀನಿನ ಕೆಲಸ-ಕಾರ್ಯಗಳು ಭರದಿಂದ ಸಾಗುವುದರ ಜೊತೆಗೆ ಕಾಮಗಾರಿಗಳು ಹೆಚ್ಚಳಗೊಳ್ಳುವವು. ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯುವ ಅವಶ್ಯಕತೆ ನೀಗಲಿದೆ ಒಂಟಿತನ ಕಾಡಲಿದೆ.

ನಿಮ್ಮ ಜನ್ಮದಿನ 5-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ರಾಜಕೀಯದ ನಡೆಗಳಿಗೆ ಪುಷ್ಟಿ ದೊರಕುವಂತಹ ಘಟನಾವಳಿಗಳ ಮತ್ತು ಅವಕಾಶಗಳು ಸಾಲು ಸಾಲಾಗಿ ಬರಲಿವೆ. ಆದರ್ಶಪ್ರಾಯ ರಾಜಕಾರಣಕ್ಕೆ ಕಾಲಿಡಲಿದ್ದೀರಿ. ನಿಮ್ಮ ಅತ್ಯಂತ ಪ್ರಿಯವಾದ ಹುದ್ದೆಯನ್ನೇ ಅಲಂಕರಿಸುವ ಸಾಧ್ಯತೆ. ಆರೋಗ್ಯ ಸ್ಥಿತಿಯಲ್ಲಿ ಉತ್ತಮ.

ಪದಬಂಧ 4558 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಇದು ಪೂರ್ವಕಥೆ ಅಥವಾ ಚರಿತ್ರೆ (4)
3.ಬಹುಕಾಲ ಇರುವಂಥದ್ದು (4)
4.ಪ್ರತ್ಯೇಕವಾಗಿ ತೆಗೆದಿರಿಸಿದ ವಸ್ತು (3)
5.ಅಪೂರ್ವವೂ ಆಗಿರುವ ವಿರಳತೆ (4)
7.ಕರುವಿನಲ್ಲಿ ಅಶ್ರು ಕಾಣುತ್ತಿದೆಯೇ? (3)
9.ತಿರುಗಿದ ವರನಿಗೆ ಕೇಳಿಸಿದ ಧ್ವನಿ (2)
10.ನಾಟಕದಲ್ಲಿರುವ ಮರದ ದಿಮ್ಮಿ (2)
11.ಓದು ಬರಹ ಬಾರದವರಿಗಾಗಿ ಬರೆದು ಕೊಟ್ಟಿದ್ದು (3)
13.ವೃಕ್ಷದ ಬಳಿಯಿರುವ ಪಚ್ಚೆ (4)
14.ಆಕಾಶ ಇಲ್ಲಿ ಕಾಣುತ್ತಿದೆ (3)
15.ಕೊನೆಗೆ ವಿಕ್ರಯಿಸಿದ್ದಕ್ಕೇ ಇಷ್ಟು ಅಸ್ತವ್ಯಸ್ತತೆ (4)
16.ಈತ ನಾಶ ಮಾಡುವವನು (4)

ಮೇಲಿಂದ ಕೆಳಕ್ಕೆ
2.ಹತ್ತಿರ ಎಂದು ಹೀಗೆನ್ನಿ (3)
3.ಬಾಗಿಲು ಭದ್ರಪಡಿಸುವ ಕೊಂಡಿ (3)
6.ಬೇರೆಯವರ ಅವಲಂಬನೆ (5)
8.ದುಃಖಾಂತವಾದ ಪ್ರಹಸನ (5)
12.ಹಡಗನ್ನು ಬಂದರಿನಲ್ಲಿ ನಿಲ್ಲಿಸಲು ಬಳಸುವ ಸಾಧನ (3)
13.ಮನದಿಂದ ಮಾಡಿಕೊಂಡಿರುವ ಅರಿಕೆ (3)



4557ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉದ್ದಾಮ 3.ಇಂಚರ 5.ಜನಾನುರಾಗಿ 6.ಗವಿ 8.ಮಾಸ 9.ವರ 10.ಕಸು 14.ಮರ್ಮಭೇದಕ 15.ರವಾನೆ 16.ವಠಾರ

ಮೇಲಿಂದ ಕೆಳಕ್ಕೆ: 1.ಉಪಯೋಗ 2.ಮಜಲು 3.ಇಂಗಿತ 4.ರಸಾಭಾಸ 7.ವಿಧುರ 8.ಮಾಪಕ 9.ವನಚರ 11.ಸುಕುಮಾರ 12.ಕಾಮನೆ 13.ಕಕವ

ಸುಡೊಕು 4944

			9				2	
	4				2			
2		9	3				6	
9		4						2
			4		9	1		
	3					9		6
4					8		7	
		1	7			2		3
8		2		5			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4943 ಸುಡೊಕು

2	5	4	6	9	1	7	8	3
6	1	8	4	3	7	9	5	2
7	3	9	2	5	8	4	6	1
4	9	1	3	2	5	8	7	6
3	8	7	1	4	6	5	2	9
5	2	6	8	7	9	1	3	4
1	6	5	9	8	2	3	4	7
9	7	3	5	6	4	2	1	8
8	4	2	7	1	3	6	9	5

ಎಫ್‌ಪಿಐ ಒಳಹರಿವು ₹ 17,304 ಕೋಟಿ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಸತತ ಮೂರನೇ ತಿಂಗಳಿನಲ್ಲಿಯೂ ದೇಶದ ಮಾರುಕಟ್ಟೆಗಳಲ್ಲಿ ಉತ್ತಮ ಖರೀದಿ ವಹಿವಾಟು ನಡೆಸಿದ್ದಾರೆ. ಮಾರ್ಚ್ ತಿಂಗಳಿನಲ್ಲಿ ಒಟ್ಟಾರೆ ₹ 17,304 ಕೋಟಿ ಹೂಡಿಕೆ ಮಾಡಿದ್ದಾರೆ.

ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವುದು ದೇಶದ ಮಾರುಕಟ್ಟೆಗಳಲ್ಲಿ ಹೂಡಿಕೆ ಮೇಲೆ ಪರಿಣಾಮ ಬೀರುತ್ತಿದೆ. ಹೀಗಿದ್ದರೂ ಲಸಿಕೆ ಲಭ್ಯವಾಗುತ್ತಿರುವುದು ಹಾಗೂ ಆರ್ಥಿಕತೆಯ ಚೇತರಿಕೆ ಕಾಣುತ್ತಿರುವುದರಿಂದಾಗಿ ಎರಡನೇ ಅಲೆಯ ಸಂದರ್ಭದಲ್ಲಿಯೂ ಮಾರುಕಟ್ಟೆಯು ಸ್ಥಿರವಾಗಿಯೇ ಇದೆ ಎಂದು ಗ್ರೋಯ್ ಸಂಸ್ಥೆಯ ಸಹ ಸ್ಥಾಪಕ ಹರ್ಷ್ ಜೈನ್ ಹೇಳಿದ್ದಾರೆ.

ಮೊಬೈಲ್ ಸೇವಾ ಶುಲ್ಕ: ಸಮೀಕ್ಷೆಗೆ ಟ್ರಾಯ್ ಚಿಂತನೆ

ನವದೆಹಲಿ (ಪಿಟಿಐ): ಮೊಬೈಲ್ ದೂರಸಂಪರ್ಕ ಕಂಪನಿಗಳು ನೀಡುತ್ತಿರುವ ವಿವಿಧ ಯೋಜನೆಗಳು ಗ್ರಾಹಕರ ಬಹುಬಗೆಯ ಅಗತ್ಯಗಳನ್ನು ಪೂರೈಸುವಂತೆ ಇವೆಯೇ ಎಂಬುದನ್ನು ತಿಳಿಯಲು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಸಮೀಕ್ಷೆಯೊಂದನ್ನು ನಡೆಸುವ ಚಿಂತನೆಯಲ್ಲಿದೆ.

ಈ ಸಮೀಕ್ಷೆ ನಡೆಸಲು ಏಜೆನ್ಸಿಯೊಂದನ್ನು ಟ್ರಾಯ್ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಬಹುದು. ಸಮೀಕ್ಷೆಯು ಶೀಘ್ರದಲ್ಲಿಯೇ ಶುರುವಾಗುವ ನಿರೀಕ್ಷೆ ಇದೆ ಎಂದು ಟ್ರಾಯ್ ಅಧಿಕಾರಿಯೊಬ್ಬರು ತಿಳಿಸಿದರು.

ಕಂಪನಿಗಳು ರೂಪಿಸಿರುವ ಯೋಜನೆಗಳು ಗ್ರಾಹಕರ ಅಗತ್ಯಗಳಿಗೆ ಅನುಗುಣವಾಗಿ ಇರಬೇಕು. ಧ್ವನಿ ಕರೆಗಳ ಸೇವೆಯನ್ನು ಹೆಚ್ಚಾಗಿ ಬಳಸುವವರಿಗೂ, ಇಂಟರ್ನೆಟ್ ಹೆಚ್ಚಾಗಿ ಬಳಸುವವರಿಗೂ ಹೊಂದಿಕೆ ಆಗುವಂತೆ ಇರಬೇಕು. ನಿರ್ದಿಷ್ಟ ಬಗೆಯ ಯೋಜನೆಗಳನ್ನೇ ಆಯ್ಕೆ ಮಾಡಿಕೊಳ್ಳಬೇಕಾದ ಒತ್ತಡವು ಗ್ರಾಹಕರ ಮೇಲೆ ಇರಬಾರದು ಎಂದು ಅಧಿಕಾರಿಯೊಬ್ಬರು ಈ ಸಮೀಕ್ಷೆಯ ಉದ್ದೇಶದ ಕುರಿತು ವಿವರಣೆ ನೀಡಿದರು.

ಫೀಚರ್ ಫೋನ್‌ಗಳನ್ನು ಬಳಸುವವರ ಸೇವೆಗಳ ಬೇರೆ ಬೇರೆ ವರ್ಗಗಳ ಗ್ರಾಹಕರ ಬೇಡಿಕೆಗಳು ಬೇರೆ ಬೇರೆಯಾಗಿ ಇದ್ದರೂ ಮಾರುಕಟ್ಟೆಯಲ್ಲಿ ಲಭ್ಯವಿರುವ ಕೆಲವು ಯೋಜನೆಗಳು ಒಂದೇ ಸ್ವರೂಪದಲ್ಲಿ ಇವೆಯೇ ಎಂಬುದನ್ನು ಕಂಡುಕೊಳ್ಳುವ ಉದ್ದೇಶ ಕೂಡ ಟ್ರಾಯ್‌ಗೆ ಇದೆ.

ಸಮೀಕ್ಷೆ ಹೇಗಿರಬೇಕು, ಯಾವ ಮಾಧ್ಯಮದ ಮೂಲಕ ಸಮೀಕ್ಷೆಯನ್ನು ನಡೆಸಬೇಕು ಎಂಬುದನ್ನು ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದು ಮೂಲಗಳು ವಿವರಿಸಿವೆ.

ಈಗ ಜಾರಿಯಲ್ಲಿ ಇರುವ ನಿಯಮಗಳ ಪ್ರಕಾರ, ಮೊಬೈಲ್ ದೂರಸಂಪರ್ಕ ಸೇವಾ ಕಂಪನಿಗಳು ತಮ್ಮ ಸೇವಾ ಶುಲ್ಕಗಳನ್ನು ನಿಗದಿ ಮಾಡುವ ವಿಚಾರದಲ್ಲಿ ಮುಕ್ತ ಸ್ವಾತಂತ್ರ್ಯ ಹೊಂದಿವೆ. ಆದರೆ ಅವು ಯಾವುದೇ ಹೊಸ ಯೋಜನೆ ಜಾರಿಗೆ ತಂದ ಒಂದು ವಾರದಲ್ಲಿ ಅದರ ಬಗ್ಗೆ ಟ್ರಾಯ್‌ಗೆ ಮಾಹಿತಿ ನೀಡಬೇಕಿದೆ.

ಚಿರಸ್ಮರಣೆ

ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿ

ನಿಧನ 5.4.1993

ನೀವು ನಮ್ಮನ್ನಗಲಿ ಇಂದಿಗೆ 28 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ

ಸೊಸೆ: ಶ್ರೀಮತಿ ಕೆ.ಜಿ. ಯಶೋದ, ಎಸ್.ಆರ್. ನಾಗರಾಜ ರೆಡ್ಡಿ, ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಚಕ್ರಬಡ್ಡಿ ಮನ್ನಾ: ಬ್ಯಾಂಕ್‌ಗಳಿಗೆ ₹2,000 ಕೋಟಿ ಹೊರೆ?

ನವದೆಹಲಿ (ಪಿಟಿಐ): ಸಾಲದ ಕಂತುಗಳನ್ನು ಕಟ್ಟಲು 2020ರ ಮಾರ್ಚ್‌ನಿಂದ ಆಗಸ್ಟ್‌ವರೆಗೆ ನೀಡಿದ್ದ ವಿನಾಯಿತಿ ಅವಧಿಗೆ ಸಂಬಂಧಿಸಿದ ಚಕ್ರಬಡ್ಡಿಯನ್ನು ಮನ್ನಾ ಮಾಡುವಂತೆ ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ಆದೇಶದ ಪರಿಣಾಮವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಹೆಚ್ಚುವರಿಯಾಗಿ ಗರಿಷ್ಠ ₹ 2 ಸಾವಿರ ಕೋಟಿ ಹೊರೆ ಹೊರಬೇಕಾಗಬಹುದು.

₹ 2 ಕೋಟಿಗಿಂತ ಕಡಿಮೆ ಮೊತ್ತದ ಸಾಲಗಳ ಮೇಲಿನ ಚಕ್ರಬಡ್ಡಿಯನ್ನು ನವೆಂಬರ್‌ನಲ್ಲಿ ಮನ್ನಾ ಮಾಡಲಾಯಿತು. ಆದರೆ ಈಗ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ₹ 2 ಕೋಟಿಗಿಂತ ಹೆಚ್ಚಿನ ಮೊತ್ತದ ಸಾಲಗಳಿಗೂ ಅನ್ವಯ ಆಗುತ್ತದೆ. ಚಕ್ರಬಡ್ಡಿ ಮನ್ನಾ ಯೋಜನೆಯು, ವಿನಾಯಿತಿ ಸೌಲಭ್ಯ ಪಡೆಯದವರಿಗೂ ಅನ್ವಯವಾಗಿದೆ. ಚಕ್ರಬಡ್ಡಿ ಮನ್ನಾ ಮಾಡಲು 2020–21ರಲ್ಲಿ ಕೇಂದ್ರವು ಒಟ್ಟು ₹ 5,500 ಕೋಟಿ ವಿನಿಯೋಗಿಸಿದೆ.

ಈಗ, ಕಂತು ಕಟ್ಟಲು ವಿನಾಯಿತಿ ಪಡೆದಿದ್ದ ಅವಧಿಗೆ ಮಾತ್ರ ಅನ್ವಯವಾಗುವಂತೆ ಚಕ್ರಬಡ್ಡಿಯನ್ನು ಮನ್ನಾ ಮಾಡಬೇಕಿರುವ ಕಾರಣ ಬ್ಯಾಂಕ್‌ಗಳು ಮನ್ನಾ ಮಾಡಲಿವೆ. ಉದಾಹರಣೆಗೆ, ಸಾಲಗಾರನೊಬ್ಬ ಮೂರು ತಿಂಗಳ ಅವಧಿಗೆ ವಿನಾಯಿತಿ ಪಡೆದಿದ್ದರೆ ಆ ಅವಧಿಗೆ ಮಾತ್ರ ಚಕ್ರಬಡ್ಡಿ ಮನ್ನಾ ಸೌಲಭ್ಯ ಸಿಗಲಿದೆ.

ಈಗ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಕಂತು ಹಿಂದಿರುಗಿಸಲು ವಿನಾಯಿತಿ ಪಡೆದಿದ್ದ ಅವಧಿಗೆ ಮಾತ್ರ ಸೀಮಿತವಾಗಿದೆ. ಹಾಗಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಹೊರಬೇಕಾಗಿರುವ ಹೊರೆ ₹ 2 ಸಾವಿರ ಕೋಟಿಗಿಂತ ಕಡಿಮೆ ಇರಲಿದೆ ಎಂದು ಮೂಲಗಳು ಹೇಳಿವೆ. ಅಲ್ಲದೆ, ಯಾವ ದಿನಾಂಕದ ಮೊದಲು ಚಕ್ರಬಡ್ಡಿಯನ್ನು ಮನ್ನಾ ಮಾಡಬೇಕು ಎಂದು ತೀರ್ಪಿನಲ್ಲಿ ಹೇಳಿಲ್ಲ. ಹಾಗಾಗಿ, ಹಂತ ಹಂತವಾಗಿ ಮನ್ನಾ ಮಾಡಬಹುದು ಎಂದು ಅಧಿಕಾರಿಯೊಬ್ಬರು ಹೇಳಿದರು.

ಈ ನಡುವೆ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವ ಭಾರತೀಯ ಬ್ಯಾಂಕ್‌ಗಳ ಒಕ್ಕೂಟವು ಚಕ್ರಬಡ್ಡಿ ಮನ್ನಾ ಮಾಡುವುದರಿಂದ ಆಗುವ ಹಣಕಾಸಿನ ಹೊರೆಗೆ ಪ್ರತಿಯಾಗಿ ಬ್ಯಾಂಕ್‌ಗಳಿಗೆ ಸರ್ಕಾರವೇ ಹಣ ಕೊಡಬೇಕು ಎಂದು ಕೇಳಿದೆ. ಈ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಬೇಕಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹436

ಐಪಿಒ: ಅರಿತು ಹೂಡಿಕೆ ಮಾಡಿದರೆ ಒಳ್ಳೆಯ ಲಾಭ

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಷೇರುಪೇಟೆ

ಆಲೆದು–ತೂಗಿ, ಅರಿತು ಹೂಡಿಕೆ ಮಾಡಿದರೆ ಐಪಿಒ (ಇನಿಷಿಯಲ್ ಪಬ್ಲಿಕ್ ಆಫರಿಂಗ್ – ಆರಂಭಿಕ ಸಾರ್ವಜನಿಕ ಹೂಡಿಕೆ) ಹೂಡಿಕೆಯಿಂದ ಅಲ್ಪಾವಧಿಯಲ್ಲಿ ಮತ್ತು ದೀರ್ಘಾವಧಿಯಲ್ಲಿ ಒಳ್ಳೆಯ ಲಾಭ ಪಡೆಯಬಹುದು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಸರಿಯಾದ ಅಧ್ಯಯನ ಮಾಡದೆ ಯಾರದ್ದೋ ಮಾತು ಕೇಳಿ, ಸಿಕ್ಕಸಿಕ್ಕ ಕಂಪನಿಗಳ ಐಪಿಒದಲ್ಲಿ ಹೂಡಿಕೆ ಮಾಡಿದರೆ ಲಾಭ ಮಾಡಿಕೊಳ್ಳುವ ವಿಚಾರ ಹಾಗಿರಲಿ, ನಿಮ್ಮ ಮೂಲ ಬಂಡವಾಳವೇ ಕರಗಿಹೋಗಬಹುದು.

'ಹರಿಷದ ಕೂಳಿನ ಆಸೆಗೆ ವರುಷದ ಕೂಳನ್ನು ಕಳೆದುಕೊಳ್ಳಬಾರದು' ಎನ್ನುವ ಗಾದೆಯನ್ನು ನೀವು ಕೇಳಿರಬೇಕಲ್ಲ? ಈ ಮಾತನ್ನು ನೆನಪಿಟ್ಟುಕೊಂಡು ಐಪಿಒಗಳಲ್ಲಿ ಹೂಡಿಕೆ ಮಾಡಬೇಕು.

ಅತಿಆಸೆ ಗತಿಗೇಡು: ಸಾಲು ಸಾಲು ಐಪಿಒ ನಡೆಯುತ್ತಿರುವ ಸುದ್ದಿ ಕೇಳಿ ನನ್ನ ಸ್ನೇಹಿತನೊಬ್ಬ ಹೆಚ್ಚೆಚ್ಚು ಹಣ ಗಳಿಸಬಹುದು ಎಂದು ಬಹಳ ಉತ್ಸುಕನಾಗಿದ್ದ. ಮಾರ್ಚ್‌ನಲ್ಲಿ ನಡೆದ ಬಹುತೇಕ ಎಲ್ಲ ಕಂಪನಿಗಳ ಐಪಿಒಗೆ ಆತ ಸಾಲ ಸೋಲ ಮಾಡಿ ಬಿಡ್ ಮಾಡಿದ. ಕಂಪನಿಗಳು ಷೇರುಪೇಟೆಗೆ ಸೇರ್ಪಡೆಗೊಳ್ಳುವ ದಿನ ಬಂಪರ್ ಲಾಭ ಗಳಿಸಬಹುದು ಎಂದು ಆತ ಲೆಕ್ಕಾಚಾರ ಹಾಕಿದ್ದ. ಆದರೆ ಷೇರುಪೇಟೆಗೆ ಸೇರ್ಪಡೆಗೊಳ್ಳುವ ದಿನ ಉತ್ತಮ ಲಾಭ (Listing Gains) ಕೊಡುವಂತಿದ್ದ ಯಾವ ಕಂಪನಿಯ ಐಪಿಒಗಳು ಕೂಡ ಅವನಿಗೆ ಸಿಗಲಿಲ್ಲ. ಷೇರುಪೇಟೆಗೆ ಸೇರ್ಪಡೆಗೊಳ್ಳುವ ದಿನ ನಕಾರಾತ್ಮಕ ಫಲಿತಾಂಶ (Negative Returns) ಕೊಟ್ಟ ಬಹುತೇಕ ಕಂಪನಿಗಳ ಐಪಿಒಗಳು ಆತನಿಗೆ ಸಿಕ್ಕಿದ್ದವು.

ಬರೋಬ್ಬರಿ ₹ 10 ಸಾವಿರ ನಷ್ಟದ ಹೊರೆಯನ್ನು ಆತ ಹೊರಬೇಕಾಗಿ ಬಂತು. ದಿಢೀರ್ ಹಣ ಗಳಿಸಬೇಕು ಎನ್ನುವ ಮನಸ್ಥಿತಿಯೇ ಈ ಸ್ಥಿತಿಗೆ ಕಾರಣ ಎಂಬುದು ನನ್ನ ಸ್ನೇಹಿತನಿಗೆ ಅರ್ಥವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ.

ಅರಿತು ಹೂಡಿಕೆ ಮಾಡುವುದರಿಂದ ಲಾಭ: ನನ್ನ ಮತ್ತೊಬ್ಬ ಸ್ನೇಹಿತನೂ ಮಾರ್ಚ್‌ನಲ್ಲಿನ ಸಾಲು ಸಾಲು ಐಪಿಒಗಳ ಬಗ್ಗೆ ಉತ್ಸುಕನಾಗಿದ್ದ. ಆದರೆ ಆತ ಆತುರಾತುರವಾಗಿ ತೀರ್ಮಾನ ತೆಗೆದುಕೊಳ್ಳಲಿಲ್ಲ. ಯಾವ ಕಂಪನಿಗಳು ಐಪಿಒ ನಡೆಸುತ್ತಿವೆ? ಆ ಸಂಸ್ಥೆಗಳ ಆರ್ಥಿಕ ಸ್ಥಿತಿಗತಿ ಹೇಗಿದೆ? ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ? ಲಾಭ ಗಳಿಕೆ ಸ್ಥಿರವಾಗಿದೆಯಾ? ದೀರ್ಘಾವಧಿಗೆ ಈ ಷೇರುಗಳನ್ನು ಇಟ್ಟುಕೊಳ್ಳಬೇಕೇ? ಅಲ್ಪಾವಧಿಯಲ್ಲಿ ಮಾರಾಟ ಮಾಡಿದರೆ ಒಳಿತಾ?... ಹೀಗೆ ಎಲ್ಲ ಆಯಾಮಗಳಿಂದಲೂ ಅಧ್ಯಯನ ಮಾಡಿ ಆಯ್ದ ಉತ್ತಮ ಕಂಪನಿಗಳಿಗೆ ಮಾತ್ರ ಬಿಡ್ ಮಾಡಿದ. ಒಂದು ಉತ್ತಮ ಕಂಪನಿಯ ಐಪಿಒ ಅವನಿಗೆ ಸಿಕ್ಕಿತು. ಷೇರುಪೇಟೆಗೆ ಸೇರ್ಪಡೆಗೊಳ್ಳುವ ದಿನವೇ ಆ ಐಪಿಒದಿಂದ ನನ್ನ ಸ್ನೇಹಿತನಿಗೆ ₹ 14 ಸಾವಿರ ಲಾಭ ಸಿಕ್ಕಿತು.

ಅನಿಶ್ಚಿತತೆಯ ನಡುವೆ ಜಿಗಿದ ಷೇರುಪೇಟೆ

ಏಪ್ರಿಲ್ 1ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಶೇ 2ರಷ್ಟು ಗಳಿಕೆ ಕಂಡಿವೆ. 50,029 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2ರಷ್ಟು ಗಳಿಕೆ ಕಂಡಿದ್ದರೆ 14,867 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.4ರಷ್ಟು ಗಳಿಸಿದೆ. ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 2.7ರಷ್ಟು ಮತ್ತು ಶೇ 4ರಷ್ಟು ಜಿಗಿದಿವೆ. ಅಮೆರಿಕದಲ್ಲಿ ಆರ್ಥಿಕ ಪ್ಯಾಕೇಜ್ ಘೋಷಣೆ, ಮಾರ್ಚ್ ತಿಂಗಳಲ್ಲಿ ವಾಹನ ಮಾರಾಟದಲ್ಲಿ ಹೆಚ್ಚಳ, ಜಿಎಸ್‌ಟಿ ಸಂಗ್ರಹದಲ್ಲಿ ದಾಖಲೆ ಏರಿಕೆ ಸೇರಿ ಹಲವು ಅಂಶಗಳು ಷೇರುಪೇಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ಮತ್ತು ಫಾರ್ಮಾ ವಲಯಗಳು ಕ್ರಮವಾಗಿ ಶೇ 8.6 ಮತ್ತು ಶೇ 4.2ರಷ್ಟು ಜಿಗಿದಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.7ರಷ್ಟು, ನಿಫ್ಟಿ ಬ್ಯಾಂಕ್ ಶೇ 1.9ರಷ್ಟು ಹೆಚ್ಚಳ ಕಂಡಿವೆ. ಇನ್ನು ನಿಫ್ಟಿಯಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ ಶೇ 14ರಷ್ಟು, ಟಾಟಾ ಸ್ಟೀಲ್ ಶೇ 12ರಷ್ಟು, ಯುಪಿಎಲ್ ಶೇ 11ರಷ್ಟು, ಹಿಂಡಾಲ್ಕೊ ಶೇ 7ರಷ್ಟು, ಶ್ರೀ ಸಿಮೆಂಟ್ ಶೇ 6ರಷ್ಟು, ಅದಾನಿ ಪೋರ್ಟ್ಸ್ ಶೇ 5ರಷ್ಟು, ಎಚ್‌ಸಿಎಲ್ ಟೆಕ್ ಶೇ 5ರಷ್ಟು, ಐಟಿಸಿ ಶೇ 4.3ರಷ್ಟು ಗಳಿಸಿವೆ.

ಮುನ್ನೋಟ: ಏಪ್ರಿಲ್ 7ರಂದು ಹೊರಬೀಳಲಿರುವ ಆರ್‌ಬಿಐನ ಹಣಕಾಸು ಸಮಿತಿಯ ತೀರ್ಮಾನಗಳು ಮಾರುಕಟ್ಟೆ ಮೇಲೆ ಪ್ರಭಾವ ಬೀರಲಿವೆ. ತ್ರೈಮಾಸಿಕ ಫಲಿತಾಂಶಗಳ ಸರಣಿ ಶುರುವಾಗಲಿದೆ. ಪ್ರಸಕ್ತ ತ್ರೈಮಾಸಿಕ ಫಲಿತಾಂಶದಲ್ಲಿ ಕಂಪನಿಗಳು ಯಾವ ರೀತಿ ಸಾಧನೆ ತೋರಿವೆ ಎನ್ನುವುದು ಮುಖ್ಯವಾಗಲಿದೆ. ಇದರ ಜತೆ ಕೋವಿಡ್ ವಿಚಾರವಾಗಿ ಸರ್ಕಾರ ತೆಗೆದುಕೊಳ್ಳುವ ತೀರ್ಮಾನಗಳು ಸೂಚ್ಯಂಕಗಳ ಮೇಲೆ ಪ್ರಭಾವ ಬೀರಲಿವೆ.

ಮಾರ್ಚ್ 30ಗಳಲ್ಲಿ ನಡೆದ ಐಪಿಒಗಳ ಏಳು–ಬೀಳು

ಕಂಪನಿ ಹೆಸರು	ಐಪಿಒಗೆ ನಿಗದಿಯಾಗಿದ್ದ ಬೆಲೆ	ಷೇರುಪೇಟೆಗೆ ಸೇರ್ಪಡೆಯಾದ ದಿನ ಷೇರಿನ ಬೆಲೆ	ಷೇರುಪೇಟೆಗೆ ಸೇರ್ಪಡೆಯಾದ ದಿನದ ಗಳಿಕೆ
ಎಂಟಾರ್ ಟೆಕ್ನಾಲಜೀಸ್ ಲಿ.	₹575	₹1,078	+87.62%
ಈಜಿ ಟ್ರಿಪ್ ಪ್ಲಾನರ್ಸ್ ಲಿ.	₹187	₹206.50	+10.43%
ಅನುಪಮ್ ರಸಾಯನ್ ಇಂಡಿಯಾ ಲಿ.	₹555	₹518.50	-6.58%
ಲಕ್ಷ್ಮಿ ಆರ್ಗ್ಯಾನಿಕ್ ಇಂಡಸ್ಟ್ರೀಸ್ ಲಿ.	₹130	₹164.5	+26.19%
ಕ್ರಾಫ್ಟ್ಸ್‌ಮನ್ ಆಟೋಮೇಷನ್ ಲಿ.	₹1,490	₹1,415	-5.03%
ಕಲ್ಯಾಣ್ ಜುವೆಲರ್ಸ್ ಇಂಡಿಯಾ ಲಿ.	₹87	₹74.35	-14.54%
ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ.	₹305	₹272	-10.80%
ನಜಾರಾ ಟೆಕ್ನಾಲಜೀಸ್ ಲಿ.	₹1,101	₹1,592	+44.60%

ಅರಿತು ಹೂಡಿಕೆ ಮಾಡಿದರೆ ಎಷ್ಟು ಅನುಕೂಲ ಎನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ.

ಐಪಿಒ ಹಿನ್ನೋಟ: ಐಪಿಒ ಇತಿಹಾಸವನ್ನು ಕೆದಕಿ ನೋಡಿದಾಗ, ಷೇರುಪೇಟೆಗೆ ಸೇರ್ಪಡೆಗೊಳ್ಳುವಾಗ (Listing day) ಪ್ರತಿ ಮೂರು ಕಂಪನಿಗಳ ಪೈಕಿ ಎರಡು ಕಂಪನಿಗಳು ಮಾತ್ರ ಲಾಭ ಕೊಟ್ಟಿರುವುದು ಕಂಡುಬರುತ್ತದೆ. ಆದರೆ ಲಾಭ ಕೊಟ್ಟ ಈ ಎರಡು ಕಂಪನಿಗಳಲ್ಲಿ ಒಂದು ಕಂಪನಿ ಮಾತ್ರ ದೀರ್ಘಾವಧಿಯಲ್ಲೂ ಲಾಭ ಕೊಟ್ಟಿರುವುದು ಕಂಡುಬಂದಿದೆ. 2017ರ ಆಸುಪಾಸಿನಲ್ಲಿ ಷೇರುಪೇಟೆಗೆ ಸೇರ್ಪಡೆಗೊಂಡಿರುವ 266 ಕಂಪನಿಗಳ ಪೈಕಿ 37 ಕಂಪನಿಗಳು ಮಾತ್ರ ಷೇರುಪೇಟೆಗೆ ಸೇರ್ಪಡೆಗೊಳ್ಳುವ ದಿನ (Listing Day) ಶೇಕಡ 20ಕ್ಕಿಂತ ಹೆಚ್ಚು ಲಾಭ ಕೊಟ್ಟಿವೆ. ಐಪಿಒ ಹೂಡಿಕೆಯಲ್ಲಿ ಅತಿ ಹೆಚ್ಚು ಲಾಭದ ಸಾಧ್ಯತೆಯ ಜತೆಗೆ ಅತಿ ಹೆಚ್ಚು ರಿಸ್ಕ್ ಕೂಡ ಇದೆ ಎನ್ನುವುದು ಇದರಿಂದ ಮನದಟ್ಟಾಗುತ್ತದೆ.

ಮಾರ್ಚ್‌ನಲ್ಲಿ ನಡೆದ ಐಪಿಒಗಳ ಏಳು ಬೀಳು: ಮಾರ್ಚ್ ತಿಂಗಳಲ್ಲಿ ಐಪಿಒ ನಡೆಸಿ ಷೇರುಪೇಟೆಗೆ ಸೇರ್ಪಡೆಯಾಗಿರುವ ಎಂಟು ಕಂಪನಿಗಳ ಪೈಕಿ ನಾಲ್ಕು ಲಾಭ ಕೊಟ್ಟಿದ್ದು ಇನ್ನುಳಿದ ನಾಲ್ಕು ಕಂಪನಿಗಳು ನಕಾರಾತ್ಮಕ ಫಲಿತಾಂಶ ಕೊಟ್ಟಿವೆ. ಷೇರುಪೇಟೆ ಸೇರ್ಪಡೆ ದಿನದಂದು ಎಂಟಾರ್ ಟೆಕ್ನಾಲಜೀಸ್ ಶೇ 87.63ರಷ್ಟು, ನಜಾರಾ ಟೆಕ್ನಾಲಜೀಸ್ ಶೇ 44.60ರಷ್ಟು, ಲಕ್ಷ್ಮಿ ಆರ್ಗ್ಯಾನಿಕ್ ಶೇ 26.19ರಷ್ಟು ಮತ್ತು ಈಜಿ ಟ್ರಿಪ್ ಪ್ಲಾನರ್ಸ್ ಶೇ 10.43ರಷ್ಟು ಲಾಭ ಕೊಟ್ಟಿವೆ. ಕಲ್ಯಾಣ್ ಜುವೆಲರ್ಸ್ ಶೇ (-)14.54ರಷ್ಟು, ಸೂರ್ಯೋದಯ ಸ್ಮಾಲ್ ಫೈನಾನ್ಸ್ ಶೇ (-)10.80ರಷ್ಟು, ಅನುಪಮ್ ರಸಾಯನ್ ಶೇ (-)6.58ರಷ್ಟು ಮತ್ತು ಕ್ರಾಫ್ಟ್ಸ್‌ಮನ್ ಆಟೋಮೇಷನ್ ಶೇ (-)5.03ರಷ್ಟು ನಕಾರಾತ್ಮಕ ಫಲಿತಾಂಶ ಕೊಟ್ಟಿವೆ.

ಏಪ್ರಿಲ್‌ನಲ್ಲಿ ಸಂಭಾವ್ಯ ಐಪಿಒಗಳು: ಕೆಐಎಂಎಸ್ ಹಾಸ್ಪಿಟಲ್ಸ್, ಸೋನಾ ಬಿಎಲ್‌ಡಬ್ಲ್ಯು ಪ್ರಿಸಿಷನ್ ಫೋರ್ಜಿಂಗ್ಸ್, ಸೆವೆನ್ ಐಲ್ಯಾಂಡ್ ಶಿಪ್ಪಿಂಗ್, ಆಧಾರ್ ಹೌಸಿಂಗ್ ಫೈನಾನ್ಸ್, ಮ್ಯಾಕ್ರೋಟೆಕ್ ಡೆವಲಪರ್ಸ್, ಡೂಡ್ಲಾ ಡೇರಿ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ. ಲಿ., ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಸಂಕ್ಷಿಪ್ತ ಸುದ್ದಿ

ಎಂಎಫ್: ಷೇರುಗಳ ಮೇಲೆ ₹ 2,476 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ಮ್ಯೂಚುವಲ್ ಫಂಡ್ ಸಂಸ್ಥೆಗಳು ಮಾರ್ಚ್ ತಿಂಗಳಿನಲ್ಲಿ ₹ 2,476 ಕೋಟಿ ಮೊತ್ತವನ್ನು ಷೇರುಗಳ ಖರೀದಿಗೆ ಹೂಡಿಕೆ ಮಾಡಿವೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯಲ್ಲಿ (ಸೆಬಿ) ಇರುವ ಮಾಹಿತಿಯ ಪ್ರಕಾರ, 2020ರ ಜೂನ್‌ನಿಂದ 2021ರ ಫೆಬ್ರುವರಿ ತಿಂಗಳವರೆಗೂ ಮ್ಯೂಚುವಲ್ ಫಂಡ್‌ಗಳು ಷೇರುಪೇಟೆಯಿಂದ ಬಂಡವಾಳ ಹಿಂದಕ್ಕೆ ಪಡೆದಿದ್ದವು.

ಮಾರುಕಟ್ಟೆಯು ಬಲವರ್ಧನೆಯ ನಿಧಿ ನಿರ್ವಾಹಕರಿಗೆ ಹೂಡಿಕೆ ಅವಕಾಶಗಳನ್ನು ಒದಗಿಸಿಕೊಟ್ಟಿದ್ದರಿಂದ ಈ ಪ್ರಮಾಣದ ಬಂಡವಾಳ ಹರಿದುಬಂದಿದೆ ಎಂದು ತಜ್ಞರು ಹೇಳಿದ್ದಾರೆ.

ಆರ್ಥ್‌ಬ್ರಿಜ್ ಕಂಪನಿಯ ವರದಿಯಲ್ಲಿ ಉಲ್ಲೇಖ

ಉದ್ಯೋಗಿಗಳಿಂದ ತಪ್ಪು ಮಾಹಿತಿ: ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಧಿಕ

ನವದೆಹಲಿ (ಪಿಟಿಐ): ಕಳೆದ ವರ್ಷ ಐಟಿ ಕ್ಷೇತ್ರದಲ್ಲಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ ಪ್ರತಿ 100 ಜನ ಅಭ್ಯರ್ಥಿಗಳ ಪೈಕಿ 8 ಜನರು ತಪ್ಪು ಮಾಹಿತಿ ನೀಡಿದ್ದಾರೆ. ಉದ್ಯೋಗಿಗಳು ಒದಗಿಸಿರುವ ಮಾಹಿತಿಯಲ್ಲಿ ಗರಿಷ್ಠ ಪ್ರಮಾಣದ ವ್ಯತ್ಯಾಸ ಐಟಿ ವಲಯದಲ್ಲಿಯೇ ಕಂಡು ಬಂದಿದೆ ಎಂದು ಆರ್ಥ್‌ಬ್ರಿಜ್ ಸಂಸ್ಥೆ ಹೇಳಿದೆ.

ಆರ್ಥ್‌ಬ್ರಿಜ್ ಕಂಪನಿಯು ಉದ್ಯೋಗಿಗಳ ಮಾಹಿತಿ ನಿರ್ವಹಣೆ ಹಾಗೂ ಉದ್ಯಮಗಳಿಗೆ ಅಗತ್ಯವಿರುವ ಗುಪ್ತ ಮಾಹಿತಿ ಒದಗಿಸುತ್ತದೆ. ಕಂಪನಿಯು ಇತ್ತೀಚೆಗೆ ಬಿಡುಗಡೆ ಮಾಡಿರುವ 6ನೇ ವಾರ್ಷಿಕ ವರದಿಯಲ್ಲಿ ಈ ವಿಷಯವನ್ನು ಉಲ್ಲೇಖಿಸಿದೆ.

ಐಟಿ ಕ್ಷೇತ್ರದಲ್ಲಿರುವ ಉದ್ಯೋಗಿಗಳು ಅರ್ಜಿಯಲ್ಲಿ ನಮೂದಿಸಿದ್ದ ಮಾಹಿತಿಯನ್ನು ಪರಿಶೀಲನೆ ಮಾಡಲಾಯಿತು. ವಾಸ್ತವಾಂಶಗಳಿಗೂ ಅರ್ಜಿಯಲ್ಲಿರುವ ಮಾಹಿತಿಗೂ ಭಾರಿ ವ್ಯತ್ಯಾಸವಿರುವುದು ಕಂಡು ಬಂದಿತು. ಈ ಪ್ರಮಾಣ ಶೇ 16.60ರಷ್ಟಿದೆ ಎಂದು ಕಂಪನಿಯ ಸಂಸ್ಥಾಪಕ ಹಾಗೂ ಸಿಇಒ ಅಜಯ್ ಟ್ರೆಹಾನ್ ಹೇಳಿದ್ದಾರೆ.

ಐಟಿ ನಂತರದ ಸ್ಥಾನದಲ್ಲಿ ಆರೋಗ್ಯ ಕ್ಷೇತ್ರದ ಕಂಪನಿಗಳ ಉದ್ಯೋಗಿಗಳ ಮಾಹಿತಿಯಲ್ಲಿ ವ್ಯತ್ಯಾಸ ಕಂಡು ಬಂದಿದ್ದು, ಈ ಪ್ರಮಾಣ ಶೇ 12ರಷ್ಟಿದೆ ಎಂದು ಅವರು ತಿಳಿಸಿದ್ದಾರೆ.

ರಿಟೇಲ್ ಉದ್ಯಮ ಕ್ಷೇತ್ರದಲ್ಲಿ ಶೇ 10.22, ಬ್ಯಾಂಕಿಂಗ್ ಮತ್ತು ಫೈನಾನ್ಸ್ ಸರ್ವೀಸ್, ವಿಮೆ (ಬಿಎಫ್‌ಎಸ್‌ಐ) ಹಾಗೂ ಫಾರ್ಮ ಕ್ಷೇತ್ರದಲ್ಲಿನ ಉದ್ಯೋಗಿಗಳು ನೀಡಿರುವ ಮಾಹಿತಿಯಲ್ಲಿನ ವ್ಯತ್ಯಾಸದ ಪ್ರಮಾಣ ಕ್ರಮವಾಗಿ ಶೇ 9.76 ಹಾಗೂ ಶೇ 9.65ರಷ್ಟಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

35 ರಿಂದ 39 ವರ್ಷ ವಯೋಮಾನದ ಅಭ್ಯರ್ಥಿಗಳು ನೀಡಿದ ಮಾಹಿತಿಯಲ್ಲಿ ಗರಿಷ್ಠ ಮಟ್ಟದ ವ್ಯತ್ಯಾಸ (ಶೇ 9.09) ಕಂಡು ಬಂದಿದೆ. ಅಧಿಕ ಪ್ರೋತ್ಸಾಹ ಧನ ಪ್ಯಾಕೇಜ್, ಉತ್ತಮ ಉದ್ಯೋಗಾವಕಾಶಗಳ ಮೇಲೆ ಕಣ್ಣಿಟ್ಟು, ತಪ್ಪು ಮಾಹಿತಿ ನೀಡಿದ್ದು ಕಂಡು ಬಂದಿದೆ.

'ಅಭ್ಯರ್ಥಿಗಳ ಹಿನ್ನೆಲೆಯನ್ನು ಕಟ್ಟುನಿಟ್ಟಾಗಿ ಪರಿಶೀಲನೆ ಮಾಡುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಿದೆ. ಹೀಗಾಗಿ, ಕಳೆದ ಮೂರು ವರ್ಷಗಳಿಂದ ಅಭ್ಯರ್ಥಿಗಳು ತಪ್ಪು ಮಾಹಿತಿ ನೀಡುತ್ತಿರುವುದು ಸಹ 'ಇಳಿಕೆಯಾಗಿದೆ' ಎಂದು ವಿವರಿಸಲಾಗಿದೆ.

ಜೋರ್ಡಾನ್: ರಾಜಕುಮಾರ ಹಮ್ಜಾಗೆ ಗೃಹಬಂಧನ?

ಅಮ್ಮಾನ್ (ಎಪಿ): 'ಮಲಸಹೋದರ, ಜೋರ್ಡಾನ್‌ನ ರಾಜ ಅಬ್ದುಲ್ಲಾ–2 ನನ್ನನ್ನು ಗೃಹ ಬಂಧನದಲ್ಲಿರಿಸಿದ್ದಾರೆ. ಅವರ ನೇತೃತ್ವದ ಆಡಳಿತ ಅಸಮರ್ಥವಾಗಿದ್ದು ಭ್ರಷ್ಟಾಚಾರ ಮಿತಿಮೀರಿದೆ' ಎಂದು ರಾಜಕುಮಾರ ಹಮ್ಜಾ ಬಿನ್ ಅಲ್–ಹುಸೇನ್ ಹೇಳಿದ್ದಾರೆ.

ವಿಡಿಯೊ ಸಂದೇಶದಲ್ಲಿ ಅವರು ಈ ವಿಷಯ ತಿಳಿಸಿದ್ದು ಆ ವಿಡಿಯೊ ಬಿಬಿಸಿಗೆ ಸೋರಿಕೆಯಾಗಿದೆ.

ತಾನು ದಿಗ್ಬಂಧನದಲ್ಲಿರುವ ಹೇಳಿಕೆ ಹಮ್ಜಾ ಪರ ವಕೀಲರು ಒದಗಿಸಿದ್ದಾರೆ ಎಂದೂ ಬಿಬಿಸಿ ಹೇಳಿಕೊಂಡಿದೆ.

ಜೋರ್ಡಾನ್‌ನ ರಾಜಪ್ರಭುತ್ವದಲ್ಲಿ ಕಾಣಿಸಿಕೊಂಡಿರುವ ವೈಮನಸ್ಯವನ್ನು ಈ ಬೆಳವಣಿಗೆ ತೋರುತ್ತದೆ ಎಂದು ಹೇಳಲಾಗುತ್ತಿದೆ.

ಹಮ್ಜಾ ಅವರ ಹೇಳಿಕೆಯನ್ನು ಅಧಿಕಾರಿಗಳು ತಳ್ಳಿಹಾಕಿದ್ದಾರೆ. 'ಅವರನ್ನು ಬಂಧಿಸಿಲ್ಲ ಅಥವಾ ಗೃಹಬಂಧನಕ್ಕೂ ಒಳಪಡಿಸಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸರ್ಕಾರ ರಚನೆಗೆ ನೇಪಾಳ ಕಾಂಗ್ರೆಸ್ ನಿರ್ಧಾರ

ಕಠ್ಮಂಡು (ಪಿಟಿಐ): ಪ್ರಧಾನಿ ಕೆ.ಪಿ. ಶರ್ಮಾ ಒಲಿ ಅವರನ್ನು ಅಧಿಕಾರದಿಂದ ಕೆಳಗಿಳಿಸಿ, ಸಿಪಿಎನ್–ಮಾವೋವಾದಿ ಕೇಂದ್ರ ಮತ್ತು ಇತರ ಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ರಚಿಸುವುದಾಗಿ ನೇಪಾಳದ ಪ್ರಮುಖ ವಿರೋಧ ಪಕ್ಷ ನೇಪಾಳಿ ಕಾಂಗ್ರೆಸ್ ತಿಳಿಸಿದೆ.

ತನ್ನ ನೇತೃತ್ವದಲ್ಲಿ ಹೊಸ ಸರ್ಕಾರ ರಚಿಸುವ ಕ್ರಮಗಳನ್ನು ಕೈಗೊಳ್ಳಲು ನೇಪಾಳ ಕಾಂಗ್ರೆಸ್‌ನ (ಎನ್‌ಸಿ) ಕೇಂದ್ರ ಕಾರ್ಯಕಾರಿ ಸಮಿತಿ ಶನಿವಾರ ನಿರ್ಧರಿಸಿದೆ ಎಂದು ಪಕ್ಷದ ಹಿರಿಯ ನಾಯಕ ಪ್ರಕಾಶ್ ಮನ್ ಸಿಂಗ್ ಹೇಳಿದ್ದಾರೆ.

'ಅಧಿಕಾರದಿಂದ ಕೆಳಗಿಳಿದು, ಹೊಸ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡುವಂತೆ ಪ್ರಧಾನಿ ಕೆ.ಪಿ.ಶರ್ಮಾ ಒಲಿ ಅವರನ್ನು ಕೋರಲಾಗುವುದು. ಪ್ರಧಾನಿ ಹುದ್ದೆಗೆ ಅವರು ರಾಜೀನಾಮೆ ನೀಡದಿದ್ದರೆ, ಜನ ಪ್ರತಿನಿಧಿಗಳ ಸಭೆಯಲ್ಲಿ ಪ್ರಧಾನಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗುವುದು' ಎಂದು ಹೇಳಿದ್ದಾರೆ.

ಇಂಡೋನೇಷ್ಯಾದಲ್ಲಿ ಪ್ರವಾಹ: 44 ಮಂದಿ ಸಾವು

ಜಕಾರ್ತ (ಎಪಿ): ಪೂರ್ವ ಇಂಡೊನೇಷ್ಯಾದಲ್ಲಿ ಭಾರಿ ಮಳೆಯಿಂದಾಗಿ ಉಂಟಾದ ಭೂ ಕುಸಿತ ಮತ್ತು ಪ್ರವಾಹದಲ್ಲಿ 44 ಮಂದಿ ಸಾವಿಗೀಡಾಗಿದ್ದಾರೆ.

ಸಾವಿರಾರು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ ಭಾನುವಾರ ತಿಳಿಸಿದೆ.

ಅತಿ ಹೆಚ್ಚು ಹಾನಿ ಸಂಭವಿಸಿರುವ ಪೂರ್ವ ನುಸಾ ತೆಂಗರಾ ಪ್ರಾಂತ್ಯದ ಈಸ್ಟ್ ಫ್ಲೋರೆಸ್ ಜಿಲ್ಲೆಯಲ್ಲಿ 44 ಮಂದಿ ಸಾವಿಗೀಡಾಗಿದ್ದಾರೆ. ಇನ್ನೂ ಹಲವರು ಮಣ್ಣಿನ ಅಡಿಯಲ್ಲಿ ಸಿಲುಕಿದ್ದು, ರಕ್ಷಣಾ ಕಾರ್ಯ ಕೈಗೊಳ್ಳಲಾಗಿದೆ. ಹಲವೆಡೆ ಸೇತುವೆಗಳು ಮತ್ತು ರಸ್ತೆಗಳು ಕೊಚ್ಚಿ ಹೋಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂಡೊನೇಷ್ಯಾ: ಹಡುಗು–ದೋಣಿ ಡಿಕ್ಕಿ, 17 ಮಂದಿ ನಾಪತ್ತೆ

ಜಕಾರ್ತ (ಎಪಿ): 'ಇಂಡೊನೇಷ್ಯಾದ ಜಾವಾ ದ್ವೀಪದಲ್ಲಿ ಸರಕು ಸಾಗಣೆ ಹಡಗು ಮತ್ತು ಮೀನುಗಾರಿಕೆ ದೋಣಿಯ ನಡುವೆ ಡಿಕ್ಕಿ ಸಂಭವಿಸಿದ್ದು, 17ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

'ಇಂದ್ರಮಾಯು ಜಿಲ್ಲೆಯಲ್ಲಿ ಶನಿವಾರ ತಡರಾತ್ರಿ ಇಂಡೊನೇಷ್ಯಾದ ಎಂವಿ ಹ್ಯಾಪ್ಪಿ ಫಯೋನೀರ್ ಸರಕು ಸಾಗಣೆ ಹಡಗಿಗೆ ಮೀನುಗಾರಿಕೆ ದೋಣಿ ಡಿಕ್ಕಿ ಹೊಡೆದಿದೆ. ಇದರಿಂದಾಗಿ ದೋಣಿಯು ನೀರಿನಲ್ಲಿ ಮುಳುಗಿದೆ. ಈ ದೋಣಿಯಲ್ಲಿ 32 ಮಂದಿ ಇದ್ದರು' ಎಂದು ಕೋಸ್ಟ್ ಗಾರ್ಡ್ ಮತ್ತು ರಕ್ಷಣಾ ಸಂಸ್ಥೆಯ ಮುಖ್ಯಸ್ಥ ಡೆಡೆನ್ ರಿದ್ವಾನ್ಸ್ಯಾ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಾಗುತ್ತದೆ. ESI, PF ನೊಂದಿಗೆ 16,600-60,000/- ವಸತಿಯುಟವಿರುತ್ತದೆ. ಸಂಪರ್ಕಿಸಿ:7760014526, 9739544856

ಕರ್ನಾಟಕದಾದ್ಯಂತ OFFICE, Company ಗಳಿಗೆ ಯುವಕ-ಯುವತಿಯರು ಬೇಕಾಗಿದ್ದಾರೆ.10th, PUC, Any Degree, ITI, Diploma Pass/ Fail, ನೇರನೇಮಕಾತಿ ಸಂಬಳ:16,200-65,000/- ಊಟ ವಸತಿಯೊಂದಿಗೆ 8095037111, 8095036111.

WORK FROM HOME:ಯುವಕ/ ಯುವತಿಯರಿಗೆ, ಗೃಹಿಣಿಯರಿಗೆ, ವಯಸ್ಸಾದವರು,ಮನೆಯಲ್ಲೇ ಕುಳಿತು ಬುಕ್ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884611125, 8884611126

ತಕ್ಷಣ ಬೇಕಾಗಿದ್ದಾರೆ ಹೊಸದಾಗಿ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಏಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯುಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಕಂಪನಿ, ಫ್ಯಾಕ್ಟರಿ ಶೋರೂಮ್, ಬ್ಯಾಂಕಿಂಗ್, ಓಟೆಲ್ ಕೊರಿಯರ್,ಮಾಲ್,ಸೂಪರ್ ಡಿಪಾರ್ಟ್‌ಮೆಂಟ್ ಗಳಲ್ಲಿ ಕೆಲಸ, ಸಂಬಳ 18,000-36,000/- ಆಯ್ತುಭಾಗಗಳಲ್ಲಿ ವಸತಿಯುಟವಿದೆ. 9686115054, 9902603707

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆ ಮನೆಯಲ್ಲಿ ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

ಕಂಪನಿಗಳಿಗೆ ಬೇಕಾಗಿದ್ದಾರೆ. VIDEOCON, ಟಯೋಟ, TVS ಬ್ರಿಟಾನಿಯಾಗಳಿಗೆ SSLC, ITI ನವರು, ಡಿಗ್ರಿಯವರು, ವಿದ್ಯಾರ್ಹತೆಯುಳ್ಳವರು ನೇರನೇಮಕಾತಿ 16,800- 56,000/- ವಸತಿಯುಟವಿದೆ. 9611715755

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು, ವಸತಿಯುಟದೊಂದಿಗೆ 15800-55000/- 7411720916, 7411720920

ಮಹಿಳೆಯರಿಗೆ ಮಹಿಳೆಯರಿಗೆ ಮಹಿಳೆಯರಿಗೆ ಮನೆಯಿಂದಲೇ ಕಾಲ್ ಸೆಂಟರ್ ಮಾದರಿಯಂತಹ ಕೆಲಸ. ಹೆಚ್ಚಿನ ಮಾಹಿತಿಗೆ ನಿಮ್ಮ ಹೆಸರು ಊರಿನ ಹೆಸರು ವಾಟ್ಸಾಪ್ ಮಾಡಿ. ವಾಟ್ಸಾಪ್ ಮಾಡಿ ವಾಟ್ಸಪ್ಪ್ ಮಾಡಿ 9916766429

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರುವವರು ಅಥವಾ ಇಲ್ಲದಿರುವವರೂ ಉಚಿತ ಊಟ ವಸತಿ ಸಂಬಳ 10, 000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು - 56. ಸಂಪರ್ಕಿಸಿ: 9606385001, 9606523337.

Part-Time Jobs

ಮನೆಯಿಂದಲೇ ಕುಳಿತು ಆನ್‌ಲೈನ್ ಡೇಟಾ ಎಂಟ್ರಿ, ಕನ್ನಡ, ಇಂಗ್ಲಿಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-, ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611625051, 9741133555

ಮನೆಯಿಂದಲೇ ಕುಳಿತು ಆನ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲಿಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-, ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611285757, 9611625051

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇ ಇದ್ದರೂ ಶ್ರೀ ಭದ್ರಕಾಳಿಯ ಒಲಿಸ್ಪ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು, ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★||ಸಿಗಂದೂರು ಚೌಡೇಶ್ವರಿ||★ ವಶೀಕರಣ ಆಕರ್ಷಣೆಯಿಂದ ಹಠವ್ಯವಿದಾಗಿದೆ,ತಿಸ್ಸುಡಾಗಿದೆ, ಪತಿ,ಪೀಡಿತ್ಯ,ಕುಟುಂಬ ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ರಾವಣ ತಂತ್ರ ಜ್ಯೋತಿಷ್ಯಂ ಪಂಡಿತ್ ಶ್ರೀ ಗಣೇಶ್ ಭಟ್ಟಾಚಾರ್ಯ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಚೆಟ ಕೊಡಿ ಯಾವುದೇ ವಶೀಕರಣಗಳಿಗೆ ಕೇವಲ 1665/-. 9845899127

★ ವಶೀಕರಣ ಸ್ಪೆಷಲಿಸ್ಟ್ ★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ,25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

★ಕೊಳ್ಳೇಗಾಲದಿಂದ ನೇರಹಾಜರಾತಿ★ ಕೊಳ್ಳೇಗಾಲದ ಪ್ರಸಿದ್ಧ ಮಂತ್ರವಾದಿಗಳು ಮೋಡಿಯಿಂದ ಪ್ರಖ್ಯಾತರಾದ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಪೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬ್ಲಾಕ್_ಸ್ನಾಪ್ ಪಕ್ಕ, ಕೊಳ್ಳೇಗಾಲ. 9686351668

ಭವಿಷ್ಯ
Astrology

220 ರೂಪಾಯಿಗಳಿಗೆ ಪರಿಹಾರ:- ಉದ್ಯೋಗದಾತೆಯ ರಹಸ್ಯವಿದ್ಯೆಯಿಂದ ತಿಳಿಸುವಂತೆ ನಡೆಸುಕೊಳ್ಳಿ, ವ್ಯಾಪಾರವಿಲ್ಲ, ಪ್ರೇಮಯಾಂಬಂದ, ಕಲಹ, 78 ಸಮಸ್ಯೆಗಳಿಗೆ 8884826120. ವಶೀಕರಣದಿಂದ್ದೆಯನ್ನು ಕಲಿಸಲಾಗುತ್ತದೆ.

★||ಶ್ರೀಶಾಕಂಬರಿದೇವಿ||★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ ಸಂಬಂಧ, ವಶೀಕರಣ ಮಾಟಮಂತ್ರ, ಸಾಲಬಾಧೆ,ಶತ್ರುನಾಶ, ಧನಪ್ರಾಪ್ತಿ,ಜನವಶ ಇನ್ನೂಯಾವುದೇ ಸಮಸ್ಯೆಗಳಿಗೆ ನೋಡುವಮೂಲಕ 11ನಿಮಿಷದಲ್ಲಿ ಪರಿಹಾರ. 9008968867

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರಕಟವಾಗುವ ಹಣ, ಸೇವೆ, ವಿಚಾರಗಳ ಜಾಹೀರಾತುದಾರರ ಅಭಿಪ್ರಾಯಗಳಿಗೆ ಪತ್ರಿಕೆ ಹೊಣೆಯಲ್ಲ. ಈ ಜಾಹೀರಾತುಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹಿರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಕೇರಳ: ಎಡರಂಗ ಪರ ಅಲೆ ತಡೆಯಲು ಕಾಂಗ್ರೆಸ್ ಯತ್ನ

• ಅರ್ಜುನ್ ರಘುನಾಥ್

ತಿರುವನಂತಪುರ: ಕೇರಳ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರ ಭಾನುವಾರ ಸಂಜೆ ಅಂತ್ಯಗೊಂಡಿದೆ. ಚುನಾವಣೆ ಘೋಷಣೆಯಾದ ಹೊತ್ತಿನಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಪರವಾದ ಅಲೆ ಇತ್ತು. ಆದರೆ, ಪ್ರಚಾರದ ಕಾವು ಹೆಚ್ಚುತ್ತಾ ಹೋದಂತೆ ಈ ಅಲೆ ಬಿರುಸು ಕಳೆದುಕೊಂಡಿದೆ. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಹೊಸ ಆರೋಪಗಳು, ಸಿಪಿಎಂನ ಕೆಲವು ಮುಖಂಡರಲ್ಲಿ ಅತೃಪ್ತಿ ಇದಕ್ಕೆ ಕಾರಣ. ಅದೇನೇ ಇದ್ದರೂ ಸತತ ಎರಡನೇ ಅವಧಿಗೆ ಅಧಿಕಾರಕ್ಕೆ ಏರಿ ಇತಿಹಾಸ ಸೃಷ್ಟಿಸುವ ಉತ್ಸಾಹದಲ್ಲಿ ಎಡರಂಗ ಇದೆ.

ರಾಷ್ಟ್ರೀಯ ನಾಯಕರ ಭಾಗವಹಿಸುವಿಕೆಯ ಮೂಲಕ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎಯ ಪ್ರಚಾರ ಜೋರಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಸೇರಿ ರಾಷ್ಟ್ರ ಮಟ್ಟದ ಹಲವು ನಾಯಕರು ಬಿಜೆಪಿ ಪರವಾಗಿ ಪ್ರಚಾರ ನಡೆಸಿದ್ದಾರೆ. ಕಾಂಗ್ರೆಸ್ ಪಕ್ಷವು ಸಂಸದ ರಾಹುಲ್ ಗಾಂಧಿ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ಜನಪ್ರಿಯತೆಯನ್ನೇ ನೆಚ್ಚಿಕೊಂಡಿತ್ತು.

10–12 ಕ್ಷೇತ್ರಗಳಲ್ಲಿ ಮೆಟ್ರೊಮ್ಯಾನ್ ಇ. ಶ್ರೀಧರನ್ ಅವರಂತಹ ಪ್ರಭಾವಿ ಅಭ್ಯರ್ಥಿಗಳನ್ನು ಬಿಜೆಪಿ ಕಣಕ್ಕಿಳಿಸಿದ್ದು, ಈ ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ಕಾಣಿಸಿಕೊಳ್ಳಬಹುದು. ಆದರೆ, ಈಗ ಬಿಜೆಪಿ ಹೊಂದಿರುವ ಏಕೈಕ ಕ್ಷೇತ್ರ ನೇಮಮ್‌ನಲ್ಲಿ ಬಿಜೆಪಿ ಗೆಲುವಿನ ಬಗ್ಗೆ ಈಗಲೇ ಏನನ್ನೂ ಹೇಳಲಾಗದು. ಕಾಂಗ್ರೆಸ್ ಪಕ್ಷವು ಜನಪ್ರಿಯ ಮುಖಂಡ ಕೆ. ಮುರಳೀಧರನ್ ಅವರನ್ನು ಕಣಕ್ಕೆ ಇಳಿಸಿದ್ದು ಇದಕ್ಕೆ ಕಾರಣ. ಬಿಜೆಪಿ ತನ್ನ ಮತಬ್ಯಾಂಕ್‌ಗೆ ಕನ್ನ ಹಾಕಬಹುದು ಎಂಬ ಕಳವಳ ಕಾಂಗ್ರೆಸ್‌ನಲ್ಲಿ ಇದೆ. 2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಶೇ 55ರಷ್ಟು ಹಿಂದೂ ಮತದಾರರಿದ್ದಾರೆ. ಇದರಲ್ಲಿ ದೊಡ್ಡಪಾಲು ಕಾಂಗ್ರೆಸ್‌ಗೆ ಬೀಳುವ ಮತಗಳು.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಿರುವಲ್ಲದಲ್ಲಿ ಬಿಜೆಪಿ ಪರವಾಗಿ ರೋಡ್ ಶೋ ನಡೆಸಿದರು

ಎಲ್‌ಡಿಎಫ್ ಸರ್ಕಾರದ ವಿರುದ್ಧದ ಆಡಳಿತ ವಿರೋಧಿ ಮತಗಳಲ್ಲಿಯೂ ಒಂದು ಪಾಲು ಬಿಜೆಪಿಗೆ ಹೋಗಬಹುದು ಎಂಬ ಆತಂಕ ಕಾಂಗ್ರೆಸ್‌ಗೆ ಇದೆ.

ಶಬರಿಮಲೆಗೆ ಎಲ್ಲ ವಯಸ್ಸಿನ ಮಹಿಳೆಯರ ಪ್ರವೇಶದಂತಹ ಧಾರ್ಮಿಕ ವಿಚಾರಗಳು ಈ ಬಾರಿ ಬಹಿರಂಗವಾಗಿಯೇ ಬಳಕೆಯಾಗಿವೆ. ಪ್ರಚಾರ ಭಾಷಣಗಳಲ್ಲಿ 'ಸ್ವಾಮಿಯೇ ಶರಣಂ ಅಯ್ಯಪ್ಪ' ಎಂದು ಪ್ರಧಾನಿ ಕೂಡ ಪಠಿಸಿದ್ದಾರೆ. ಶಬರಿಮಲೆ ವಿಚಾರವು ಹಿನ್ನಡೆಗೆ ಕಾರಣವಾಗಬಹುದು ಎಂಬ ಕಾರಣಕ್ಕೆ ಮುಜರಾಯಿ ಸಚಿವ ಕಡಕಂಪಳ್ಳಿ ಸುರೇಂದ್ರನ್ ಅವರು ವಿಷಾದ ವ್ಯಕ್ತಪಡಿಸಿದ್ದು ಸಿಪಿಎಂಗೆ ಇನ್ನಷ್ಟು ಮುಜುಗರ ತಂದಿತು. ವಿಷಾದ ವ್ಯಕ್ತಪಡಿಸುವ ಅಗತ್ಯವೇ ಇರಲಿಲ್ಲ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರೂ ಹೇಳಿದರು.

ಮುಸ್ಲಿಂ ಸಮುದಾಯದ ಮತಗಳನ್ನು ಸೆಳೆಯಲು ಸಿಪಿಎಂ ಹೆಚ್ಚಿನ ಪ್ರಯತ್ನ ನಡೆಸಿದ್ದು ಇನ್ನೊಂದು ಬೆಳವಣಿಗೆ. ರಾಜ್ಯದಲ್ಲಿ ಮುಸ್ಲಿಂ ಮತದಾರರ ಪ್ರಮಾಣ ಶೇ 27ರಷ್ಟಿದೆ. 'ಕೋಮುವಾದವೇ ಮೈವೆತ್ತಂತಹ ವ್ಯಕ್ತಿ ಅಮಿತ್ ಶಾ' ಎಂದು ಪಿಣರಾಯಿ ವಿಜಯನ್ ಹೇಳಿದ್ದು ಅದರ ಒಂದು ಸೂಚನೆ. ಕಾಂಗ್ರೆಸ್–ಬಿಜೆಪಿ ನಡುವೆ ಒಳ ಒಪ್ಪಂದವಿದೆ ಎಂದು ಸಿಪಿಎಂ ನಿರಂತರವಾಗಿ ಹೇಳಿಕೊಂಡು ಬಂದದ್ದು ಈ ಕಾರ್ಯತಂತ್ರದ ಭಾಗ.

ಕ್ರೈಸ್ತ ಸಮುದಾಯದ ಮತಗಳತ್ತ ಬಿಜೆಪಿ ಕಣ್ಣು ಹಾಕಿದ್ದು ಇನ್ನೊಂದು ಮಹತ್ವದ ಅಂಶ. ದೀರ್ಘ ಕಾಲದಿಂದ ಯುಡಿಎಫ್‌ನಲ್ಲಿದ್ದ ಕೇರಳ ಕಾಂಗ್ರೆಸ್ (ಎಂ), ಕ್ರೈಸ್ತರ ವ್ಯಾಪಕ ಬೆಂಬಲ ಹೊಂದಿದೆ. ಈ ಪಕ್ಷವು ಎಲ್‌ಡಿಎಫ್ ಸೇರಿಕೊಂಡಿದ್ದರಿಂದಾಗಿ ಕಾಂಗ್ರೆಸ್‌ನ ಕ್ರೈಸ್ತ ಮತ ಬ್ಯಾಂಕ್‌ನಲ್ಲಿ ಭಾರಿ ಬಿರುಕು ಮೂಡಿದೆ.

ಸರ್ಕಾರದ ವಿರುದ್ಧ ಕೇಳಿ ಬಂದ ಭ್ರಷ್ಟಾಚಾರ ಆರೋಪಗಳ ಪೈಕಿ ಆಳ ಸಮುದ್ರ ಮೀನುಗಾರಿಕೆಗೆ ಅಮೆರಿಕದ ಕಂಪನಿಯೊಂದರ ಜತೆಗೆ ಮಾಡಿಕೊಂಡ ಒಪ್ಪಂದವು ಚುನಾವಣೆಯ ಮೇಲೆ ಹೆಚ್ಚು ಪರಿಣಾಮ ಬೀರುವ ಸಾಧ್ಯತೆ ಇದೆ. ಮೀನುಗಾರ ಸಮುದಾಯ ಮತ್ತು ಚರ್ಚ್ ಮುಖಂಡರು ಈ ನಿರ್ಧಾರದ ವಿರುದ್ಧ ಹರಿಹಾಯ್ದಿದ್ದಾರೆ. ಕರಾವಳಿಯ 50ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಇದು ಎಲ್‌ಡಿಎಫ್‌ಗೆ ಹಿನ್ನಡೆ ಉಂಟು ಮಾಡಬಹುದು.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಉಚಿತ ಪಡಿತರ ವಿತರಣೆ, ಸಾಮಾಜಿಕ ಭದ್ರತೆಯ ಪಿಂಚಣಿ ಹೆಚ್ಚಳ ಎಲ್‌ಡಿಎಫ್‌ಗೆ ನೆರವಾಗಬಹುದು. ಇದು ರಾಜ್ಯದಾದ್ಯಂತ ಎಲ್‌ಡಿಎಫ್ ಪರವಾದ ಅಲೆ ಮೂಡಿಸಿದೆ.

ಗುಂಪುಗಾರಿಕೆ ಬಯಲಿಗೆ

ಪ್ರಚಾರದ ಆರಂಭದ ದಿನಗಳಲ್ಲಿ ಕಾಂಗ್ರೆಸ್‌ನ ಗುಂಪುಗಾರಿಕೆಯನ್ನು ಸಿಪಿಎಂ ಲೇವಡಿ ಮಾಡಿತ್ತು. ಆದರೆ, ಪ್ರಚಾರ ಕೊನೆಯಾಗುವ ಹೊತ್ತಿಗೆ ಸಿಪಿಎಂನಲ್ಲಿನ ಗುಂಪುಗಾರಿಕೆ ಬಯಲಿಗೆ ಬಂದಿದೆ. ಇ.ಪಿ.ಜಯರಾಜನ್, ಥಾಮಸ್ ಐಸಾಕ್ ಅವರಂತಹ ಹಿರಿಯ ಮುಖಂಡರಿಗೆ ಟಿಕೆಟ್ ನಿರಾಕರಿಸಿದ್ದು ಸಿಪಿಎಂನಲ್ಲಿ ಅತೃಪ್ತಿಗೆ ಕಾರಣವಾಗಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಅವರ ಬೆಂಬಲಿಗರು 'ಕ್ಯಾಪ್ಟನ್' ಎಂದು ಬಣ್ಣಿಸುತ್ತಿರುವುದಕ್ಕೂ ಆಕ್ಷೇಪ ಎದುರಾಗಿದೆ.

ದೂರಿನಲ್ಲಿರುವ ಆರೋಪಗಳಲ್ಲಿ ಸತ್ಯಾಂಶಗಳಿಲ್ಲ, ಕಾನೂನು ಸುವ್ಯವಸ್ಥೆಗೆ ಧಕ್ಕೆ: ಆಯೋಗದ ಪತ್ರ

ಮಮತಾ ವಿರುದ್ಧ ಆಯೋಗ ಕ್ರಮ?

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ನಂದಿಗ್ರಾಮ ವಿಧಾನಸಭಾ ಕ್ಷೇತ್ರದ ಬೋಯಾಲ್ ಮತಗಟ್ಟೆಯಲ್ಲಿ ಏಪ್ರಿಲ್ 1ರ ಮತದಾನದಂದು ಹೊರಗಿನ ವ್ಯಕ್ತಿಗಳು ಇದ್ದರು ಎಂದು ಮಮತಾ ಬ್ಯಾನರ್ಜಿ ಅವರು ಮಾಡಿದ್ದ ಆರೋಪ ಮತ್ತು ಅವರು ನೀಡಿದ್ದ ದೂರನ್ನು ಚುನಾವಣಾ ಆಯೋಗವು ತಿರಸ್ಕರಿಸಿದೆ. ಈ ದೂರಿನಲ್ಲಿ ಸತ್ಯಾಂಶ ಇಲ್ಲ ಎಂದು ಆಯೋಗ ಹೇಳಿದೆ.

ಈ ಸಂಬಂಧ ಮಮತಾ ಬ್ಯಾನರ್ಜಿ ಅವರಿಗೆ ಆಯೋಗವು ಪತ್ರ ಬರೆದಿದೆ. 'ಮಮತಾ ವಿರುದ್ಧ ಜನಪ್ರತಿನಿಧಿ ಕಾಯ್ದೆಯ 131ನೇ ಸೆಕ್ಷನ್ (ಮತದಾನ ಪ್ರಕ್ರಿಯೆಗೆ ಅಡ್ಡಿ ಪಡಿಸಿದರೆ ದಂಡ), ಸೆಕ್ಷನ್ 123 (2)ರ (ಮತದಾನ ಪ್ರಕ್ರಿಯೆ ವೇಳೆ ಪ್ರಭಾವ ಬೀರಲು ಯತ್ನಿಸಿದರೆ ಮೂರು ತಿಂಗಳು ಜೈಲು ಸಜೆ) ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲು ಸಾಧ್ಯವೇ ಎಂಬುದನ್ನು ಪರಿಶೀಲಿಸುತ್ತಿದ್ದೇವೆ' ಎಂದು ಆಯೋಗವು ಪತ್ರದಲ್ಲಿ ಹೇಳಿದೆ. ಈ ಬೆಳವಣಿಗೆಯಿಂದ ಮಮತಾ ಅವರಿಗೆ ಭಾರಿ ಹಿನ್ನಡೆಯಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.



ಬೋಯಾಲ್ ಮತಗಟ್ಟೆಗೆ ಮಮತಾ ಬ್ಯಾನರ್ಜಿ ಭೇಟಿ ನೀಡಿದ್ದಾಗ, ಅಲ್ಲಿಗೆ ಬಂದ ಅಪಾರ ಸಂಖ್ಯೆಯ ಜನರನ್ನು ಭದ್ರತಾ ಸಿಬ್ಬಂದಿ ತಡೆದು ನಿಲ್ಲಿಸಿದ್ದರು

ವಿಧಾನಸಭಾ ಕ್ಷೇತ್ರಕ್ಕೆ ಬೇರೆ ರಾಜ್ಯದಿಂದ ಬಿಜೆಪಿ ಗೂಂಡಾಗಳನ್ನು ಕರೆಸಿದೆ. ಜನರು ಮತಗಟ್ಟೆಗೆ ತೆರಳುವುದನ್ನು ಈ ಗೂಂಡಾಗಳು ತಡೆಯುತ್ತಿದ್ದಾರೆ. ಕೇಂದ್ರೀಯ ಪಡೆಗಳೂ ಇದೇ ಕೆಲಸ ಮಾಡುತ್ತಿವೆ. ಇಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದುಬಿದ್ದಿದೆ ಎಂದು ಮಮತಾ ಅವರು ಆಯೋಗಕ್ಕೆ ಬರೆದಿದ್ದ ಲಿಖಿತ ದೂರಿನಲ್ಲಿ ಆರೋಪಿಸಿದ್ದರು.

'ಬೋಯಾಲ್‌ನಲ್ಲಿ ಏನಾಯಿತು ಎಂಬುದನ್ನು ಇಡೀ ದೇಶವೇ ನೋಡಿದೆ. ಆ ಘಟನೆಗಳಿಗೆ ಸಂಬಂಧಿಸಿದಂತೆ 12ಕ್ಕೂ ಹೆಚ್ಚು ವಿಡಿಯೊ-ಆಡಿಯೊಗಳು ದೇಶದಾದ್ಯಂತ ಪ್ರಸಾರವಾಗಿವೆ. ಮತಗಟ್ಟೆಯಲ್ಲಿ ನೀವು ಅಧಿಕಾರಿಗಳ ವಿರುದ್ಧ ಬೈಗುಳಗಳ ಸುರಿಮಳೆ ಸುರಿಸುತ್ತಿದ್ದೀರಿ. ಅವರಲ್ಲಿ ಪಶ್ಚಿಮ ಬಂಗಾಳ ಸರ್ಕಾರದ ಅಧಿಕಾರಿಗಳು, ಅರೆಸೇನಾಪಡೆ ಸಿಬ್ಬಂದಿ ಮತ್ತು ಚುನಾವಣಾ ಆಯೋಗದ ಅಧಿಕಾರಿಗಳು ಇದ್ದರು' ಎಂದು ಆಯೋಗವು ತನ್ನ ಪತ್ರದಲ್ಲಿ ಖಾರವಾಗಿ ಹೇಳಿದೆ.

'ನಿಮ್ಮ ಪತ್ರದಲ್ಲಿರುವ ಆರೋಪಗಳಲ್ಲಿ ಸತ್ಯಾಂಶಗಳಿಲ್ಲ, ಹುರುಳಿಲ್ಲ; ಅವುಗಳಿಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವಿಲ್ಲ ಎಂದು ಘಟನಾ ಸ್ಥಳದಿಂದ ತರಿಸಿಕೊಂಡ ವರದಿಗಳು ಮತ್ತು ನಮ್ಮ ವೀಕ್ಷಕರು ನೀಡಿದ ವರದಿಗಳು ಹೇಳುತ್ತವೆ. ಆದರೆ, ಮಾಧ್ಯಮಗಳಲ್ಲಿ ಪ್ರಸಾರವಾದ ವರದಿಗಳು, ಚುನಾವಣೆಯ ಕೇಂದ್ರವಾದ ಮತದಾರರನ್ನು ಹಾದಿ ತಪ್ಪಿಸುತ್ತಿವೆ. ಇಂತಹ ಕೆಲಸವನ್ನು ರಾಜ್ಯದ ಮುಖ್ಯಮಂತ್ರಿಯಾದವರು ಮಾಡುತ್ತಿದ್ದಾರೆ. ಇದು ವಿಷಾದನೀಯ' ಎಂದು ಆಯೋಗವು ಛೀಮಾರಿ ಹಾಕಿದೆ.

ನುಡಿ–ಕಿಡಿ

ಟಿಎಂಸಿ ಗೂಂಡಾಗಳೇ ಎಚ್ಚರಿಕೆಯಿಂದ ಕೇಳಿಸಿಕೊಳ್ಳಿ. ನಾಲ್ಕು ವರ್ಷಗಳ ಹಿಂದೆ ಉತ್ತರ ಪ್ರದೇಶದಲ್ಲಿ ನಾವು ಸರ್ಕಾರ ರಚಿಸಿದ ಮೇಲೆ ಏನಾಯಿತೋ, ಇಲ್ಲೂ ಅದೇ ಆಗುತ್ತದೆ. ಅಧಿಕಾರ ಸ್ವೀಕರಿಸಿದ ಒಂದು ತಿಂಗಳಲ್ಲೇ ನಿಮ್ಮನ್ನೆಲ್ಲಾ ಜೈಲಿಗೆ ಅಟ್ಟುತ್ತೇವೆ

ಯೋಗಿ ಆದಿತ್ಯನಾಥ,
ಉತ್ತರ ಪ್ರದೇಶ ಮುಖ್ಯಮಂತ್ರಿ

ಮೋದಿ ಅವರೇ ಅಷ್ಟು ಸ್ಥಾನ ಗೆಲ್ಲುತ್ತೇವೆ, ಇಷ್ಟು ಸ್ಥಾನ ಗೆಲ್ಲುತ್ತೇವೆ ಎಂದು ಹೇಳುತ್ತೀರಿ. ಇಷ್ಟೇ ಸ್ಥಾನ ಗೆಲ್ಲುತ್ತೇವೆ ಎಂದು ಹೇಳಲು ನೀವು ದೇವರಾ ಅಥವಾ ಸೂಪರ್ ಮ್ಯಾನಾ?

ಮಮತಾ ಬ್ಯಾನರ್ಜಿ,
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

'ಬಂಗಾಳದ ಮಹಿಳೆಗೆ ಅವಮಾನ'

ಮೋದಿಯ ದೀದಿ, ಓ ದೀದಿ ಹೇಳಿಕೆಗೆ ಭಾರಿ ಆಕ್ಷೇಪ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಅತ್ಯಂತ ಅವಹೇಳನಕಾರಿಯಾಗಿ 'ದೀದಿ ಓ ದೀದಿ, ದೀದಿ ಓ ದೀದಿ' ಎಂದು ಕರೆದಿರುವುದು ಆಕ್ಷೇಪಾರ್ಹ. ಇದು ಮಮತಾ ಬ್ಯಾನರ್ಜಿ ಅವರಿಗೆ ಮಾಡಿದ ಅಪಮಾನ ಮಾತ್ರವಲ್ಲ, ಬದಲಿಗೆ ಬಂಗಾಳದ ಎಲ್ಲಾ ಮಹಿಳೆಯರಿಗೆ ಮಾಡಿದ ಅವಮಾನ ಎಂದು ಟಿಎಂಸಿ ಆರೋಪಿಸಿದೆ.

ಮೋದಿ ಅವರು, 'ದೀದಿ, ಓ ದೀದಿ' ಎಂದು ಕರೆದಿರುವ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿ, ಟಿಎಂಸಿ ನಾಯಕರು ಮತ್ತು ಕಾರ್ಯಕರ್ತರು ಪ್ರತಿಭಟಿಸುತ್ತಿದ್ದಾರೆ.

'ನಮ್ಮ ಮುಖ್ಯಮಂತ್ರಿಯನ್ನು ಬಿಜೆಪಿ ಹೇಗೆ ಅವಮಾನಿಸುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆ ಅಷ್ಟೆ. ಪ್ರಧಾನಿ ಮತ್ತು ಅಮಿತ್ ಶಾ ಅವರು ಮಹಿಳಾ ವಿರೋಧಿ ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ಎಸಗುತ್ತಾರೆ ಎಂಬುದಕ್ಕೆ ಇದು ಸಾಕ್ಷಿ. ಮೋದಿ ಮತ್ತು ಶಾ ಅವರಿಗೆ ಪ್ರತಿಕ್ರಿಯೆ ನೀಡುವುದನ್ನು ನಾವು ಬಂಗಾಳದ ಜನತೆಗೆ ಬಿಟ್ಟಿದ್ದೇವೆ' ಎಂದು ಪಶ್ಚಿಮ ಬಂಗಾಳ ಸಚಿವೆ ಶಶಿ ಪಂಜಾ ಹೇಳಿದ್ದಾರೆ.

ಮೋದಿ ಅವರ ಈ ವಿಡಿಯೊ ತುಣುಕಿನ ವಿರುದ್ಧ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಸಹ ಈಚೆಗೆ ಹೇಳಿದ್ದರು. 'ಬಂಗಾಳದಲ್ಲಿ ಬೀದಿಬದಿಯಲ್ಲಿ ಕೂತ ಪುಂಡರು, ಮಹಿಳೆಯರನ್ನು ರೇಗಿಸುವ ರೀತಿಯಲ್ಲಿ ಮೋದಿ ಅವರು ಮಮತಾ ದೀದಿ ಅವರನ್ನು ಸಂಬೋಧಿಸಿದ್ದಾರೆ' ಎಂದು ಮೊಯಿತ್ರಾ ಕಿಡಿಕಾರಿದ್ದರು.

ಮೋದಿ ಅವರದ್ದು ಪುರುಷಪ್ರಧಾನ ಮನಸ್ಥಿತಿ ಎಂಬುದನ್ನು ಇಂತಹ ಹೇಳಿಕೆಗಳೇ ಸಾಬೀತು ಮಾಡುತ್ತವೆ ಎಂದು ಟಿಎಂಸಿ ನಾಯಕಿ ಅನನ್ಯಾ ಚಕ್ರವರ್ತಿ ಟೀಕಿಸಿದ್ದಾರೆ.

'ಅಭಿವೃದ್ಧಿ ವಿರೋಧಿ ಪಕ್ಷ'

ಹರಿಪಾಲ್/ಸೋನಾರ್‌ಪುರ (ಪಿಟಿಐ): ಮಮತಾ ಬ್ಯಾನರ್ಜಿಯದ್ದು ಪ್ರತಿಬಂಧಕ ಮನಸ್ಥಿತಿ. ಉದ್ಯಮಿಗಳು ಮತ್ತು ಕೈಗಾರಿಕೋದ್ಯಮಿಗಳನ್ನು ಅವರು ಪಶ್ಚಿಮ ಬಂಗಾಳದಿಂದ ಓಡಿಸಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಟಾಟಾ ಮೋಟರ್ಸ್ ಸಿಂಗೂರ್‌ನಲ್ಲಿ ಆರಂಭಿಸಿದ್ದ ನ್ಯಾನೊ ಕಾರು ಘಟಕದ ವಿರುದ್ಧ ಟಿಎಂಸಿ ನಡೆಸಿದ್ದ ಹೋರಾಟದ ಬಗ್ಗೆ ಮೋದಿ ಅವರು ಇಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. 'ಟಿಎಂಸಿ ಅಂದರೆ ಟಾಕಾ ಮಾರ್ ಕಂಪನಿ (ಲೂಟಿಕೋರ ಕಂಪನಿ). ದೀದಿ ಅವರೇ, ಮೋದಿ ಇಲ್ಲಿದ್ದಾನೆ ನಿಮ್ಮ ಆಟ ನಡೆಯುವುದಿಲ್ಲ ಎಂದು ನಿಮ್ಮ ಪಕ್ಷದ ಗೂಂಡಾಗಳಿಗೆ ಹೇಳಿ ' ಎಂದು ಮೋದಿ ಹೇಳಿದ್ದಾರೆ.



ಅಲೆರಹಿತ ಚುನಾವಣೆ ಎತ್ತ ಬೀಸಲಿದೆ ಗಾಳಿ?

• ಇ.ಟಿ.ಬಿ. ಶಿವಪ್ರಿಯನ್

ಚೆನ್ನೈ: ತಮಿಳುನಾಡಿನ ಚುನಾವಣಾ ಇತಿಹಾಸದಲ್ಲೇ ಅತಿ ದೀರ್ಘವೆನಿಸಿರುವ, ನಾಲ್ಕು ತಿಂಗಳ ಅವಧಿಯ ಪ್ರಚಾರಕ್ಕೆ ಭಾನುವಾರ ತೆರೆ ಬಿದ್ದಿದೆ. ಏ.6ರಂದು ನಡೆಯಲಿರುವ ಮತದಾನವು ರಾಜ್ಯದ 16ನೇ ವಿಧಾನಸಭೆಯನ್ನು ಆಯ್ಕೆ ಮಾಡುವುದಷ್ಟೇ ಅಲ್ಲ, ರಾಜಕೀಯದಲ್ಲಿ ತಮ್ಮದೇ ಆದ ಸ್ಥಾನವನ್ನು ರೂಪಿಸಿಕೊಳ್ಳಲು ಶ್ರಮಿಸುತ್ತಿರುವ, ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳ ಹೊಸ ತಲೆಮಾರಿನ ನಾಯಕರ ಭವಿಷ್ಯವನ್ನೂ ನಿರ್ಧರಿಸಲಿದೆ.

ಜಯಲಲಿತಾ ಅವರ ಸಾವಿನ ಮೂರು ತಿಂಗಳ ನಂತರ, 2017ರಲ್ಲಿ ಮುನ್ನೆಲೆಗೆ ಬಂದ ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರಿಗೆ, ಎಂ. ಕರುಣಾನಿಧಿ ಅವರ ಸಾವಿನ ನಂತರ ಪಕ್ಷದ ಮುಖ್ಯಸ್ಥರಾಗಿ ನಿಯುಕ್ತರಾಗಿರುವ ಎಂ.ಕೆ. ಸ್ಟಾಲಿನ್ ಅವರು ಸವಾಲೊಡ್ಡಿದ್ದಾರೆ. ಸ್ಟಾಲಿನ್ ಮುಂದೆ ಪಳನಿಸ್ವಾಮಿ ದುರ್ಬಲ ಅಭ್ಯರ್ಥಿ ಎಂದು ಪರಿಗಣಿಸಲಾಗುತ್ತಿದೆ.

ಡಿಎಂಕೆಯು ಒಂದು ದಶಕದ ನಂತರ ಪುನಃ ಅಧಿಕಾರಕ್ಕೆ ಬರುವ ಸಾಧ್ಯತೆ ಇದೆ ಎಂದು ಸಮೀಕ್ಷೆಗಳು ಹೇಳಿವೆ. ಆದರೂ, ಆಡಳಿತಾರೂಢ ಎಐಎಡಿಎಂಕೆಯು ಪ್ರಚಾರದ ಕೊನೆಯ ದಿನ, ಪ್ರಮುಖ ಪತ್ರಿಕೆಗಳಲ್ಲಿ ನಾಲ್ಕು ಪುಟಗಳ ಜಾಹೀರಾತು ನೀಡಿ, 2006ರಿಂದ 2011ರ ಅವಧಿಯ ಡಿಎಂಕೆಯ 'ಕರಾಳ ಆಡಳಿತ'ವನ್ನು ಜನರಿಗೆ ನೆನಪಿಸಿಕೊಟ್ಟಿದೆ. ಎಐಎಡಿಎಂಕೆಯ ಈ ನಡೆಯು 'ಸೋಲನ್ನು ಮನಗಂಡಿರುವುದರ ಸೂಚನೆ' ಎಂದು ಡಿಎಂಕೆ ಮುಖ್ಯಸ್ಥ ಸ್ಟಾಲಿನ್ ಟೀಕಿಸಿದ್ದಾರೆ.

ಸತತವಾಗಿ ಎರಡನೇ ಚುನಾವಣೆಯಲ್ಲೂ ಡಿಎಂಕೆಯು ಬಿಜೆಪಿಯನ್ನೇ ಗುರಿಯಾಗಿಟ್ಟು ಪ್ರಚಾರ ನಡೆಸಿದೆ. 'ಎಐಎಡಿಎಂಕೆಗೆ ನೀಡಿದ ಪ್ರತಿ ಮತವೂ ಬಿಜೆಪಿಗೆ ಹೋಗುತ್ತದೆ' ಎಂದು ಹೇಳುತ್ತಾ ಬಂದಿದೆ. 'ಇದು ತಮಿಳುನಾಡು ಮತ್ತು ದೆಹಲಿ (ಕೇಂದ್ರ ಸರ್ಕಾರ) ನಡುವಿನ ಸ್ಪರ್ಧೆ. ಸಾಮಾಜಿಕ ನ್ಯಾಯ, ಹಿಂದಿ ಹೇರಿಕೆ, ರಾಜ್ಯದ ಸ್ವಾಯತ್ತೆ, ಬಿಜೆಪಿ ರಿಮೋಟ್ ಕಂಟ್ರೋಲ್‌ನಲ್ಲಿರುವ ಎಐಎಡಿಎಂಕೆ ಸರ್ಕಾರ...' ಮುಂತಾದ ವಿಚಾರಗಳು ಡಿಎಂಕೆ ಪ್ರಚಾರದಲ್ಲಿ ಪ್ರತಿಧ್ವನಿಸಿವೆ.

'ಎಐಎಡಿಎಂಕೆಯು ಪಳನಿಸ್ವಾಮಿ ಅವರ ಇಮೇಜ್ ಹಾಗೂ 10 ವರ್ಷಗಳ ಸಾಧನೆಯನ್ನು ಚಿತ್ರಿಸುವುದರ ಜತೆಗೆ, ಡಿಎಂಕೆಯ 'ಕುಟುಂಬ ರಾಜಕಾರಣ'ವನ್ನೂ ಗುರಿಯಾಗಿಸಿ ಪ್ರಚಾರ ನಡೆಸಿದೆ. ಬಿಜೆಪಿಗೆ ತಮಿಳುನಾಡಿನಲ್ಲಿ ಅಷ್ಟೊಂದು ಮನ್ನಣೆ ಇಲ್ಲದಿದ್ದರೂ, ಎಐಎಡಿಎಂಕೆಯು ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಳ್ಳಲು ಹೆಚ್ಚಿನ ಉತ್ಸಾಹ ತೋರಿಸಿತ್ತು. ಈ ಕಾರಣದಿಂದ ಈ ಪಕ್ಷದ ದೊಡ್ಡ ಪ್ರಮಾಣದ ಮತಗಳು ಪಕ್ಷದಿಂದಲೇ ಸಿಡಿದು ಸೃಷ್ಟಿಯಾಗಿರುವ ಎಎಂಎಂಕೆಗೆ ಹೋಗುವ ಸಾಧ್ಯತೆ ಇದೆ. ಆಡಳಿತ ವಿರೋಧಿ ಅಲೆ, ಸಿಎಎ ಮತ್ತು ಕೃಷಿ ಕಾಯ್ದೆಗಳಿಗೆ ಬೆಂಬಲ ಸೂಚಿಸಿದ್ದು, ವಣ್ಣಿಯಾರ್ ಸಮುದಾಯಕ್ಕೆ ಶೇ 10.5ರಷ್ಟು ಒಳಮೀಸಲಾತಿ ನೀಡಿದ್ದೇ ಮುಂತಾದ ವಿಚಾರಗಳೂ ಎಐಎಡಿಎಂಕೆಗೆ ಮುಳುವಾಗಬಹುದು.

'ಅಲೆರಹಿತವಾಗಿರುವ ಈ ಚುನಾವಣೆಯಲ್ಲಿ ಆಡಳಿತ ವಿರೋಧಿ ಭಾವನೆ ಅಷ್ಟಾಗಿ ಕಾಣಿಸಲಿಲ್ಲ. ಪಳನಿಸ್ವಾಮಿಯ ಬಗ್ಗೆ ಜನರಲ್ಲಿ ವೈರತ್ವ ಇಲ್ಲದಿದ್ದರೂ, ಈ ಸರ್ಕಾರದ ಹತ್ತು ವರ್ಷಗಳ ಆಡಳಿತವು ದುರ್ಬಲವಾಗಿತ್ತು ಎಂಬ ಭಾವನೆ ಇರುವುದು ಕಾಣಿಸುತ್ತಿದೆ' ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ.

ಮಗ ಉದಯನಿಧಿ ಸ್ಪರ್ಧಿಸಿರುವ ಚೆನ್ನೈನ ಚಿಪಾಕ್–ತಿರುವಲ್ಲಿಕೇಣಿ ಕ್ಷೇತ್ರದಲ್ಲಿ ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಪ್ರಚಾರದ ಕೊನೆಯ ದಿನ ರೋಡ್ ಶೋ ನಡೆಸಿದರು ಪಿಟಿಐ ಚಿತ್ರ

ಬೆಳಗಾವಿ ಲೋಕಸಭಾ ಕ್ಷೇತ್ರ ಉಪಚುನಾವಣೆ: ಸತೀಶಗೆ ಸಾಥ್ ನೀಡಲು ಲಖನ್ ಹಿಂದೇಟು

ಪ್ರಚಾರದಿಂದ ದೂರ ಉಳಿದ ಬಾಲಚಂದ್ರ, ರಮೇಶ

• ಎಂ. ಮಹೇಶ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯ ಮತದಾನ (ಏ.17)ಕ್ಕೆ ಕೆಲವೇ ದಿನಗಳು ಬಾಕಿ ಇವೆ. ಆದರೆ, ಇಲ್ಲಿನ ಪ್ರಭಾವಿ ರಾಜಕಾರಣಿಗಳೆನಿಸಿರುವ ಜಾರಕಿಹೊಳಿ ಸಹೋದರರು ಇನ್ನೂ ಪ್ರಚಾರದ ಕಣಕ್ಕೆ ಇಳಿದಿಲ್ಲದಿರುವುದು ಚರ್ಚೆಗೆ ಕಾರಣವಾಗಿದೆ.

ಕ್ಷೇತ್ರದ ವ್ಯಾಪ್ತಿಯಲ್ಲಿ ಗೋಕಾಕ ಹಾಗೂ ಅರಭಾವಿ ವಿಧಾನಸಭಾ ಕ್ಷೇತ್ರಗಳೂ ಬರುತ್ತವೆ. ಅವುಗಳನ್ನು ಪ್ರತಿನಿಧಿಸುತ್ತಿರುವ ಬಿಜೆಪಿ ಶಾಸಕರಾದ ರಮೇಶ ಜಾರಕಿಹೊಳಿ ಮತ್ತು ಕೆಎಂಎಫ್ ಅಧ್ಯಕ್ಷರೂ ಆಗಿರುವ ಬಾಲಚಂದ್ರ ಜಾರಕಿಹೊಳಿ ತಮ್ಮ ಪಕ್ಷದ ಅಭ್ಯರ್ಥಿ ಮಂಗಲಾ ಅಂಗಡಿ ಅವರ ಪರವಾಗಿ ಪ್ರಚಾರಕ್ಕೆ ಬಂದಿಲ್ಲ.

ಮುಖ್ಯಮಂತ್ರಿ ಮನವಿ ಮಾಡಿದ್ದರು: ತಮ್ಮ ವಿರುದ್ಧದ ಸಿ.ಡಿ. ಪ್ರಕರಣದಿಂದಾಗಿ ಸಂಕಷ್ಟ ಎದುರಿಸುತ್ತಿರುವ ಹಾಗೂ ಬಂಧನ ಭೀತಿ ಎದುರಿಸುತ್ತಿರುವ ರಮೇಶ ಜಾರಕಿಹೊಳಿ ಪ್ರಚಾರ ಕಾರ್ಯದಲ್ಲಾಗಲಿ ಅಥವಾ ಕ್ಷೇತ್ರದಲ್ಲಾಗಲಿ ಕಾಣಿಸಿಕೊಂಡಿಲ್ಲ. ಅವರ ರಕ್ಷಣೆಯಲ್ಲಿ ತೊಡಗಿಕೊಂಡಿದ್ದಾರೆ ಎನ್ನಲಾಗುತ್ತಿರುವ ಬಾಲಚಂದ್ರ ಕೂಡ ಅರಭಾವಿಯಲ್ಲಿ ರಂಗಪ್ರವೇಶ ಮಾಡಿಲ್ಲ. ಚುನಾವಣೆ ಘೋಷಣೆಗೂ ಮುನ್ನ ಕೆಲವು ಸಭೆಗಳನ್ನು ನಡೆಸಿದ್ದ ಅವರು ಬಳಿಕ ಸಕ್ರಿಯರಾಗಿಲ್ಲ. ತಮ್ಮ ಬೆಂಬಲಿಗರಿಗೂ ಯಾವುದೇ 'ಸಂದೇಶ' ರವಾನಿಸಿಲ್ಲ ಎಂದೂ ಹೇಳಲಾಗುತ್ತಿದೆ.

ರಮೇಶ

ಬಾಲಚಂದ್ರ


ಲಖನ್

'ರಮೇಶ ಜಾರಕಿಹೊಳಿ ಕೂಡಲೇ ಪ್ರಚಾರದಲ್ಲಿ ತೊಡಗಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೂ ಮನವಿ ಮಾಡಿ ಹಲವು ದಿನಗಳೇ ಕಳೆದಿವೆ.

ಇನ್ನೊಂದೆಡೆ, ಗೋಕಾಕ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಲಖನ್ ಜಾರಕಿಹೊಳಿ ತನ್ನ ಸಹೋದರ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಪರವಾಗಿ ಮತ ಯಾಚಿಸುತ್ತಿಲ್ಲ. ಗೋಕಾಕದಲ್ಲೇ ಇದ್ದರೂ ಚುನಾವಣೆಯಿಂದ ದೂರ ಉಳಿದಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ತನ್ನ ಬೆನ್ನಿಗೆ ನಿಂತಿದ್ದ ಅಣ್ಣ ಸತೀಶಗೆ ನೆರವಾಗದಿರುವುದು ಮತ್ತು ಅಂತರ ಕಾಯ್ದುಕೊಂಡಿರುವುದು ಅಚ್ಚರಿ ಮೂಡಿಸಿದೆ.

ಅಧ್ಯಕ್ಷರ ವಿರುದ್ಧವೇ ತಿರುಗಿಬಿದ್ದಿದ್ದಾರೆ: ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಲಖನ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಬಹಿರಂಗವಾಗಿಯೇ ಕಿಡಿಕಾರಿದ್ದರು. 'ಪಕ್ಷದ ಹೈಕಮಾಂಡ್ ಶಿವಕುಮಾರ್ ಅವರ ರಾಜೀನಾಮೆ ಪಡೆಯಬೇಕು' ಎಂದೂ ಆಗ್ರಹಿಸಿದ್ದರು. 'ಯಾರನ್ನು ನಂಬಿ ಯಾರು ಪ್ರಚಾರಕ್ಕೆ ಹೋಗುವುದು? ಡಿಕೆಶಿ ರಾಜೀನಾಮೆ ಕೊಟ್ಟರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಒಳ್ಳೆಯದಾಗುತ್ತದೆ. ಇಲ್ಲವಾದಲ್ಲಿ, ಪ್ರಚಾರ ಮಾಡಲು ಕಾರ್ಯಕರ್ತರಿಗೆ ಮುಜುಗರ ಆಗುತ್ತದೆ' ಎಂದು ಹೇಳಿದ್ದರು. ಇದರಿಂದಾಗಿ ಗೋಕಾಕದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗೊಂದಲದಲ್ಲಿದ್ದಾರೆ ಎಂದು ಪಕ್ಷದ ಮುಖಂಡರೊಬ್ಬರು ಪ್ರತಿಕ್ರಿಯಿಸಿದರು.

'ಚುನಾವಣೆಗೆ ಕೆಲವೇ ದಿನಗಳಿರುವಾಗ ಜಾರಕಿಹೊಳಿ ಸಹೋದರರು ಬೆಂಬಲಿಗರಿಗೆ ಯಾವ ಸಂದೇಶ ರವಾನಿಸುತ್ತಾರೆ ಎನ್ನುವುದರ ಮೇಲೆ ಗೋಕಾಕ ಹಾಗೂ ಅರಭಾವಿಯಲ್ಲಿನ ಲೆಕ್ಕಾಚಾರಗಳು ಬದಲಾಗಲಿವೆ' ಎನ್ನುತ್ತಾರೆ ಅವರು.

ಗೋಕಾಕ ಮತ್ತು ಅರಭಾವಿಯಲ್ಲಿ ಜನರು ಜಾರಕಿಹೊಳಿ ಕುಟುಂಬವನ್ನು ನೋಡುತ್ತಾರೆ. ಸಿ.ಡಿ. ಪ್ರಕರಣವು ಪ್ಲಸ್ಸೂ ಆಗಲ್ಲ; ಮೈನಸ್ಸೂ ಆಗುವುದಿಲ್ಲ

ಸತೀಶ ಜಾರಕಿಹೊಳಿ, ಕಾಂಗ್ರೆಸ್ ಅಭ್ಯರ್ಥಿ

ಬಿಜೆಪಿ ಅಭ್ಯರ್ಥಿ ಪರವಾಗಿ ಗೋಕಾಕದಲ್ಲಿ ಪ್ರಚಾರದಲ್ಲಿ ತೊಡಗಿದ್ದೇವೆ. ರಮೇಶ ಜಾರಕಿಹೊಳಿ ಅವರಿಂದಲೂ ಈ ಸೂಚನೆ ಇದೆ. ಅವರೂ ಪ್ರಚಾರಕ್ಕೆ ಬರಬಹುದು

ಭೀಮಶಿ ಭರಮಣ್ಣವರ, ಅಧ್ಯಕ್ಷ, ಗೋಕಾಕ ನಗರ ಘಟಕ, ಬಿಜೆಪಿ

'ರಾಜಕೀಯಕ್ಕೆ ಅಡ್ಡಿಯಾದರೆ ಸಿನಿಮಾ ತ್ಯಜಿಸುವೆ'

ಕೊಯಮತ್ತೂರು (ಪಿಟಿಐ): ರಾಜಕೀಯಕ್ಕೆ ಅಡ್ಡಿಯಾಗಿದರೆ ಸಿನಿಮಾ ತ್ಯಜಿಸಲು ಸಿದ್ಧ ಎಂದು ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಸಂಸ್ಥಾಪಕ ಕಮಲ್‌ಹಾಸನ್ ಭಾನುವಾರ ಹೇಳಿದರು.

'ಜನಸೇವೆಗೆ ಅಡ್ಡಿಯಾಗುವುದಾದಲ್ಲಿ, ಚಲನಚಿತ್ರಕ್ಕೆ ಸಂಬಂಧಿಸಿದ ನನ್ನ ಪ್ರಸ್ತುತ ಎಲ್ಲ ಕಾರ್ಯಯೋಜನೆಗಳನ್ನು ಮುಗಿಸಿ ದೂರ ಉಳಿಯುತ್ತೇನೆ' ಎಂದು ತಿಳಿಸಿದರು.

ತಿಂಡಿಯಲ್ಲೂ ರಾಜಕಾರಣ; ತೇಜಸ್ವಿ ಟ್ವೀಟ್‌ಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಚೆನ್ನೈ: ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ಮತ್ತು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ಅವರು ಕೊಯಮತ್ತೂರಿನ ಹೋಟೆಲ್‌ನಲ್ಲಿ ತಿಂಡಿ ತಿಂದ ಬಳಿಕ ಮಾಡಿದ ಟ್ವೀಟ್ ಅವರಿಗೆ ಮುಜುಗರ ಉಂಟು ಮಾಡಿದೆ.

'ತಿಂಡಿ ತಿಂದ ಬಳಿಕ ನಾನು ಹಣ ಕೊಡಲು ಹೋದೆ. ಹೋಟೆಲ್‌ನವರು ಹಣ ತೆಗೆದುಕೊಳ್ಳಲು ಒಪ್ಪಲಿಲ್ಲ. ನನ್ನ ಒತ್ತಾಯದ ಬಳಿಕ ಹಣ ತೆಗೆದುಕೊಂಡರು. ನಾವು ಬಿಜೆಪಿಯವರು. ಇದು ಎಲ್ಲರನ್ನೂ ಗೌರವಿಸುವ ಮತ್ತು ರಕ್ಷಿಸುವ ಪಕ್ಷ. ಡಿಎಂಕೆಯವರಂತೆ ಸಣ್ಣ ಅಂಗಡಿಗಳವರಿಂದ ಸುಲಿಗೆ ಮಾಡುವುದಿಲ್ಲ' ಎಂದು ಸೂರ್ಯ ಶುಕ್ರವಾರ ಟ್ವೀಟ್ ಮಾಡಿದ್ದಾರೆ.

ಬಿಲ್ ಪಾವತಿಸುತ್ತಿರುವ ಚಿತ್ರವನ್ನು ತೇಜಸ್ವಿ ಸೂರ್ಯ ಟ್ವೀಟ್ ಮಾಡಿದ್ದರು

ಹೋಟೆಲ್‌ನವರು ಫೇಸ್‌ಬುಕ್‌ನಲ್ಲಿ ಮರುದಿನ ಸ್ಪಷ್ಟೀಕರಣ ನೀಡಿದ್ದಾರೆ.

'ಆತ್ಮೀಯ ತೇಜಸ್ವಿ ಸೂರ್ಯ ಅವರೇ, ನಮ್ಮ ಹೋಟೆಲ್‌ಗೆ ಬಂದು ತಿಂಡಿ ತಿಂದದ್ದು ನಮಗೆ ಸಂತಸ ನೀಡಿದೆ. ಅನ್ನಪೂರ್ಣಾದಲ್ಲಿ ನಾವು ಎಲ್ಲರನ್ನೂ ಪ್ರೀತಿ ಮತ್ತು ಕೃತಜ್ಞತೆಯಿಂದಲೇ ನೋಡುತ್ತೇವೆ. ಇಲ್ಲಿ ಎಲ್ಲರೂ ಹಣ ಕೊಟ್ಟೇ ಆಹಾರ ಸೇವಿಸುತ್ತಾರೆ. ಉಚಿತವಾಗಿ ನೀಡಿ ಎಂದು ಈವರೆಗೆ ನಮ್ಮನ್ನು ಯಾರೂ ಬಲವಂತ ಮಾಡಿಲ್ಲ. ಸಮಾಜಕ್ಕಾಗಿ ಕೆಲಸ ಮಾಡುವವರಿಂದ ನಾವು ಕೆಲವೊಮ್ಮೆ ಹಣ ತೆಗೆದುಕೊಳ್ಳುವುದಿಲ್ಲ. ಆ ಕಾರಣಕ್ಕಾಗಿಯೇ ಸೂರ್ಯ ಅವರಿಂದ ಹಣ ಪಡೆಯಲು ವೇಟರ್ ಹಿಂದೇಟು ಹಾಕಿದ್ದಾರೆ. ಇದಕ್ಕೆ ಬೇರೆ ಯಾವುದೇ ಕಾರಣ ಇಲ್ಲ' ಎಂದು ಹೋಟೆಲ್‌ನ ಫೇಸ್‌ಬುಕ್ ಪುಟದಲ್ಲಿ ಹೇಳಲಾಗಿದೆ.

ವಿವಿಧ ರೀತಿಯ ದೋಸೆಗಳಿಗೆ ಪ್ರಸಿದ್ಧವಾಗಿರುವ ಶ್ರೀ ಅನ್ನಪೂರ್ಣಾ ಶ್ರೀ ಗೌರಿಶಂಕರ್ ಹೋಟೆಲ್‌ನಲ್ಲಿ ಸೂರ್ಯ ಅವರು ತಿಂಡಿ ತಿಂದಿದ್ದರು.

ಈ ಪ್ರತಿಕ್ರಿಯೆಯು ವೈರಲ್ ಆಗಿದೆ. ಒಂದು ಸರಳವಾದ ತಿಂಡಿಯನ್ನು ಕೂಡ ರಾಜಕೀಯಕ್ಕೆ ಬಳಸಿದ ಸೂರ್ಯ ಅವರ ನಡೆಯ ಬಗ್ಗೆ ಟೀಕೆಯೂ ವ್ಯಕ್ತವಾಗಿದೆ. 'ಬಿಜೆಪಿಯು ತಮಿಳುನಾಡಿನಲ್ಲಿ ಪೆರಿಯಾರ್‌ವಾದವನ್ನು ಕೊನೆಗಾಣಿಸಲಿದೆ' ಎಂದು ಸೂರ್ಯ ಅವರು ಶುಕ್ರವಾರ ಮಾಡಿದ್ದ ಟ್ವೀಟ್ ಕೂಡ ಟ್ರೋಲ್ ಆಗಿತ್ತು.

ಬಸವಕಲ್ಯಾಣ ಉಪಚುನಾವಣೆ: ಎನ್‌ಸಿಪಿ ತೊರೆದು ಬಿಜೆಪಿಗೆ ಬೆಂಬಲ

ಮುಳೆ ನಿರ್ಣಯಕ್ಕೆ ಮರಾಠಾ ಸಮಾಜ ವಿರೋಧ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಸವಕಲ್ಯಾಣ ಕ್ಷೇತ್ರದ ಉಪ ಚುನಾವಣೆಗೆ ಎನ್‌ಸಿಪಿಯಿಂದ ಸಲ್ಲಿಸಿದ ನಾಮಪತ್ರ ಹಿಂಪಡೆದು, ಬಿಜೆಪಿ ಬೆಂಬಲಿಸಿದ ಮಾಜಿ ಶಾಸಕ ಎಂ.ಜಿ. ಮುಳೆ ಅವರ ನಿಲುವನ್ನು ಮರಾಠಾ ಸಮಾಜದವರು ಖಂಡಿಸಿದ್ದಾರೆ. ನಗರದ ಶಿವಾಜಿ ಪಾರ್ಕ್‌ನಲ್ಲಿ ಭಾನುವಾರ ಸಭೆ ನಡೆಸಿದ ಸಮಾಜದವರು ತೀವ್ರ ವಿರೋಧ ವ್ಯಕ್ತಪಡಿಸಿದರು.

'ಮರಾಠಾ ಸಮಾಜದ ಬೇಡಿಕೆಗಳನ್ನು ಈಡೇರಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಒಪ್ಪಿದ್ದಾರೆ. ಆದ್ದರಿಂದ ನಾಮಪತ್ರ ಹಿಂಪಡೆದಿರುವುದಾಗಿ ಮುಳೆ ಅವರು ಸುಳ್ಳು ಹೇಳುತ್ತಿದ್ದಾರೆ. ಬೇಡಿಕೆ ಈಡೇರಿಸುವ ಬಗ್ಗೆ ಅವರೊಬ್ಬರ ಕಿವಿಯಲ್ಲಿಯೇ ಮುಖ್ಯಮಂತ್ರಿ ಹೇಗೆ ಹೇಳಿದರು' ಎಂದು ಕೆಲವರು ಪ್ರಶ್ನಿಸಿದರು.

'ಸಮಾಜದ ಯಾರೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸ್ವಇಚ್ಛೆಯಿಂದ ಈ ತೀರ್ಮಾನ ತೆಗೆದುಕೊಂಡಿರುವ ಕಾರಣ ಅವರ ಹಿಂದೆ ಸಮಾಜ ಇಲ್ಲ. ಮುಳೆ ಅವರು ಸಮಾಜಕ್ಕೆ, ಎನ್‌ಸಿಪಿಗೆ ದ್ರೋಹ ಬಗೆದಿದ್ದಾರೆ' ಎಂದರು.

ಸಕಲ ಮರಾಠಾ ಕ್ರಾಂತಿ ಮೋರ್ಚಾ ಜಿಲ್ಲಾ ಸಂಯೋಜಕ ನಾರಾಯಣ ಗಣೇಶ, ಶಿವಾಜಿರಾವ್ ಪಾಟೀಲ, ಜಿಲ್ಲಾ ಪಂಚಾಯಿತಿ ಸದಸ್ಯ ಆನಂದ ಪಾಟೀಲ, ಹಿರಿಯ ಮುಖಂಡ ಅಂಗದರಾವ್ ಜಗತಾಪ, ಮಹಾದೇವ ಹಸೂರೆ ಇದ್ದರು.

ಬಸವಕಲ್ಯಾಣದ ಶಿವಾಜಿ ಪಾರ್ಕ್‌ನಲ್ಲಿ ಭಾನುವಾರ ಮರಾಠಾ ಸಮಾಜದ ಸದಸ್ಯರು ಮಾಜಿ ಶಾಸಕ ಎಂ.ಜಿ.ಮುಳೆ ವಿರುದ್ಧ ಪ್ರತಿಭಟನೆ ನಡೆಸಿದರು

'ಊಟಿಯಲ್ಲಿ ಬಿಜೆಪಿ ಗೆಲುವು ನಿಶ್ಚಿತ'

ಊಟಿ: ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ತಮಿಳುನಾಡಿನ ಉದಕಮಂಡಲ (ಊಟಿ) ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭೋಜರಾಜನ್ ಪರ 9 ದಿನಗಳ ಕಾಲ ಪ್ರಚಾರ ನಡೆಸಿದ್ದಾರೆ.

ಉದಕಮಂಡಲ ಬಿಜೆಪಿ ಚುನಾವಣಾ ಉಸ್ತುವಾರಿಯೂ ಆಗಿರುವ ಸೋಮಶೇಖರ್ ಅವರು, ಈ ಬಾರಿ ತಮಿಳುನಾಡಿನಲ್ಲಿ ಬಿಜೆಪಿ-ಎಐಎಡಿಎಂಕೆ ಮೈತ್ರಿಕೂಟ ಸರ್ಕಾರ ರಚಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಅವರು ಬಹಿರಂಗ ಪ್ರಚಾರ ಅಂತ್ಯಗೊಳಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಉದಕಮಂಡಲದಲ್ಲಿ ಸಚಿವ ಎಸ್‌.ಟಿ. ಸೋಮಶೇಖರ್ ಪ್ರಚಾರ ನಡೆಸಿದರು

ರೈಲ್ವೆ ಮಾರ್ಗ ಪ್ರಸ್ತಾವ: 'ಊಟಿ–ನಂಜನಗೂಡು ರೈಲ್ವೆ ಮಾರ್ಗ ನಿರ್ಮಾಣದ ಬಗ್ಗೆ ಹಲವು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಈ ಸಂಬಂಧ ರೈಲ್ವೆ ಸಚಿವರಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಪತ್ರ ಬರೆದು ಶಿಫಾರಸು ಮಾಡಲು ಒತ್ತಾಯಿಸುತ್ತೇನೆ' ಎಂದು ಭರವಸೆ ನೀಡಿದರು.

ಸಿದ್ದರಾಮಯ್ಯ ಪ್ರಚಾರ ಕಣಕ್ಕೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸೋಮವಾರದಿಂದ ಎಂಟು ದಿನಗಳ ಕಾಲ ಬೆಳಗಾವಿ ಲೋಕಸಭಾ ಕ್ಷೇತ್ರ ಹಾಗೂ ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ. ಏಪ್ರಿಲ್ 5 ಮತ್ತು 6ರಂದು ಮಸ್ಕಿ ಹಾಗೂ 7 ಮತ್ತು 8ರಂದು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ಪ್ರಚಾರ ನಡೆಸುವರು. ಏ. 9,10ರಂದು ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ, ಏ. 11ರಂದು ಮಸ್ಕಿ, ಏ.12ರಂದು ಬಸವಕಲ್ಯಾಣ ಕ್ಷೇತ್ರಗಳಲ್ಲಿ ಮತಯಾಚನೆ ಮಾಡುವರು.

ಸೋಮವಾರ • ಏಪ್ರಿಲ್ 5, 2021 ಪ್ರಜಾವಾಣಿ

ರಾಯಲ್ ಚಾಲೆಂಜರ್ಸ್ ತಂಡಕ್ಕೂ ತಟ್ಟಿದ ಕೊರೊನಾ ಸೋಂಕಿನ ಭೀತಿ

ಬೆಂಗಳೂರಿನಲ್ಲಿ ದೇವದತ್ತ ಕ್ವಾರಂಟೈನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಹಲವೆಡೆ ಆತಂಕ ಮೂಡಿಸುತ್ತಿರುವ ಕೊರೊನಾ ಸೋಂಕಿನ ಎರಡನೇ ಅಲೆಯು ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ರಾಯಲ್ ಚಾಲೆಂಜರ್ ಬೆಂಗಳೂರು ತಂಡಕ್ಕೂ ಕಾಲಿಟ್ಟಿದೆ.

ಆರ್‌ಸಿಬಿಯ ಆರಂಭಿಕ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್ ಅವರಿಗೆ ಸೋಂಕು ಇರುವುದು ದೃಢಪಟ್ಟಿದೆ. ಅದರಿಂದಾಗಿ ಟೂರ್ನಿಯ ಆರಂಭದ ಎರಡು ಪಂದ್ಯಗಳಲ್ಲಿ ಅವರು ಕಣಕ್ಕಿಳಿಯುವುದು ಅನುಮಾನವಾಗಿದೆ ಎಂದು ಮೂಲಗಳು ತಿಳಿಸಿವೆ.

‘ಮಾರ್ಚ್ 22ರಂದು ಪಡಿಕ್ಕಲ್ ಅವರು ಕೋವಿಡ್ ಪರೀಕ್ಷೆಗೆ ಒಳಗಾಗಿದ್ದರು. ಆಗ ಪಾಸಿಟಿವ್ ಆಗಿತ್ತು. ಬೆಂಗಳೂರಿನ ತಮ್ಮ ನಿವಾಸದಲ್ಲಿಯೇ ಪ್ರತ್ಯೇಕವಾಸದಲ್ಲಿದ್ದು ಚಿಕಿತ್ಸೆ ಪಡೆದಿದ್ದಾರೆ. ಅವರು ಫಿಟ್ ಕೂಡ ಆಗಿದ್ದಾರೆ. ಅವರ ಆರ್‌ಟಿ ಪಿಸಿಆರ್ ಟೆಸ್ಟ್‌ನಲ್ಲಿ ನೆಗೆಟಿವ್ ಬಂದ ಮೇಲೆ ಆರ್‌ಸಿಬಿಯ ಬಯೋಬಬಲ್ ಸೇರ್ಪಡೆಯಾಗಲಿದ್ದಾರೆ. ತಂಡದ ವೈದ್ಯಕೀಯ ತಂಡವು ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಮಾರ್ಗದರ್ಶನ ನೀಡುತ್ತಿದೆ‘ ಎಂದು ತಂಡದ ಮೂಲಗಳು ತಿಳಿಸಿವೆ.

ಕರ್ನಾಟಕ ತಂಡದ ದೇವದತ್ತ ಹೋದ ವರ್ಷ ಯುಎಇಯಲ್ಲಿ ನಡೆದಿದ್ದ ಐಪಿಎಲ್‌ನಲ್ಲಿ ಪದಾರ್ಪಣೆ ಮಾಡಿದ್ದರು. ಆರ್‌ಸಿಬಿಯ ಆರಂಭಿಕ ಬ್ಯಾಟ್ಸ್‌ಮನ್ ಆಗಿ 15 ಪಂದ್ಯಗಳಲ್ಲಿ ಆಡಿದ್ದರು. 473 ರನ್‌ಗಳನ್ನು ಗಳಿಸಿದ್ದರು. ಅದರಲ್ಲಿ ಐದು ಅರ್ಧಶತಕಗಳೂ ಸೇರಿವೆ. ಈಚೆಗೆ ನಡೆದಿದ್ದ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿ ಮತ್ತು ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಗಳಲ್ಲಿಯೂ 20 ವರ್ಷದ ಎಡಗೈ ಬ್ಯಾಟ್ಸ್‌ಮನ್ ರನ್‌ಗಳ ಹೊಳೆ ಹರಿಸಿದ್ದರು.

ದೇವದತ್ತ ಪಡಿಕ್ಕಲ್

ಸದ್ಯ ತಂಡವು ಚೆನ್ನೈನಲ್ಲಿದೆ. ನಾಯಕ ವಿರಾಟ್ ಕೊಹ್ಲಿ, ಎಬಿ ಡಿವಿಲಿಯರ್ಸ್ ಅವರು ಕ್ವಾರಂಟೈನ್‌ನಲ್ಲಿದ್ದಾರೆ. ತಂಡದ ಇನ್ನೂ ಕೆಲವು ಆಟಗಾರರು ಅಭ್ಯಾಸವನ್ನು ಮುಂದುವರಿಸಿದ್ದಾರೆ. ಕ್ರಿಕೆಟ್ ನಿರ್ದೇಶಕ ಮೈಕ್ ಹೆಸನ್ ಅವರು ಮಾರ್ಗದರ್ಶನ ನೀಡುತ್ತಿದ್ದಾರೆ. ಇದೇ ಒಂಬತ್ತರಂದು ಚೆನ್ನೈನಲ್ಲಿ ನಡೆಯುವ ಮೊದಲ ಪಂದ್ಯದಲ್ಲಿ ಆರ್‌ಸಿಬಿಯು ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಎದುರು ಕಣಕ್ಕಿಳಿಯಲಿದೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಕ್ಷರ್ ಪಟೇಲ್ ಅವರಿಗೆ ಕೋವಿಡ್ ಇರುವುದು ಶನಿವಾರ ದೃಢಪಟ್ಟಿತ್ತು. ಅವರು ಐಸೋಲೆಷನ್‌ಗೆ ತೆರಳಿದ್ದಾರೆ. ಮುಂಬೈನ ವಾಂಖೆಡೆ ಕ್ರೀಡಾಂಗಣದ ಹತ್ತು ಮಂದಿ ಸಿಬ್ಬಂದಿ ಮತ್ತು ಕೆಲವು ಕಾರ್ಯಕ್ರಮ ವ್ಯವಸ್ಥಾಪಕರಿಗೂ ಕೋವಿಡ್ ಸೋಂಕು ಇರುವುದು ಪತ್ತೆಯಾಗಿತ್ತು.

ಹೈದರಾಬಾದ್‌ನಲ್ಲಿ ಐಪಿಎಲ್ ಆಯೋಜಿಸಿ: ಅಜರುದ್ದೀನ್ ಅಹ್ವಾನ

ನವದೆಹಲಿ (ಪಿಟಿಐ): ಮುಂಬೈನಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿವೆ. ಆದ್ದರಿಂದ ಅಲ್ಲಿಂದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳನ್ನು ಸ್ಥಳಾಂತರಿಸುವುದಾದರೆ ಹೈದರಾಬಾದಿನಲ್ಲಿ ಆಯೋಜಿಸಲು ಸಕಲ ವ್ಯವಸ್ಥೆ ಇದೆ ಎಂದು ಹೈದರಾಬಾದ್ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಮೊಹಮ್ಮದ್ ಅಜರುದ್ದೀನ್ ಆಹ್ವಾನ ನೀಡಿದ್ದಾರೆ.

ಮೊಹಮ್ಮದ್ ಅಜರುದ್ದೀನ್

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ 10 ಮಂದಿ ಮೈದಾನ ಸಿಬ್ಬಂದಿಗೆ ಕೋವಿಡ್ ಇರುವುದು ಶನಿವಾರ ಪತ್ತೆಯಾಗಿತ್ತು.

ಕೆಲವು ಕಾರ್ಯಕ್ರಮ ವ್ಯವಸ್ಥಾಪಕರುಗಳಿಗೂ ಕೊರೊನಾ ಸೋಂಕು ಇರುವುದು ಕೂಡ ಖಚಿತವಾಗಿತ್ತು. ಆದರೆ ಮುಂದಿನ ವಾರ ಇಲ್ಲಿ ನಡೆಯಲಿರುವ ಪಂದ್ಯಗಳನ್ನು ಸ್ಥಳಾಂತರ ಮಾಡದಿರಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನಿರ್ಧರಿಸಿದೆ. ವಾಂಖೆಡೆಯಲ್ಲಿ ಲೀಗ್ ಹಂತದ ಒಟ್ಟು ಹತ್ತು ಪಂದ್ಯಗಳು ನಡೆಯಲಿವೆ.

‘ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಬಿಸಿಸಿಐನೊಂದಿಗೆ ಎಚ್‌ಸಿಎ ಸದಾ ಇರುತ್ತದೆ. ಇಲ್ಲಿರುವ ಸೌಲಭ್ಯಗಳನ್ನು ಬಳಸಿಕೊಳ್ಳಲು ಮುಕ್ತ ಅವಕಾಶ ಇದೆ. ಪಂದ್ಯಗಳನ್ನು ಇಲ್ಲಿ ನಡೆಸುವುದಾದರೂ ಎಲ್ಲ ವ್ಯವಸ್ಥೆ ಮಾಡುವುದಾಗಿ‘ ಭಾರತ ತಂಡದ ಮಾಜಿ ನಾಯಕರೂ ಆಗಿರುವ ಅಜರುದ್ದೀನ್ ಟ್ವೀಟ್ ಮಾಡಿದ್ದಾರೆ. ಈ ಸಲದ ಐಪಿಎಲ್ ವೇಳಾಪಟ್ಟಿಯಲ್ಲಿ ಹೈದರಾಬಾದ್ ನಗರವನ್ನು ಕಾಯ್ದಿಟ್ಟ ತಾಣವಾಗಿ ಗುರುತಿಸಲಾಗಿದೆ.

ಮುಂಬೈನಲ್ಲಿ ಈಗಾಗಲೇ ಒಂಬತ್ತು ಸಾವಿರಕ್ಕೂ ಹೆಚ್ಚು ಹೊಸ ಕೋವಿಡ್ ಪ್ರಕರಣಗಳು ದಾಖಲಾಗಿವೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಮುಂಬೈ ಸೇರಿದಂತೆ ಮಹಾರಾಷ್ಟ್ರದ ಕೆಲವು ನಗರಗಳಲ್ಲಿ ಭಾಗಶಃ ಲಾಕ್‌ಡೌನ್ ಹಾಕುವ ಸಾಧ್ಯತೆ ಇದೆ.

‘ಲಾಕ್‌ಡೌನ್ ಇದ್ದರೂ ಕೂಡ, ತಂಡಗಳು ಬಯೋಬಬಲ್ ವಾತಾವರಣದಲ್ಲಿರುತ್ತವೆ. ಪಂದ್ಯಗಳಿಗೆ ಪ್ರೇಕ್ಷಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಆದ್ದರಿಂದ ಮುಂಬೈನಲ್ಲಿ ಪೂರ್ವನಿರ್ಧರಿತ ವೇಳಾಪಟ್ಟಿಯಂತೆ ಪಂದ್ಯಗಳು ನಡೆಯುವ ಭರವಸೆ ಇದೆ. ಇದೇ 10ರಂದು ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ‘ ಎಂದು ಬಿಸಿಸಿಐ ಪದಾಧಿಕಾರಿಯೊಬ್ಬರು ಹೇಳಿದ್ದಾರೆ.

ರೋಯಿಂಗ್ ಸ್ಪರ್ಧಿಗಳಿಗೆ 2ನೇ ಡೋಸ್ ಲಸಿಕೆ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಅರ್ಹತಾ ಟೂರ್ನಿಗೆ ಸಜ್ಜಾಗುತ್ತಿರುವವರು ಸೇರಿ ಭಾರತದ 35 ರೋಯಿಂಗ್ ಪಟುಗಳಿಗೆ ಕೋವಿಡ್–19 ಲಸಿಕೆಯ ಎರಡನೇ ಡೋಸ್ ನೀಡಲಾಯಿತು.

ಸ್ಪರ್ಧಿಗಳು ಮಾತ್ರವಲ್ಲದೆ ಕೆಲವು ರೋಯಿಂಗ್ ಕೋಚ್‌ಗಳು ಹಾಗೂ ನೆರವು ಸಿಬ್ಬಂದಿ ಕೂಡ ಪುಣೆಯ ಆರ್ಮಿ ಸ್ಪೋರ್ಟ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಶನಿವಾರ ಲಸಿಕೆ ಹಾಕಿಸಿಕೊಂಡರು.

‘35 ಸ್ಪರ್ಧಿಗಳು, ಕೆಲವು ಕೋಚ್‌ಗಳು ಮತ್ತು ನೆರವು ಸಿಬ್ಬಂದಿ ಪುಣೆಯ ಎಎಸ್‌ಐನಲ್ಲಿ ಎರಡನೇ ಡೋಸ್ ಲಸಿಕೆ ಸ್ವೀಕರಿಸಿದ್ದಾರೆ‘ ಎಂದು ಭಾರತ ರೋಯಿಂಗ್ ಫೆಡರೇಷನ್‌ನ ಅಧ್ಯಕ್ಷ ರಾಜಲಕ್ಷ್ಮಿ ಸಿಂಗ್ ದೇವ್ ಭಾನುವಾರ ಹೇಳಿದ್ದಾರೆ.

ಟೋಕಿಯೊದಲ್ಲಿ ಮೇ 5ರಿಂದ 7ರವರೆಗೆ ನಡೆಯಲಿರುವ ವಿಶ್ವ ರೋಯಿಂಗ್ ಏಷ್ಯಾ ಓಷೇನಿಯಾ ಅರ್ಹತಾ ಟೂರ್ನಿಯಲ್ಲಿ ಭಾಗವಹಿಸಲಿರುವ ಸ್ಪರ್ಧಿಗಳೂ ಲಸಿಕೆ ತೆಗೆದುಕೊಂಡವರಲ್ಲಿ ಸೇರಿದ್ದಾರೆ. ಆರ್ಚರಿ ಪಟುಗಳಿಗೆ ಮುಂದಿನ ವಾರ ಎರಡನೇ ಡೋಸ್ ಲಸಿಕೆ ನೀಡಲಾಗುತ್ತದೆ.

ಸುದ್ದಿ 2 ನಿಮಿಷ

ಕೊಹ್ಲಿ ಫೌಂಡೇಷನ್‌ನಿಂದ ಪ್ರಾಣಿಗಳಿಗೆ ಆಶ್ರಯತಾಣ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಮುಂಬೈನ ಹೊರವಲಯದಲ್ಲಿ ಎರಡು ‘ಪ್ರಾಣಿಗಳ ಆಶ್ರಯತಾಣ‘ಗಳನ್ನು ನಿರ್ಮಿಸಲಿದ್ದಾರೆ. ಪ್ರಾಣಿಗಳ ಕ್ಷೇಮ ಯೋಜನೆಯ ಭಾಗವಾಗಿ ಅವರು ಈ ಕಾರ್ಯಕ್ಕೆ ಮುಂದಾಗಿದ್ದಾರೆ.

ಈ ಉದ್ದೇಶಕ್ಕಾಗಿ ಅವರು ಮುಂಬೈ ಮೂಲದ ಸರ್ಕಾರೇತರ ಸಂಘಟನೆಗಳಾದ ‘ವಿವಾಲ್ಡೀಸ್ ಅನಿಮಲ್ ಹೆಲ್ತ್ ಮತ್ತು ಆವಾಜ್’ನೊಂದಿಗೆ ಕೈಜೋಡಿಸಿದ್ದಾರೆ. ಎರಡು ಆಶ್ರಯತಾಣಗಳು ಮಲಾಡ್ ಹಾಗೂ ಬೊಯಿಸರ್‌ನಲ್ಲಿ ನಿರ್ಮಾಣವಾಗಲಿದ್ದು, ಆವಾಜ್ ಸಂಘಟನೆ ಇವುಗಳ ನಿರ್ವಹಣೆ ಮಾಡಲಿದೆ. ಮಲಾಡ್‌ನ ಆಶ್ರಯತಾಣವು ತಾತ್ಕಾಲಿಕ ಪುನರ್ವಸತಿ ಕೇಂದ್ರವಾಗಿದ್ದು, ಗಾಯಗೊಂಡ ಪ್ರಾಣಿಗಳನ್ನು (ನಾಯಿ ಮತ್ತು ಬೆಕ್ಕುಗಳಂತಹ ಸಣ್ಣ ಪ್ರಾಣಿಗಳು) ಚೇತರಿಸಿಕೊಳ್ಳುವವ ರೆಗೆ ಇರಿಸಿಕೊಳ್ಳಲಾಗುತ್ತದೆ. ಬೊಯಿಸರ್‌ನಲ್ಲಿ ಶಾಶ್ವತ ತಾಣ ನಿರ್ಮಾಣವಾಗಲಿದೆ.

ಕೊಹ್ಲಿ ಇದಕ್ಕೆ ಆ್ಯಂಬುಲೆನ್ಸ್ ಸೇವೆಯನ್ನೂ ಒದಗಿಸುತ್ತಿದ್ದಾರೆ.

‘ಮುಂಬೈನಲ್ಲಿ ಆಶ್ರಯರಹಿತ ಪ್ರಾಣಿಗಳಿಗೆ ಸುರಕ್ಷಿತ ತಾಣ ನಿರ್ಮಿಸುವುದು ನಮ್ಮ ಕನಸಾಗಿತ್ತು. ವಿವಾಲ್ಡೀಸ್ ಹಾಗೂ ಆವಾಜ್‌ನ ಸಹಭಾಗಿತ್ವದೊಂದಿಗೆ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದಕ್ಕೆ ಖುಷಿಯಿದೆ. ಸಮಾನ ಮನಸ್ಕರೊಂದಿಗೆ ಸೇರಿ ಈ ಪ್ರಾಣಿಗಳಿಗೆ ನೆರವಾಗುತ್ತಿದ್ದೇವೆ‘ ಎಂದು ಕೊಹ್ಲಿ ಹೇಳಿದ್ದಾರೆ.



ಪ್ರಮೋದ್ ಭಗತ್‌ಗೆ ಚಿನ್ನ ‘ಡಬಲ್’

ದುಬೈ (ಪಿಟಿಐ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಭಾರತದ ಪ್ರಮೋದ್ ಭಗತ್ ಅವರು ದುಬೈ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್‌ಗಳಲ್ಲಿ ಚಿನ್ನದ ಪದಕ ಗೆದ್ದರು.

ಭಾನುವಾರ ನಡೆದ ಎಸ್‌ಎಲ್–4 ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಪ್ರಮೋದ್ 21-17, 21-18ರಿಂದ ನಿತೇಶ್ ಕುಮಾರ್ ಅವರನ್ನು ಮಣಿಸಿದರು.

ಮನೋಜ್ ಸರ್ಕಾರ್ ಜೊತೆಗೂಡಿದ ಪ್ರಮೋದ್ ಅವರು ಎಸ್‌ಎಲ್4–ಎಸ್‌ಎಲ್3 ವಿಭಾಗದ ಡಬಲ್ಸ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ 21-18, 21-16ರಿಂದ ಭಾರತದ ಸುಕಾಂತ್ ಕದಂ–ನಿತೇಶ್ ಕುಮಾರ್ ಜೋಡಿಯನ್ನು ಸೋಲಿಸಿದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ಪಲಕ್ ಕೊಹ್ಲಿ ಜೊತೆಗೂಡಿದ ಪ್ರಮೋದ್ ಕಂಚಿನ ಪದಕ ಗೆದ್ದುಕೊಂಡರು. ಎಸ್‌ಎಲ್3 ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ 15-21, 6-21ರಿಂದ ಫ್ರಾನ್ಸ್‌ನ ಲೂಕಾಸ್ ಮಾಜುರ್ ಅವರಿಗೆ ಸೋತ ಸುಕಾಂತ್ ಕದಂ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ಶೂಟಿಂಗ್ ಕೋಚ್ ಸಂಜಯ್ ನಿಧನ

ಮುಂಬೈ (ಪಿಟಿಐ): ಭಾರತದ ಖ್ಯಾತ ಶೂಟಿಂಗ್ ಕೋಚ್ ಸಂಜಯ್ ಚಕ್ರವರ್ತಿ (79) ಶನಿವಾರ ರಾತ್ರಿ ನಿಧನರಾದರು. 2012ರ ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಗಗನ್ ನಾರಂಗ್, ಅಂಜಲಿ ಭಾಗವತ್ ಸೇರಿದಂತೆ ಹಲವು ಪ್ರಮುಖ ಶೂಟರ್‌ಗಳಿಗೆ ಅವರು ತರಬೇತಿ ನೀಡಿದ್ದರು.

ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತರಾಗಿದ್ದ ಸಂಜಯ್, ಹಲವು ಅಂತರರಾಷ್ಟ್ರೀಯ ಮಟ್ಟದ ಶೂಟರ್‌ಗಳನ್ನು ರೂಪಿಸಿದ್ದರು.

‘ಸಂಜಯ್ ಚಕ್ರವರ್ತಿ ಅವರು ದೀರ್ಘಕಾಲ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಲ್ಲಿ ತರಬೇತಿ ಪಡೆದ ಅನೇಕರು ರಾಜೀವ್ ಗಾಂಧಿ ಖೇಲ್‌ರತ್ನ ಹಾಗೂ ಅರ್ಜುನ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಅವರ ಆತ್ಮಕ್ಕೆ ದೇವರು ಶಾಂತಿ ಕರುಣಿಸಲಿ‘ ಎಂದು ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ಹೇಳಿಕೆಯಲ್ಲಿ ತಿಳಿಸಿದೆ.

ಸಂಜಯ್ ಅವರ ನಿಧನದ ಸುದ್ದಿಯನ್ನು ಟ್ವಿಟರ್ ಮೂಲಕ ಮೊದಲು ಬಹಿರಂಗಪಡಿಸಿದ್ದು ಒಲಿಂಪಿಯನ್ ಶೂಟರ್ ಜಾಯದೀಪ್ ಕರ್ಮಾಕರ್.

ಮಹಿಳಾ ಕಾಮೆಂಟೆಟರ್ ಚಂದ್ರಾ ನಾಯ್ಡು ಇನ್ನಿಲ್ಲ

ಇಂದೋರ್ (ಪಿಟಿಐ): ಭಾರತ ಟೆಸ್ಟ್ ಕ್ರಿಕೆಟ್ ತಂಡದ ಪ್ರಪ್ರಥಮ ನಾಯಕ ಕರ್ನಲ್ ಸಿ.ಕೆ. ನಾಯ್ಡು ಅವರ ಪುತ್ರಿ ಮತ್ತು ಭಾರತದ ಪ್ರಥಮ ಮಹಿಳಾ ಕ್ರಿಕೆಟ್ ಕಾಮೆಂಟೆಟರ್ ಚಂದ್ರಾ ನಾಯ್ಡು (88) ಭಾನುವಾರ ನಿಧನರಾದರು.

ಕಳೆದ ಕೆಲವು ವರ್ಷಗಳಿಂದ ಅವರ ಆರೋಗ್ಯ ಹದಗೆಟ್ಟಿತ್ತು ಎಂದು ಚಂದ್ರಾ ಅವರ ಸಹೋದರ ಸಂಬಂಧಿ, ಮಾಜಿ ಕ್ರಿಕೆಟಿಗ ವಿಜಯ್ ನಾಯ್ಡು ತಿಳಿಸಿದ್ದಾರೆ.

ಇಂದೋರ್‌ನ ಮನೋರಮಾಗಂಜ್‌ನ ಅಪಾರ್ಟ್‌ಮೆಂಟ್ ಒಂದರಲ್ಲಿ ಚಂದ್ರಾ ಅವರು ವಾಸವಾಗಿದ್ದರು. ಹೋಳ್ಕರ್ ಮೈದಾನದಲ್ಲಿ 1977ರಲ್ಲಿ ನಡೆದಿದ್ದ ಬಾಂಬೆ ಮತ್ತು ಎಂಸಿಸಿ ನಡುವಣ ಪಂದ್ಯಕ್ಕೆ ಬಾನುಲಿಯಲ್ಲಿ ಚಂದ್ರಾ ನಾಯ್ಡು ಮೊದಲ ಬಾರಿಗೆ ಕಾಮೆಂಟ್ರಿ ಮಾಡಿದ್ದರು.

ಚಂದ್ರಾ ನಾಯ್ಡು –ಪ್ರಜಾವಾಣಿ ಚಿತ್ರ

1982ರಲ್ಲಿ ಅವರು ಲಾರ್ಡ್ಸ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಣ ನಡೆದಿದ್ದ ಐಸಿಸಿ ಸುವರ್ಣಮಹೋತ್ಸವ ಟೆಸ್ಟ್ ಪಂದ್ಯವನ್ನು ವೀಕ್ಷಿಸಲು ಆಹ್ವಾನಿತರಾಗಿದ್ದರು. ಅಲ್ಲಿ ಅವರು ಕ್ರಿಕೆಟ್ ಉಪನ್ಯಾಸ ಕೂಡ ನೀಡಿದ್ದರು. ಆದರೆ ದೀರ್ಘ ಕಾಲದ ವರೆಗೆ ಅವರು ಕಾಮೆಂಟ್ರಿ ಮಾಡಲಿಲ್ಲ.

ಇಲ್ಲಿಯ ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸಿದ್ದರು. ತಂದೆಯ ಸಾಧನೆಗಳ ಕುರಿತು ‘ಸಿ.ಕೆ. ನಾಯ್ಡು: ಎ ಡಾಟರ್ ರಿಮೆಂಬರ್ಸ್’ ಎಂಬ ಪುಸ್ತಕವನ್ನೂ ಬರೆದಿದ್ದಾರೆ.

‘ಮಹಿಳಾ ಕಾಮೆಂಟ್ರಿಯ ಪ್ರಥಮ ಸಾಧಕಿ ಚಂದ್ರಾ. ಮಧ್ಯಪ್ರದೇಶದಲ್ಲಿ ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ಮಹತ್ವದ ಕಾಣಿಕೆಯನ್ನೂ ನೀಡಿದ್ದಾರೆ. ಅವರು ಹಲವು ಬಾರಿ ತಂಡದೊಂದಿಗೆ ಪ್ರಯಾಣಿಸುತ್ತಿದ್ದರು. ಆಟಗಾರ್ತಿಯರನ್ನು ಚೆನ್ನಾಗಿ ಆಡುವಂತೆ ಪ್ರೇರೇಪಿಸುತ್ತಿದ್ದರು’ ಎಂದು ಬಿಸಿಸಿಐ ಮಾಜಿ ಕಾರ್ಯದರ್ಶಿ ಸಂಜಯ್ ಜಗದಾಳೆ ಸ್ಮರಿಸಿದ್ದಾರೆ.

ದಾಖಲೆ ಬರೆದ ಆಸ್ಟ್ರೇಲಿಯಾ

ಮೌಂಟ್ ಮಾಂಗನೂಯಿ(ಎಪಿ): ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡವು ಸತತ 22 ಅಂತರ ರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ ಗೆಲುವು ಸಾಧಿಸುವ ಮೂಲಕ ರಿಕಿ ಪಾಂಟಿಂಗ್ ನೇತೃತ್ವದ ತಂಡ ಸ್ಥಾಪಿಸಿದ್ದ ದಾಖಲೆಯನ್ನು ಅಳಿಸಿ ಹಾಕಿದೆ.

ನ್ಯೂಜಿಲೆಂಡ್ ತಂಡದ ಎದುರು ಭಾನುವಾರ ನಡೆದ ಪಂದ್ಯದಲ್ಲಿ ಆರು ವಿಕೆಟ್‌ಗಳ ಗೆಲುವು ಸಾಧಿಸುವುದರೊಂದಿಗೆ ಆಸ್ಟ್ರೇಲಿಯಾ ಮಹಿಳೆಯರು ಈ ಸಾಧನೆ ಮಾಡಿದರು. 2003ರಲ್ಲಿ ಪಾಂಟಿಂಗ್ ನಾಯಕತ್ವದ ಆಸ್ಟ್ರೇಲಿಯಾ ಸತತ 21 ಪಂದ್ಯಗಳಲ್ಲಿ ವಿಜಯಪತಾಕೆ ಹಾರಿಸಿತ್ತು. ಸದರ್ನ್ ಸ್ಟಾರ್ಸ್ ಎಂದು ಕರೆಯಲಾಗುವ ಆಸ್ಟ್ರೇಲಿಯಾ ಮಹಿಳಾ ತಂಡ 2007ರ ಅಕ್ಟೋಬರ್‌ನಿಂದ ಒಂದೂ ಪಂದ್ಯ ಸೋತಿಲ್ಲ.

ಅಂಧರ ಕ್ರಿಕೆಟ್: ಪಾಕ್‌ಗೆ ಸರಣಿ

ಬೆಂಗಳೂರು: ಪಾಕಿಸ್ತಾನ ಅಂಧರ ಕ್ರಿಕೆಟ್ ತಂಡ ಟಿ20 ತ್ರಿಕೋನ ಸರಣಿ ಗೆದ್ದುಕೊಂಡಿತು. ಬಾಂಗ್ಲಾದೇಶದ ಢಾಕಾದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ ತಂಡವನ್ನು ಪಾಕಿಸ್ತಾನ 62 ರನ್‌ಗಳಿಂದ ಮಣಿಸಿತು.

ಪಂದ್ಯವನ್ನು 15 ಓವರ್‌ಗಳಿಗೆ ಸೀಮಿತಗೊಳಿಸಲಾಗಿತ್ತು. ನಾಯಕ ನಿಸಾರ್ ಅಲಿ (ಔಟಾಗದೆ 69) ಹಾಗೂ ಜಾಫರ್ ಇಕ್ಬಾಲ್ (48) ಅವರ ಆಟದ ಬಲದಿಂದ ಪಾಕಿಸ್ತಾನ 3 ವಿಕೆಟ್‌ಗೆ 174 ರನ್ ಗಳಿಸಿತು. ನಾಯಕ ಅಜಯ್ ಕುಮಾರ್ ರೆಡ್ಡಿ 2 ವಿಕೆಟ್ ಗಳಿಸಿದರು.

ಗುರಿ ಬೆನ್ನತ್ತಿದ ಭಾರತಕ್ಕೆ 15 ಓವರ್‌ಗಳಲ್ಲಿ ಏಳು ವಿಕೆಟ್ ಕಳೆದುಕೊಂಡು 112 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಸುನಿಲ್ ರಮೇಶ್ (39), ಪಂಕಜ್ ಭುಯೆ (23) ಹಾಗೂ ಡಿ.ವೆಂಕಟೇಶ್ವರ ರಾವ್ (22) ಅವರ ಪ್ರಯತ್ನ ಗೆಲುವಿಗೆ ಸಾಕಾಗಲಿಲ್ಲ. ಸಾಜಿದ್ ನವಾಜ್ ಎರಡು ವಿಕೆಟ್ ಕಿತ್ತರು.

ರೈಲ್ವೆಗೆ ಮಹಿಳಾ ಏಕದಿನ ಟ್ರೋಫಿ

ರಾಜ್‌ಕೋಟ್, ಗುಜರಾತ್ (ಪಿಟಿಐ): ಜಾರ್ಖಂಡ್ ಮಹಿಳಾ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿದ ರೈಲ್ವೇಸ್ ಮಹಿಳೆಯರು ರಾಷ್ಟ್ರೀಯ ಏಕದಿನ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು.

ಸಂಕ್ಷಿಪ್ತ ಸ್ಕೋರು: ಜಾರ್ಖಂಡ್: 50 ಓವರ್‌ಗಳಲ್ಲಿ 167 (ಇಂದ್ರಾಣಿ ರಾಯ್ 49, ದುರ್ಗಾ ಮುರ್ಮು 31, ಮಣಿ ನಿಹಾರಿಕಾ 39; ಮೇಘನಾ ಸಿಂಗ್ 22ಕ್ಕೆ2, ಏಕ್ತಾ ಬಿಷ್ಟ್ 33ಕ್ಕೆ2, ಪೂನಂ ಯಾದವ್ 26ಕ್ಕೆ1, ಸ್ನೇಹಾ ರಾಣಾ 33ಕ್ಕೆ3); **ರೈಲ್ವೇಸ್:** 37 ಓವರ್‌ಗಳಲ್ಲಿ 3ಕ್ಕೆ 169 (ಮೇಘನಾ ಸಿಂಗ್ 53, ಪೂನಂ ರಾವತ್ 59, ಸ್ನೇಹಾ ರಾಣಾ 34). **ಫಲಿತಾಂಶ:** ರೈಲ್ವೇಸ್‌ಗೆ 7 ವಿಕೆಟ್ ಗೆಲುವು; ಪ್ರಶಸ್ತಿ.

ಚೆಸ್: ಶರಣ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನ ಶರಣ್ ರಾವ್ ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿದ್ದ ರಾಜ್ಯ ಮುಕ್ತ ಚೆಸ್ ಚಾಂಪಿಯನ್‌ಷಿಪ್‌ನ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡರು.

ವೈಟ್‌ಫೀಲ್ಡ್‌ನ ವರ್ಜೀನಿಯಾ ಮಾಲ್‌ನಲ್ಲಿ ಭಾನುವಾರ ಕೊನೆಗೊಂಡ ಚಾಂಪಿಯನ್‌ಷಿಪ್‌ನಲ್ಲಿ ಶರಣ್ ಒಟ್ಟು ಎಂಟು ಪಾಯಿಂಟ್‌ಗಳೊಂದಿಗೆ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಬೆಂಗಳೂರಿನ ಓಜಸ್ ಕುಲಕರ್ಣಿ (2213 ಇಲೊ ರೇಟಿಂಗ್), ಪ್ರಚುರ (2126) ಮತ್ತು ಪಾರ್ಥಸಾರಥಿ (1992) ತಲಾ ಏಳೂವರೆ ಪಾಯಿಂಟ್‌ಗಳೊಂದಿಗೆ ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದರು.

ಅಗ್ರ ನಾಲ್ಕು ಸ್ಥಾನಗಳನ್ನು ಗಳಿಸಿದವರು ಕಾನ್ಪುರದಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಆಡಲು ಅರ್ಹತೆ ಗಳಿಸಿದ್ದಾರೆ.

ಸಂಜೆ ನಡೆದ ಸಮಾರಂಭದಲ್ಲಿ ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆಯ ಕಾರ್ಯದರ್ಶಿ ಹನುಮಂತ ಆರ್ ಪ್ರಶಸ್ತಿ ವಿತರಿಸಿದರು. ಉಪಾಧ್ಯಕ್ಷ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆಯ ಕಾರ್ಯದರ್ಶಿ ಚಿದಾನಂದ ಎ, ಮುಖ್ಯ ಆರ್ಬಿಟರ್ ಮುರುಘಸುಂದರಂ ಇದ್ದರು.

ಶರಣ್ ರಾವ್

ಏಳಕ್ಕೂ ಹೆಚ್ಚು ಪಾಯಿಂಟ್ ಗಳಿಸಿದವರು: ಶರಣ್ ರಾವ್ (ಮಂಗಳೂರು–8 ಪಾಯಿಂಟ್ಸ್), ಓಜಸ್ ಕುಲಕರ್ಣಿ (ಬೆಂಗಳೂರು–7.5), ಪ್ರಚುರ (ಬೆಂಗಳೂರು–7.5), ಪಾರ್ಥಸಾರಥಿ (ಬೆಂಗಳೂರು–7.5), ಸುದರ್ಶನ್ ಭಟ್ (ಬೆಂಗಳೂರು–7), ಬಾಲಕಿಶನ್ ಎ (ಬೆಂಗಳೂರು–7), ರಕ್ಷಿತ್ ಶ್ರೀನಿವಾಸನ್ (ಬೆಂಗಳೂರು–7), ದ್ರಿಕ್ಷು ವಸಂತ್ (ಮಂಗಳೂರು–7), ಅರವಿಂದ ರಾಮನಾಥ ಅಯ್ಯರ್ (ಬೆಂಗಳೂರು–7), ಅದ್ವೈತ್ ರತ್ನಾಕರ್ (ಬೆಂಗಳೂರು–7), ನಾರಾಯಣ ಅಯ್ಯಂಗಾರ್ (ಬೆಂಗಳೂರು–7).

ಶೂಟಿಂಗ್: ಮನು ಭಾಕರ್ 3 ವಿಭಾಗದಲ್ಲಿ ಸ್ಪರ್ಧೆ

ನವದೆಹಲಿ (ಪಿಟಿಐ): ಯುವ ಶೂಟರ್ ಮನು ಭಾಕರ್ ಅವರು ಟೋಕಿಯೊ ಒಲಿಂಪಿಕ್ಸ್‌ನ ಮೂರು ವಿಭಾಗಗಳಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಕೂಟಕ್ಕೆ ಭಾರತ ಶೂಟಿಂಗ್ ತಂಡವನ್ನು ಭಾನುವಾರ ಪ್ರಕಟಿಸಲಾಗಿದೆ.

ಮಹಿಳೆಯರ 25 ಹಾಗೂ 10 ಮೀ. ಏರ್ ಪಿಸ್ತೂಲ್ ಹಾಗೂ 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಮನು ಭಾಕರ್ ಸ್ಪರ್ಧಿಸಲಿದ್ದಾರೆ. ಕಳೆದ ತಿಂಗಳು ನಡೆದ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಗೆದ್ದ ಚಿಂಕಿ ಯಾದವ್ ಅವರ 25 ಮೀ. ಪಿಸ್ತೂಲ್ ವಿಭಾಗದ ಕೋಟಾವನ್ನು ಅಂಜುಮ್ ಮೌದ್ಗಿಲ್‌ಗೆ ನೀಡಲು ರಾಷ್ಟ್ರೀಯ ಆಯ್ಕೆ ಸಮಿತಿಯು ನಿರ್ಧರಿಸಿತು. 50 ಮೀ. ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ತೇಜಸ್ವಿನಿ ಜೊತೆಗೂಡಿ ಅಂಜುಮ್ ಸ್ಪರ್ಧಿಸಲಿದ್ದಾರೆ.

ಪಾಕ್‌ಗೆ ಸೋಲು

ಜೊಹಾನ್ಸ್‌ಬರ್ಗ್: ಆರಂಭಿಕ ಬ್ಯಾಟ್ಸ್‌ಮನ್ ಫಕ್ರ್ ಜಮಾನ್ (193; 155 ಎಸೆತ, 18 ಬೌಂಡರಿ, 10 ಸಿಕ್ಸರ್) ಕೊನೆಯ ವರೆಗೂ ನಡೆಸಿದ ಹೋರಾಟಕ್ಕೆ ಫಲ ಸಿಗಲಿಲ್ಲ. ಭಾನುವಾರ ರಾತ್ರಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯ ಪಂದ್ಯದಲ್ಲಿ ಪಾಕಿಸ್ತಾನ 17 ರನ್‌ಗಳಿಂದ ಸೋತಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 6ಕ್ಕೆ 341 (ಕ್ವಿಂಟನ್ ಡಿ ಕಾಕ್ 80, ತೆಂಬಾ ಬವುಮಾ 92, ರಸಿ ವ್ಯಾನ್ ಡೆರ್ ಡುಸೆನ್ 60, ಡೇವಿಡ್ ಮಿಲ್ಲರ್ ಔಟಾಗದೆ 50); ಪಾಕಿಸ್ತಾನ: 50 ಓವರ್‌ಗಳಲ್ಲಿ 9ಕ್ಕೆ 324 (ಫಕ್ರ್ ಜಮಾನ್ 193, ಬಾಬರ್ ಆಜಂ 31).

ಮಾಜಿ ಟೇಬಲ್ ಟೆನಿಸ್ ಪಟು ಸುಹಾಸ್ ಕುಲಕರ್ಣಿ ನಿಧನ

ಮುಂಬೈ (ಪಿಟಿಐ): ಭಾರತದ ಮಾಜಿ ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಆಟಗಾರ ಸುಹಾಸ್ ಕುಲಕರ್ಣಿ (68) ಥಾಣೆಯಲ್ಲಿ ಭಾನುವಾರ ನಿಧನರಾದರು.

ಅವರಿಗೆ ತಾಯಿ, ಪತ್ನಿ ಮತ್ತು ಪುತ್ರಿ ಇದ್ದಾರೆ.

ಸುಹಾಸ್ ಅವರಿಗೆ ಕೋವಿಡ್–19 ದೃಢಪಟ್ಟಿದ್ದು, ಚಿಕಿತ್ಸೆಗಾಗಿ ಈ ಮೊದಲು ಕೌಸಲ್ಯ ಆಸ್ಪತ್ರೆಗೆ ದಾಖಲಾಗಿದ್ದರೆಂದು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಟೇಬಲ್ ಟೆನಿಸ್ ಕ್ರೀಡೆಗೆ ವಿದಾಯ ಹೇಳಿದ ಬಳಿಕ ಸುಹಾಸ್ ಅವರು ತರಬೇತಿಯಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಮಾಸ್ಟರ್ಸ್ ಟೂರ್ನಿಗಳಲ್ಲಿ ನಿರಂತರವಾಗಿ ಸ್ಪರ್ಧಿಸುತ್ತಿದ್ದರು.

2019ರಲ್ಲಿ ಇಂದೋರ್‌ನಲ್ಲಿ ನಡೆದ ರಾಷ್ಟ್ರೀಯ ಮಾಸ್ಟರ್ಸ್ ಟಿಟಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರು.